# ಅಧ್ಯಯನ 12 Study XII

# ನೂತನ ಸೃಷ್ಟಿಯ ದಾಂಪತ್ಯ ಮತ್ತು ಇನ್ನಿತರ ಸೌಕರ್ಯಗಳು ಹಾಗೂ ಅವಶ್ಯ ಕರ್ತವ್ಯಗಳು

## MARITAL AND OTHER PRIVILEGES AND OBLIGATIONS OF THE NEW CREATION

**ನೂತನ ಸೃಷ್ಟಿಗೆ ಅವಶ್ಯವಾದ ಅನೇಕ ಕರ್ತವ್ಯಗಳು – "ಕ್ರಿಸ್ತ ಯೇಸುವಿನಲ್ಲಿ ಎಲ್ಲರೂ ಒಂದೇ" – ಸ್ವೇಚ್ಛೆಯ ಜತೆಗಾರಿಕೆ ಸೂಚಕವಾಗಿಲ್ಲ – ದೈವಿಕ ಕ್ರಮದಲ್ಲಿ ಸ್ತ್ರೀ ಪುರುಷರು – ಪುರುಷನ ಯಜಮಾನಿಕೆ ಬಲತ್ಕಾರವಾದುದಲ್ಲ – ನೂತನ ಸೃಷ್ಟಿಯ ವಿವಾಹ – ದಾಂಪತ್ಯದ ಅನ್ಯೋನ್ಯತೆಯಲ್ಲಿ ವಿವಿಧ ಪರಿಸ್ಥಿತಿಗಳಲ್ಲಿ ನೂತನ ಸೃಷ್ಟಿಗೆ ಬುದ್ಧಿಮಾತುಗಳು – ಪರಿತ್ಯಾಗದ ಘಟನೆಗಳಲ್ಲಿ – ಮನಸ್ಸಾಕ್ಷಿಯೇ ಅಂತಿಮ ಪರೀಕ್ಷೆ – ನಪುಂಸಕರು, ಕನ್ಯೆಯರು, ಬ್ರಹ್ಮಚರ್ಯೆ –"ಕರ್ತನಲ್ಲಿ ಮಾತ್ರವೇ"– ತಂದೆ ತಾಯಿಗಳ ಕರ್ತವ್ಯಗಳು.**

**"ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು, ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂಬ ಬೇಧವಿಲ್ಲ (ಗಲಾತ್ಯ 3: 27,28)**

ನೂತನ ಸೃಷ್ಟಿಯು ಮೊದಲಲ್ಲಿ ಕೇವಲ ನೂತನ ಚಿತ್ತವನ್ನು ಪಡೆದವರನ್ನು ಮಾತ್ರವೇ ಒಳಗೊಂಡಿದ್ದು ಒಡಂಬಡಿಕೆಯ ಆದ್ಯಕರ್ತವ್ಯದಲ್ಲಿ ದೇವರಿಗೆ ಅವರ ನಿಷ್ಠೆಯು ರುಜುವಾತಾದರೆ ಮಾತ್ರವೇ ಅವರ ಪುನರುತ್ಥಾನದಲ್ಲಿ ಒಂದು ನೂತನವಾದ, ಸಮರ್ಪಕವಾದ, ಆತ್ಮಿಕ ದೇಹವು ಅವರಿಗೆ ವಾಗ್ದಾನ ಮಾಡಲ್ಪಟ್ಟಿದೆ. ಪ್ರೀತಿಯ ನಿಯಮವು ಎಲ್ಲದಕ್ಕಿಂತ ಮೊದಲಿಗೆ ಅವರನ್ನು ದೇವರಿಗೆ ಋಣಿಯಾಗಿಸುತ್ತದೆ ಮತ್ತು ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತಕ್ಕೆ ಹೃತ್ಪೂರ್ವಕವಾದ ವಿಧೇಯತೆಯನ್ನು ಸೂಚಿಸುತ್ತದೆ. ಅವರ ಎರಡನೆಯ ಹಂಗು ನೂತನ ಸೃಷ್ಟಿಯ ಇತರ ಸಹೋದರರುಗಳಿಗೆ ಒಳಿತನ್ನು ಮಾಡುವ ಬಗ್ಗೆಯಾಗಿದೆ. ಮೂರನೆಯ ಹಂಗೇನೆಂದರೆ ಅವಕಾಶ ದೊರೆತಾಗ ಮತ್ತು ಮೊದಲೆರಡು ಹಂಗುಗಳು ಅನುಮತಿಸುವಾಗ ಇತರರಿಗೂ ಒಳಿತನ್ನು ಮಾಡುವುದು. ಈ ನೂತನ ಸೃಷ್ಟಿ, ನೂತನ ಚಿತ್ತ ಇವುಗಳು ತನ್ನಷ್ಟಕ್ಕೇ ಕಾರ್ಯವೆಸಗಲು ಯೋಗ್ಯವಲ್ಲದಿರುವಾಗ್ಯೂ ಅದಕ್ಕೆ ತನ್ನದೇ ಆದ, ಪರವಾದ, ದೇಹದ ಚಿತ್ತಕ್ಕೆ ಮತ್ತು ಸ್ವಾಭಾವಿಕ ಮನಸ್ಸಿಗೆ ಅನುರೂಪವಾದ ಒಂದು ಮುಖ್ಯ ದೇಹವಿಲ್ಲವೆಂದಲ್ಲ. ಇದನ್ನು ತನ್ನ ಸ್ವತ್ತಾಗಿಯೂ, ಸ್ವಾಭಾವಿಕ ದೇಹದ ಸವಲತ್ತು ಮತ್ತು ಬಾಧ್ಯವನ್ನಾಗಿಯೂ ಅದು ಅನುಭವಿಸುತ್ತದೆ. ಅದರಲ್ಲಿ ಅದು ತಾತ್ಕಾಲಿಕವಾಗಿ ವಾಸಿಸಬೇಕಾಗಿದೆ ಮತ್ತು ಅದರ ಮೂಲಕ ಮಾತ್ರವೇ ತನ್ನನ್ನು ವ್ಯಕ್ತಪಡಿಸಿಕೊಳ್ಳ ಬಹುದಾಗಿದೆ.

ಮಾನವ ದೇಹವು ನಿರ್ದಿಷ್ಟವಾದ ಪ್ರತಿಯೊಂದರಲ್ಲಿಯೂ ಸಮರ್ಪಕವಾಗಿರಬಹುದಾದರೂ ನೂತನ ಚಿತ್ತವು ಇವುಗಳ ಉಪಯೋಗದ ಸಂಬಂಧದಲ್ಲಿ ಕಷ್ಟವನ್ನನುಭವಿಸುತ್ತದೆ. ಯಾಕೆಂದರೆ ಅವುಗಳು ಭೌತಿಕ ಮತ್ತು ಐಹಿಕವಾದವುಗಳಾಗಿವೆ. ಅವುಗಳನ್ನು ಲೌಕಿಕ ಪರಿಸ್ಥಿತಿಗಳಿಗನುಸಾರವಾಗಿ ಪಡೆಯಲಾಗಿದ್ದು ಅವುಗಳ ಆಕಾಂಕ್ಷೆ ಮತ್ತು ಹಂಬಲಗಳು ಎಷ್ಟೇ ನಿರ್ಮಲವೂ, ಶ್ರೇಷ್ಠವೂ ಆಗಿದ್ದರೂ ಅವುಗಳೂ ಲೌಕಿಕವಾದವುಗಳಾಗಿವೆ; ಇದೇ ಸಮಯದಲ್ಲಿ ನೂತನ ಸೃಷ್ಟಿಯ ಆಕಾಂಕ್ಷೆ ಮತ್ತು ಹಂಬಲಗಳು ಮೇಲಣ ಲೋಕದಿಂದ ಮಿತಿಮೀರಿದ ಉನ್ನತ ಮತ್ತು ಶ್ರೇಷ್ಠವಾದ ದೈವಿಕ ಸಂದೇಶಗಳಿಂದ ಪ್ರೇರಿತವಾಗಿವೆ. ನಮ್ಮ ಕರ್ತನಾದ ಯೇಸುಕ್ರಿಸ್ತನ ಬಗ್ಗೆಯೂ ಇದೇ ಪರಿಸ್ಥಿತಿಯಾಗಿ ಆತನ ದೇಹವು "ಪರಿಶುದ್ಧವೂ, ನಿರ್ದೋಷವಾಗಿಯೂ, ನಿಷ್ಕಳಂಕವಾಗಿಯೂ ಆಗಿದ್ದು ಪಾಪಿಗಳಲ್ಲಿ ಸೇರದೆ ಪ್ರತ್ಯೇಕತೆ ಹೊಂದಿದ್ದಾಗಿತ್ತು". ಹೀಗಿದ್ದಾಗ್ಯೂ ಆತನು ಒಡಂಬಡಿಕೆಯ ಅನುಸಾರವಾಗಿ ಆ ನೂತನ ಸ್ವಭಾವದಲ್ಲಿ ವೃದ್ಧಿಹೊಂದಿಕೊಳ್ಳುವುದಕ್ಕೆ ಅನುಗುಣವಾಗಿ ಮತ್ತು ಪುನರುತ್ಥಾನದಲ್ಲಿ ನೂತನ ದೇಹವನ್ನು ಪಡೆಯಲು ಸಿದ್ಧನಾಗಿ ತನ್ನ ಲೌಕಿಕತೆಯನ್ನು ದಾಟುವುದಕ್ಕೂ ಮತ್ತು ಅದನ್ನು ನೂತನ ಚಿತ್ತಕೆ ನಿವೇದಿಸುವುದಕ್ಕೂ, ಸಮರ್ಪಿಸುವುದಕ್ಕೂ ಮತ್ತು ವಶಪಡಿಸುವುದಕ್ಕೂ ಸಿದ್ಧನಾಗಿದ್ದನು. ಅದರ ಅನುರೂಪವಾದ ಸ್ವಾಭಾವಿಕ ಇಚ್ಛೆಗಳು, ಆಯ್ಕೆಗಳು ಮತ್ತು ಅಭಿಲಾಷೆಗಳು ಒಂದು ವೇಳೆ ತಂದೆಯ ಚಿತ್ತದೊಂದಿಗೆ, ತಂದೆಯ ವ್ಯವಸ್ಥೆಯೊಡನೆ, ತಂದೆಯ ದೈವಯುಕ್ತ ಮಹತ್ವಗಳೊಂದಿಗೆ ಘರ್ಷಣೆ ಮಾಡುವುದಾದಲ್ಲಿ ಅವುಗಳೆಲ್ಲವನ್ನೂ ತ್ಯಜಿಸಬೇಕು; ಇವುಗಳು ನೂತನ ಸೃಷ್ಟಿಯನ್ನು ಪಡಕೊಳ್ಳುವುದಕ್ಕಾಗಿ ಮತ್ತು ಮಹಿಮೆ ಹೊಂದುವುದಕ್ಕಾಗಿ ದೇವರ ಸಮತಲದಲ್ಲಿ ಮರಣದ ಪರ್ಯಂತ ಸಮರ್ಪಿಸುವುದನ್ನು ಸಹಾ ಇವು ಒಳಗೊಂಡಿವೆ.

ರಾಜವಂಶಯಾಜಕತ್ವದ ನೂತನಸೃಷ್ಟಿಯ ಅಡಿಯಲ್ಲಿ ಬರುವ ಸದಸ್ಯರು ಅಪರಿಪೂರ್ಣ ದೇಹವನ್ನು ಹೊಂದಿದ್ದು ಅವರ ಸಮರ್ಪಣೆಗಳು ದೇವರಿಂದ ಅಂಗೀಕಾರ ಹೊಂದುವುದಿಲ್ಲ. ಯಾಕೆಂದರೆ ಅವು ಕಳಂಕವೂ, ಪಾಪಭರಿತವೂ, ಅಸಮರ್ಪಕವೂ ಆಗಿದ್ದು ಎಲ್ಲದಕ್ಕಿಂತ ಮೊದಲು ಅವರ ಕರ್ತನಾದ ಯೇಸುಕ್ರಿಸ್ತನಿಂದ ನೀತಿನಿರ್ಣಯವನ್ನು ಹೊಂದಿಕೊಳ್ಳಬೇಕಾಗಿದೆ. ಆತನ ಪ್ರಾಯಶ್ಚಿತ್ತದ ಅರ್ಹತೆಯ ಮೇರೆಗೆ ಅವರ ಮರ್ತ್ಯ ದೇಹದ ಅಸಮರ್ಪಕತೆ ಮತ್ತು ಪಾಪಗಳು ಮರೆಯಾಗುತ್ತವೆ ಮತ್ತು ಇನ್ನು ಮುಂದೆ ಆರೋಪಣೆಗೆ ಒಳಪಡದು. ಈ ರೀತಿಯ ಲೆಕ್ಕಾಚಾರದ ಅರ್ಥದಲ್ಲಿ ಅವರ ದೇಹಗಳು ಸಮರ್ಪಣೆಗೆ ಯೋಗ್ಯ ವಾಗುತ್ತವೆ. ಅಪೋಸ್ತಲನು ಈ ನೀತಿನಿರ್ಣಯವನ್ನು ಹೀಗೆ ಸಾರಿ ತಿಳಿಸುತ್ತಾನೆ –"ಆದುದರಿಂದ ಸಹೋದರರೇ, ದೇವರ ಕನಿಕರವನ್ನು (ನಿಮ್ಮ ಪಾಪಗಳನ್ನು ಕ್ರಿಸ್ತ ನಂಬಿಕೆಯಿಂದ ಮರೆಮಾಡುವುದರ ಮೂಲಕ) ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ – ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವನ್ನಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು" (ರೋಮಾ. 12:1).

ನೀತಿನಿರ್ಣಯ ಹೊಂದಿದೆಯೆಂದು ನಾವು ನಂಬಿಕೊಂಡಿರುವ ಈ ದೇಹವು ಅರ್ಪಿತವಾದಾಗ ನಾವು ಪವಿತ್ರಾತ್ಮನಿಂದ ವ್ಯಕ್ತಿಗತವಾಗಿ ಮಾನವ ಸಮತಲದಲ್ಲಿಯಲ್ಲ, ಆತ್ಮೀಕ ಸಮತಲದಲ್ಲಿ ದೇವರ ಮಕ್ಕಳಾಗಿ ಜನಿಸುತ್ತೇವೆ. ಇದರಲ್ಲಿ ಪ್ರತಿಷ್ಠೆ ಹೊಂದಿದವರ ಚಿತ್ತವು ನೂತನಸೃಷ್ಟಿಯಾಗಿ ಅಂಗೀಕಾರಗೊಂಡು ಅದರ ಅಸ್ಥಿತ್ವವು ಪ್ರಾರಂಭಗೊಳ್ಳುತ್ತದೆ. ದೇವರಿಗೆ ಮತ್ತು ಮರ್ತ್ಯ ದೇಹವನ್ನು ಸಮರ್ಪಿಸುವ ಒಡಂಬಡಿಕೆಗೆ ಮತ್ತು ಅದರ ಹಿತಾಸಕ್ತಿಗಳಿಗೆ ನಿಷ್ಠೆಯಿಂದಿರುವ ಪ್ರಮಾಣದ ಮೇರೆಗೆ ಅದು ಏಳಿಗೆ ಹೊಂದಿಕೊಳ್ಳುತ್ತದೆ. ಈ ರೀತಿ ಯಜ್ಞವಾಗಿ ಸಮರ್ಪಿಸಲ್ಪಟ್ಟ ಮತ್ತು ಕ್ರಿಸ್ತನೊಂದಿಗೆ ಮರಣಹೊಂದಿತೆಂದು ಎಣಿಸಲ್ಪಟ್ಟ ಮರ್ತ್ಯ ದೇಹವು ನೂತನ ಚಿತ್ತದ (ಹೊಸ ಸೃಷ್ಟಿಯ) ಮೂಲಕ ಪುನರ್ಚೇತನ ಗೊಳ್ಳುವುದಲ್ಲದೆ, ಅದರಿಂದ ನಿಯಂತ್ರಣಗೊಂಡು ಉಳಿದ ಜೀವಿತವು ಪುನರುತ್ಥಾನಗೊಂಡ ಜೀವಿತವಾಗಿ ರೂಪಕಾತ್ಮಕಗೊಂಡಿತೆಂದು ಹೇಳಲಾಗುತ್ತದೆ. ನೂತನ ಸೃಷ್ಟಿ, ನೂತನ ಚಿತ್ತ, ಈ ಮರ್ತ್ಯದೇಹದಲ್ಲಿ ಮತ್ತು ಅದರ ಮೂಲಕವಾಗಿ ಕಾರ್ಯವಹಿಸಿ ಕ್ರಿಸ್ತನೊಂದಿಗೆ ಪುನರುತ್ಥಾನಗೊಂಡು ಮೇಲಿನವುಗಳನ್ನು ಬಯಸುತ್ತವೆಂದು ರೂಪಕಾತ್ಮಕವಾಗಿ ಧೃಢೀಕರಿಸುತ್ತದೆ. (ಕೊಲೊಸ್ಸೆ. 3:1 ನೋಡಿರಿ).

ಅಪೋಸ್ತಲನು ಈ ನೂತನ ಜೀವಿತವನ್ನು ಸಾಂಕೇತಿಕರೂಪವಾದ ಪುನರುತ್ಥಾನವೆಂದು ಸೂಚಿಸುತ್ತಾನೆ. ಇದರಲ್ಲಿ ನೂತನ ಸೃಷ್ಟಿಗಳು ತಮ್ಮ ಮರ್ತ್ಯದೇಹವನ್ನು ದೇವರ ಸೇವೆಯಲ್ಲಿ ಉಪಯೋಗಿಸುತ್ತಾರೆ. –"ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು" (ರೋಮಾ. 08:11). ಆದುದರಿಂದ, ಎಲ್ಲಿಯವರೆಗೆ ನೂತನ ಸೃಷ್ಟಿಗಳು ತಮ್ಮ ಮರ್ತ್ಯ ದೇಹದ ಮೇಲೆ ನಿಯಂತ್ರಣವನ್ನು ಪಡಕೊಳ್ಳುತ್ತಾರೆ ಮತ್ತು ಅವನ್ನು ಪ್ರಸ್ತುತ ಸಮಯದಲ್ಲಿ ಅತ್ಯುತ್ತಮವಾದುದು ಮತ್ತು ಆತ್ಮಿಕ ದೇಹದ ಒಂದು ಬದಲಿ ಮಾತ್ರ ಎಂದು ಪರಿಗಣಿಸುವುದಲ್ಲದೆ ಪುನರುತ್ಥಾನದ ಮುನ್ನ ಪಡಕೊಳ್ಳಲಾಗದು ಎಂದು ತಿಳಿದು ಉಪಯೋಗಿಸುತ್ತಾರೋ – ಅಲ್ಲಿಯವರೆಗೆ ನೂತನ ಸೃಷ್ಟಿಯ ಮರ್ತ್ಯದೇಹವನ್ನು ನಿರೀಕ್ಷೆಯಲ್ಲಿರುವ ಆತ್ಮೀಕ ದೇಹದ ಬದಲಿ ಎಂದು ಪರಿಗಣಿಸುವುದು ಅನುಚಿತವೆನಿಸದು.

ಆದರೆ, ಈ ಎಲ್ಲಾ ಎಣಿಕೆಗಳು ಆತ್ಮೀಕವಾಗಿವೆ ಮತ್ತು ಆತ್ಮನಿಂದ ಹುಟ್ಟಿದವರಿಗೆ ಮಾತ್ರವೇ ಇವುಗಳು ಅರ್ಥವಾಗುತ್ತವೆ ಮತ್ತು ಮೆಚ್ಚುಗೆ ಪಡೆಯುತ್ತವೆ. ಇವರೇ ಇದನ್ನು ದೈವಿಕ ದೃಷ್ಟಿಕೋನದಲ್ಲಿ ನೋಡಲು ಶಕ್ತರಾಗಿದ್ದಾರೆ. ಲೋಕದ ದೃಷ್ಟಿಯಲ್ಲಿ ಇವುಗಳೆಲ್ಲವೂ ಅಸತ್ಯ, ನಿಜವಾದುವುಗಳಲ್ಲ –"ಮೂರ್ಖತನದವುಗಳು". ಅವರು ಧ್ಯೇಯದಲ್ಲಿ, ಆಕಾಂಕ್ಷೆಯಲ್ಲಿ ಮತ್ತು ವರ್ತನೆಯಲ್ಲಿ ವ್ಯತ್ಯಾಸಗಳನ್ನು ಕಾಣುತ್ತಾರೆ. ಆದರೆ ಅವುಗಳನ್ನು ಯಾವರೀತಿಯಲ್ಲಿ ಅರ್ಥೈಸುವುದೆಂದು ಅವರಿಗೆ ತಿಳಿಯದು. ಅವರು ಅದನ್ನು ಒಂದು ಭ್ರಮೆ ಅಥವಾ ಉನ್ಮಾದವೆಂದು ಅಥವಾ "ನಿನಗಿಂತ ಪವಿತ್ರವಾದುದು" ಎಂಬ ಮನೋವೃತ್ತಿ ಅಥವಾ ಮಿಥ್ಯಾಚರಣೆ ಎಂದು ಪರಿಗಣಿಸುತ್ತಾರೆ. ಅಲ್ಲಿ ಕಂಡುಬರುವ ಈ ಎಲ್ಲವುಗಳೂ ನೂತನ ಸೃಷ್ಟಿಯ ವಿವಿಧ ಕಪಟತೆಗಳೆಂದು– ಗೋಧಿಯ ಬಾಹ್ಯರೂಪವುಳ್ಳ ಹಣಜಿಗಳಾಗಿ, ಹೃದಯದಲ್ಲಿ ಭಿನ್ನವಾದವುಗಳು ಎಂದು ನಾವು ಅಲ್ಲಗಳೆಯುವಂತಿಲ್ಲ. ನೂತನ ಸೃಷ್ಟಿಯವರನ್ನು ಈ ಲೋಕದವರು ಅರ್ಥಮಾಡಿಕೊಳ್ಳದಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ ಮತ್ತು ನಿರಾಶೆ ಪಡಬೇಕಾಗಿಲ್ಲ; ಆದರೆ ಅವರು ಆತನನ್ನು ಅರಿಯದಿರುವಂತೆ ನಮ್ಮನ್ನೂ ಅರಿಯುವುದಿಲ್ಲ ಎಂಬ ಆತನ ದೈವಿಕ ಅಭಿಪ್ರಾಯವನ್ನು ನೆನಪುಮಾಡಿಕೊಳ್ಳಬೇಕು. ಇದು ಆತನಲ್ಲಿಟ್ಟಿರುವ ನಮ್ಮ ಸ್ವಾಮಿನಿಷ್ಠೆಯ ಪರೀಕ್ಷೆಯಾಗಿದೆ. ನಾವು ಯೇಸುವಿನ ಹೆಜ್ಜೆಜಾಡಿನಲ್ಲಿ ನಡೆಯಬೇಕಾದರೆ ನಮ್ಮನ್ನು ಪ್ರೀತಿಸುವವರ ಅಗೌರವಕ್ಕೆ ಪಾತ್ರರಾಗಬೇಕು ಮತ್ತು ಅವರ ಗೌರವವು ಅಪೇಕ್ಷೆಗೆ ಅನುಚಿತವಾದುದಲ್ಲ. ಲೋಕದವರ ಪ್ರೀತಿ ಮತ್ತು ಗೌರವವೆಂದರೆ ದೇವರ ವೈರತ್ವವಿದ್ದಂತೆ, ಪ್ರತಿಷ್ಠೆಯ ಒಡಂಬಡಿಕೆಗೆ ನಿಷ್ಠೆಯಿಲ್ಲದಿರುವಿಕೆಯಾಗಿದೆ ಎಂಬ ಸತ್ಯವು ಈ ಸಂಗತಿಯನ್ನು ನೂತನ ಸೃಷ್ಟಿಗಳೊಂದಿಗೆ ನಿರ್ಧರಿಸುವುದಾಗಿದೆ:

### "ನನ್ನನ್ನು ತನ್ನ ರಕ್ತದಿಂದ ಕೊಂಡುಕೊಂಡ ನನ್ನ ಕರ್ತನಿಗೆ ನಾನು ಪ್ರಾಮಾಣಿಕನಾಗಿರತಕ್ಕದ್ದು"

### "To my Lord I must be true Who bought me with his blood"

ನಮ್ಮ ಪ್ರಸ್ತುತ ಅನ್ವೇಷಣೆಯು ಪ್ರತಿಷ್ಠೆ ಹೊಂದಿದ ದೇಹದ ಮೂಲಕ ಕಾರ್ಯನಿರ್ವಹಿಸುವ ನೂತನ ಸೃಷ್ಟಿಯ ವರ್ತನಾ ಕ್ರಮಕ್ಕೆ, ನೂತನ ಚಿತ್ತಕ್ಕೆ, ಇವುಗಳ ದೆಸೆಯಿಂದ ಇತರ ಮಾನವ ಜೀವಿಗಳೊಂದಿಗೆ ಲೋಕದ ಪ್ರಕಾರ ಇರಬೇಕಾದ ಕೆಲವು ಜವಾಬ್ದಾರಿಗಳೊಂದಿಗೆ ಸಂಬಂಧಿಸಿದೆ. ನೂತನ ಜೀವಿಯು ತನ್ನ ಮರ್ತ್ಯ ದೇಹದ ಈ ಹಂಗುಗಳನ್ನು ಪ್ರಾಮಾಣಿಕತೆಯಲ್ಲಿ, ಕರ್ತವ್ಯಗಳಲ್ಲಿ, ಆತನ ಮರ್ತ್ಯದೇಹದ ಮೇಲೆ ಪ್ರಾಪ್ತವಾಗುವ ಈ ಎಲ್ಲಾ ಜವಾಬ್ದಾರಿಗಳನ್ನು ಎಲ್ಲಾ ನ್ಯಾಯಸಂಗತಿಗಳನ್ನೂ ಗೌರವಿಸಬೇಕೆಂಬುದು ದೇವರ ಚಿತ್ತವಾಗಿದೆ. ಆದುದರಿಂದ ಪ್ರಸ್ತುತ ಪರಿಸ್ಥಿತಿಯಲ್ಲಿ ನೂತನ ಸೃಷ್ಟಿಗಳು ಎಲ್ಲಾ ಸಂಗತಿಗಳಲ್ಲಿ ಮನಬಂದಂತೆ ಮಾಡುವಂತಿಲ್ಲ. ಆದರೆ ಕೆಲವೊಂದು ಸಂಗತಿಗಳಲ್ಲಿ ದೈಹಿಕ ಹಂಗುಗಳಿಗೆ ಬದ್ಧರಾಗಿರುತ್ತಾರೆ. ಯಾಕೆಂದರೆ ದೈವಿಕ ಎಚ್ಚರಿಕೆ ಏನೆಂದರೆ –"ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದುದ್ದೋ ಅದನ್ನೇ ಯೋಚಿಸಿ ಸಾಧಿಸಿರಿ" (ರೋಮಾ. 12: 17) ಮತ್ತು "ಯಾವನಾದರೂ ಸ್ವಂತ ಜನರನ್ನು, ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ ಅವನು ಕ್ರಿಸ್ತ ನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ ಕಡೆಯಾದವನೂ ಆಗಿದ್ದಾನೆ" (1 ತಿಮೋ. 5:8) ಎಂಬಿವುಗಳೇ.

ಈ ಸತ್ಯ ಸಂಗತಿಗಳ ದೃಷ್ಟಿಕೋನದಲ್ಲಿ ನೂತನ ಚಿತ್ತದ ಮುಂದೆ ಒಂದು ಕ್ಲಿಷ್ಟಕರವಾದ ಕೆಲಸವಿದೆ ಎಂಬುದು ಸುಲಭವಾಗಿ ಗೋಚರವಾಗುತ್ತದೆ : (1) ದೇಹದ ಅರ್ಪಣೆಯ

ನೆರವೇರಿಕೆಯಲ್ಲಿ ದೇವರನ್ನು ಸಂಪ್ರೀತಿಗೊಳಿಸುವುದು (2) ದೈಹಿಕ ಸಂಬಂಧವಾದ ಯಾವ ಆಕಾಂಕ್ಷೆಗಳು ಮತ್ತು ಕೋರಿಕೆಗಳನ್ನು ಪರಿಗಣಿಸಬಹುದು ಮತ್ತು ಅವುಗಳ ವೆಚ್ಚವನ್ನು ನಿಗದಿಪಡಿಸಬಹುದೆಂದು ಸುಸ್ಪಷ್ಟವಾಗಿ ಗ್ರಹಿಸುವುದು. (3) ಜೀವನ ಪರ್ಯಂತ ಅಥವಾ ಮರಣ ಪರ್ಯಂತರವಾಗಿ ಮಾಡಿಕೊಂಡ ಒಡಂಬಡಿಕೆಗೆ ಚ್ಯುತಿ ಬಾರದಂತೆ ಎಷ್ಟರ ಮಟ್ಟಿಗೆ ಈ ರೀತಿಯ ಕೋರಿಕೆಗಳನ್ನೂ, ರಿಯಾಯಿತಿಗಳನ್ನು ಸಮರ್ಪಕವಾಗಿ ಮಾಡಬಹುದು – "ನೀವು ಶರೀರ ಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶಮಾಡುವವದಾದರೆ ಜೀವಿಸುವಿರಿ" (ರೋಮಾ. 8:13) ಅಂದರೆ ಅಂತ್ಯತಃ ಪುನರುತ್ಥಾನದಲ್ಲಿ ಪರಿಪೂರ್ಣತೆಯನ್ನು ಪಡಕೊಳ್ಳುವುದು. ಇಲ್ಲಿ ಮತ್ತೊಂದು ಕಷ್ಟವು ಉದ್ಭವಿಸುತ್ತದೆ. ಶರೀರವು ಸ್ವಯಿಚ್ಛೆಯಿಂದ ಮರಣಿಸುವುದಿಲ್ಲ. ಚಿತ್ತದ, ಮನಸ್ಸಿನ, ಹೊಸ ಸೃಷ್ಟಿಯ ಮೂಲಕವಾಗಿ ಅದನ್ನು ಸಾಯಿಸಬೇಕಾಗುತ್ತದೆ: ಹೀಗಿರುವುದರಿಂದ ಕೆಲವೊಂದು ರಿಯಾಯಿತಿಯನ್ನು ಮಾಡಬೇಕಾಗಿದೆ ಎಂದು ಕಂಡುಕೊಂಡು, ದೇವರ ಚಿತ್ತಾನುಸಾರವಾಗಿ ಈ ರಿಯಾಯಿತಿಯ ಮೂಲಕ ಕೆಲವೊಂದು ಪ್ರಯೋಜನಗಳನ್ನು ಪಡೆಯಲು ದೇಹವು ಹೊಂದಿಕೊಳ್ಳುತ್ತದೆ ಮತ್ತು ಅಗತ್ಯಗಳಿಗೂ ಹೆಚ್ಚಿನ ರಿಯಾಯಿತಿ ಮಾತ್ರವಲ್ಲದೆ ಈ ದೆಸೆಯಲ್ಲಿ ಯಾವುದೇ ಹಂಗು ಇಲ್ಲದ ಸ್ವಾತಂತ್ರ್ಯ ಮತ್ತು ಹಕ್ಕುಗಳಿಗಾಗಿ ಒತ್ತಾಯಿಸುತ್ತದೆ. ಇವುಗಳು ಒಡಂಬಡಿಕೆಯ ತ್ಯಾಗಗಳ ಮಧ್ಯೆ ಪ್ರವೇಶಿಸುವುದಾಗಿವೆ.

ಕೆಲವೊಮ್ಮೆ ಪಾಪಗಳನ್ನು ಕ್ಷಮಿಸುವ ಮತ್ತು ಕೆಲವೊಮ್ಮೆ ತ್ಯಾಗಗಳನ್ನು ತಡೆಗಟ್ಟುವ ನಮ್ಮ ಮರ್ತ್ಯದೇಹದ ಈ ಸಾಹಸಗಳು ನೂತನ ಸೃಷ್ಟಿಗಳಲ್ಲಿ ಆಗಾಗ ಗಡಿಬಿಡಿಯನ್ನುಂಟು ಮಾಡುವುದಾಗಿದೆಯೇ ಹೊರತು ಖಚಿತವಾಗಿ ಸಂಭವಿಸುವ ತಾತ್ಕಾಲಿಕ ಅಡಚಣೆಗಳನ್ನಲ್ಲ. ಇದು ಆತನು ಕ್ರಮೇಣವಾಗಿ ತನ್ನ ಸ್ವಂತ ಶರೀರದ ಕಪಟತೆ ಮತ್ತು ಬಲಹೀನತೆಗಳನ್ನು ಅರಿತು ಅನುಕ್ರಮ ವಾಗಿ ಮೇಲಿನಿಂದ ಬರುವ ಕೃಪೆ ಮತ್ತು ಜ್ಞಾನದಲ್ಲಿ ಬೆಳೆದು ತನ್ನ ಶರೀರವನ್ನು ಹೆಚ್ಚು ಹೆಚ್ಚಾಗಿ ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವುದರಲ್ಲಿ ಪ್ರವೀಣತೆಯನ್ನು ಹೊಂದಿಕೊಳ್ಳುವವರೆಗೆ ಮಾತ್ರ. "ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡನೇನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನಪಡಿಸಿಕೊಳ್ಳುತ್ತೇನೆ (1ಕೊರಿಂಥ 9:27). ಕೆಲವೊಮ್ಮೆ ಈ ರೀತಿಯ ಕಹಿ ಅನುಭವದಿಂದಾಗಿ, ಸ್ವಾಭಾವಿಕವಾದ ಹೃದಯವು, ದೇಹದ ಆಶೆಯನ್ನು ಲೋಕದ ಯಾವುದೇ ಅರ್ಥದಲ್ಲಿ ಅಲ್ಲದೆ ಕೊಚ್ಚಿಹಾಕಿದರೂ ಅದು ಎಲ್ಲಾ ಸಂಗತಿಗಳಿಗಿಂತಲೂ ಕಪಟಯುಕ್ತವಾಗಿದೆ ಎಂಬ ಕರ್ತನ ಪ್ರಕಟನೆಯನ್ನು ಮೆಚ್ಚಿಕೊಳುವುದನ್ನು ಕಲಿಯುತ್ತಾನೆ. ಇದು ಕೆಲವೊಮ್ಮೆ "ಹತಾಶೆಯಿಂದೊಡಗೂಡಿದ ಕೆಟ್ಟತನವಾಗಿದೆ" ಮತ್ತು ನೂತನ ಚಿತ್ತದ ನಿಯಮವನ್ನು ಕಿತ್ತು ಬಿಸಾಡುವ ಸಾಹಸದಲ್ಲಿ ನಿರಾಶದಾಯಕ ನಿಷ್ಠೆಯಿಂದೊಡಗೂಡಿದೆ. ಈ ರೀತಿಯಲ್ಲಿ ಇದು ಹಳೇ ಸೃಷ್ಟಿಯನ್ನು ಪುನರುಜ್ಜೀವಗೊಳಿಸಿ, ಆತ್ಮನ ಪ್ರಕಾರವಾಗಿ ಅಲ್ಲದೆ ದೇಹದ ಇಚ್ಛಾನುಸಾರ ನಡೆಯುವ ಮಟ್ಟಿಗೆ ನೂತನ ಸೃಷ್ಟಿಯನ್ನು ನಾಶಪಡಿಸುತ್ತದೆ.

## ಸ್ವೇಚ್ಛೆಯ ಸಹವಾಸವು ಸೂಚ್ಯವಾಗಿಲ್ಲ

## Promiscuous Association Not Implied

ಕರ್ತನು ತನ್ನ ಆಯ್ಕೆಗಳು ಮತ್ತು ಕೃಪೆಗಳು ಎಲ್ಲಾ ನೂತನ ಸೃಷ್ಟಿಗಳಿಗೆ ಅವರುಗಳ ಉತ್ಸಾಹಕ್ಕನುಸಾರ, ಆತನ ಮೇಲಿನ ಅವರ ಪ್ರೀತಿಗನುಸಾರ ಮತ್ತು ಅವರಲ್ಲಿ ಪ್ರತಿನಿಧಿಸುವ ಆತನ ತತ್ವಗಳಿಗನುಸಾರವಾಗಿ ಒಂದೇ ಸಮವಾಗಿರುತ್ತದೆಂದು ತನ್ನ ಅಪೋಸ್ತಲರುಗಳ ಮೂಲಕವಾಗಿ ನಮಗೆ ಬೋಧಿಸಿದ್ದಾನೆ. ಆತನ ಜನರ ನಿರ್ಣಯದಲ್ಲಿ, ಅವರನ್ನು ಅಂದಾಜುಮಾಡುವಲ್ಲಿ ಮತ್ತು ಅಂತಿಮ ಪ್ರತಿಫಲವನ್ನು ವಿತರಣೆಮಾಡುವಾಗ ಅವರ ಮರ್ತ್ಯ ದೇಹದ ಲಿಂಗ, ಕುಲ, ಮುಂತಾದವುಗಳ ಪರಿಸ್ಥಿತಿಗಳಿಗೆ ಯಾವುದೇ ಸಂಬಂಧವಿರುವುದಿಲ್ಲ. ಈ ವಿಷಯದಲ್ಲಿ ತಂದೆಯ ದೃಷ್ಟಿಕೋನವನ್ನು ಅರಿತು ಎಲ್ಲಾ ನೂತನ ಸೃಷ್ಟಿಗಳೂ ಅದೇ ರೀತಿಯ ದೃಷ್ಟಿಕೋನವನ್ನು ಹೊಂದಿರಬೇಕು, ಯೇಸುಕ್ರಿಸ್ತನಲ್ಲಿರುವ ಎಲ್ಲಾ ನೂತನ ಸೃಷ್ಟಿಗಳನ್ನು ಸಹೋದರರೆಂದು ಗೌರವಿಸಬೇಕು, ಎಲ್ಲರೊಡನೆ ವಾತ್ಸಲ್ಯದಿಂದಿರಬೇಕು, ಎಲ್ಲರ ಸೇವೆ ಮಾಡ ಬಯಸಬೇಕು, ಸಹೋದರರಲ್ಲಿ ಕರ್ತನು ತಾನೇ ಆತನ ಕಾರಣಕ್ಕಾಗಿ ಹೆಚ್ಚಿನ ಉತ್ಸಾಹ ತೋರಿದವರಿಗೆ ತೋರಿಸಿದ ದಯೆ ಮತ್ತು ಗೌರವದ ಹೊರತಾಗಿ ಬೇರೆ ಯಾವುದೇ ಹೆಚ್ಚಿನ ಪಕ್ಷಪಾತವಿರಬಾರದು. ಆದರೆ ಈ ಎಲ್ಲಾ ನಿಷ್ಪಕ್ಷಪಾತಗಳು, ನೂತನ ಸೃಷ್ಟಿಗಳಾದ ನಮ್ಮಲ್ಲಿನ ಲಿಂಗ, ವರ್ಣ, ಕುಲ ಮುಂತಾದವುಗಳನ್ನು ನಿರ್ಲಕ್ಷಿಸುವುದು ಮತ್ತು ಪರಸ್ಪರ ಅವುಗಳ ನಡುವಣ ಮತ್ತು ಲೋಕದೊಳಗಣ ಸಂಬಂಧ ಇವುಗಳು ಭಾಗಶಃ ಮಾತ್ರವೇ ನಮ್ಮ ಮರ್ತ್ಯದೇಹದ ಮೇಲೆ ಪರಿಣಾಮವನ್ನುಟು ಮಾಡುವಂತದ್ದಾಗಿವೆ. ಆದುದರಿಂದ ಲಿಂಗಗಳ ಮಧ್ಯೆ ಇರುವ ವರ್ತನೆ ಮತ್ತು ಸಂಬಂಧಗಳ ಗುಣಲಕ್ಷಣಗಳನ್ನು ನೂತನ ಸೃಷ್ಟಿಗಳು ಕಾಪಾಡಿಕೊಳ್ಳತಕ್ಕದ್ದು.

ನಿಜವಾಗಿಯೂ ದೃಢವಾದ ಆತ್ಮನಿಂದ ಪಡಕೊಂಡಿರುವ ಕಾರಣ ಇವರುಗಳಿಗೆ ಲೋಕಕ್ಕಿಂತ ಹೆಚ್ಚಿನ ವಿಶಾಲ ಶ್ರೇಣಿಯ ವಿವೇಕ ಮತ್ತು ದೂರದೃಷ್ಟಿ ಇರತಕ್ಕದ್ದು. ಅದೇ ರೀತಿಯಲ್ಲಿ ಅವರು ನೂತನ ಸೃಷ್ಟಿಗಳಾಗಿ ದೈಹಿಕ ರೀತಿಯಲ್ಲಿ ನಡೆಯಲು ಬಯಸದೆ ಆತ್ಮೀಕ ರೀತಿಯಲ್ಲಿ ನಡೆಯಲು ಬಯಸುವವರಾಗಿರುವುದರಿಂದ ಲೌಕಿಕರಿಗಿಂತ, ತಮ್ಮ ಶಾರೀರಿಕ ಬಲಹೀನತೆ ಗಳನ್ನು ಗೌರವಿಸುವವರಿಗಿಂತ ಹೆಚ್ಚು ಜಾಗೃತರಾಗಿದ್ದು ಎರಡು ಲಿಂಗಗಳ ನಡುವಣ ಇರಬೇಕಾದ ಯೋಗ್ಯ ನಡತೆ, ವಿನಯ ಶೀಲತೆ, ಮೀಸಲಾತಿ ಇವುಗಳ ಅಳತೆ ಮತ್ತು ಮೇರೆಗಳನ್ನು ಗೌರವಿಸುವುದು ಸೂಕ್ತ ಎಂದು ಗ್ರಹಿಸಿಕೊಳ್ಳಬೇಕು. ನೂತನ ಸೃಷ್ಟಿಯು ಆತ್ಮೀಕ ಜೀವನವನ್ನು ಬಯಸುವ ಅನುಪಾತದಲ್ಲಿ, ನೂತನ ಸೃಷ್ಟಿಯ ಹಿತದ ವಿರುದ್ಧವಾದ ಲೈಂಗಿಕ ಅಕಾಂಕ್ಷೆಗಳ ಹೋರಾಟದ ಪ್ರಮಾಣದಲ್ಲಿ, ಅವರು, ತಮ್ಮ ಹಾದಿಗಳನ್ನು ನೇರಗೊಳಿಸಿ, ಯಾವ ಶೋಧನೆಗಳೂ ತಟ್ಟದ ರೀತಿಯಲ್ಲಿ ಅಡೆತಡೆಗಳನ್ನು ನಿರ್ಮಿಸಿಕೊಂಡು ಅದೇ ಪ್ರಮಾಣದಲ್ಲಿಯೇ ಸಾಮಾನ್ಯವಾಗಿ ಲೋಕದವರಿಗಿಂತ ಹೆಚ್ಚಾಗಿ ಹೆಣಗಾಡಬೇಕಾಗುತ್ತದೆ.

ಇದೇ ರೀತಿಯ ವಾದವು ಜನಾಂಗೀಯ ಬೇಧಕ್ಕೂ ಅನ್ವಯವಾಗುತ್ತದೆ. ಆತ್ಮನ ಸಂಬಂಧಗಳು ಮತ್ತು ಆತ್ಮದ ಅನ್ಯೋನತೆ ಇವುಗಳು ದೈಹಿಕ ಸಂಬಂಧ ಮತ್ತು ಅನ್ಯೋನತೆಗಳಿಗಿಂತ ವಿಭಿನ್ನವಾಗಿವೆ. ನೂತನ ಸೃಷ್ಟಿಯ ಹಿತವು ಶಾರೀರಿಕ ಅಗಲಿಕೆಯ ಮಟ್ಟದಿಂದ ಸಂರಕ್ಷಣೆಗೊಳ್ಳುವುದೆಂದು ನಾವು ನಂಬುತ್ತೇವೆ. ಯಾಕೆಂದರೆ, ಒಂದು ಜನಾಂಗದ ಆದರ್ಶಗಳು, ಅಭಿರುಚಿಗಳು, ಆಕಾಂಕ್ಷೆಗಳು, ಪ್ರವೃತ್ತಿ ಮುಂತಾದವುಗಳು ಮತ್ತೊಂದು ಜನಾಂಗದ ಆದರ್ಶ ಮುಂತಾದವುಗಳೊಂದಿಗೆ ಹೆಚ್ಚು ಕಡಿಮೆ ಅವಶ್ಯಕವಾದ ತಿಕ್ಕಾಟ ಹೊಂದಿರುತ್ತದೆ. ಈ ಕಾರಣದಿಂದ ಮಾನವಕುಲದ ಅನೇಕ ಜನಾಂಗಗಳು ಬಹುಶಃ ನೂತನ ಸೃಷ್ಟಿಯಲ್ಲಿ ತಮ್ಮ ಆತ್ಮೀಕ ಹಿತವು ಅಗಲಿಕೆಯ ಮಟ್ಟದಲ್ಲಿ ಸಂರಕ್ಷಿಸಲ್ಪಟ್ಟಿರುವುದನ್ನು ಕಂಡುಕೊಳ್ಳುತ್ತಾರೆ. ನೂತನ ಸೃಷ್ಟಿಗಳು ಮತ್ತು ಶಾರೀರಕ ದೇಹಗಳು ಇವುಗಳ ವ್ಯತ್ಯಾಸಗಳನ್ನು ಗ್ರಹಿಸಿದ್ದೇ ಆದಲ್ಲಿ ಈ ದೆಸೆಯಲ್ಲಿ ಯಾವುದೇ ತೊಂದರೆ ಇರದು. ಈ ಅಧ್ಯಾಯದ ಆರಂಭದಲ್ಲಿ ಉಲ್ಲೇಖಿಸಲ್ಪಟ್ಟ ಅಪೋಸ್ತಲನ ಮಾತುಗಳಲ್ಲಿ ಪುರುಷ ಮತ್ತು ಸ್ತ್ರೀಯರನ್ನು ಸಾಮಾನ್ಯವಾದ ಹಿಂಡನ್ನಾಗಿ ಮಾಡಲು ಯಾವುದೇ ನೆಪವನ್ನು ನೀಡದಿರುವಲ್ಲಿ ಮತ್ತು ಅವರೆಲ್ಲರೂ ಕ್ರಿಸ್ತನ ಭ್ರಾತೃತ್ವದಲ್ಲಿ ಒಂದೇ ಆಗಿರುವಾಗ ಅವರಲ್ಲಿ ಯಾರೂ ಸಹಾ ಇದನ್ನು ಎರಡು ಭಿನ್ನವಾದ ಜನಾಂಗಗಳ ಮಿಶ್ರವೆಂದು ಗ್ರಹಿಸಲಾಗದು. ಹೀಗಿದ್ದಾಗ್ಯೂ, ಇದು ನಮಗೆ ಹಾಗೂ ಇತರರ ಆತ್ಮೀಕ ಮತ್ತು ಐಹಿಕ ಸಂಗತಿಗಳ ಬಗ್ಗೆ ಪ್ರತಿಯೊಬ್ಬರ ಆತ್ಮೀಕ ಮೆಚ್ಚುಗೆಯನ್ನು ಮತ್ತು ಸಂಬಂಧಗಳನ್ನು ಹಾಗೂ ಹಂಗನ್ನು ನಮಗೆ ನಿಶ್ಚಯಿಸುತ್ತದೆ.

## ದೇವರ ಕ್ರಮದಲ್ಲಿ ಪುರುಷರು ಮತ್ತು ಸ್ತ್ರೀಯರು
### Man and Woman in the Divine Order

"ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ",ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ. (1ಕೊರಿಂಥ11:3) ಎಂಬುದಾಗಿ ಅಪೋಸ್ತಲನು ಪ್ರಕಟಿಸಿದ್ದಾನೆ. ದೇವರ ವಾಕ್ಯದಲ್ಲಿ ಇದು ಏಕರೂಪವಾದ ಬೋಧನೆಯಾಗಿದೆ. ಅಪೋಸ್ತಲನು ತೋರಿಸಿಕೊಡುವಂತೆ ಪುರುಷನ ಶಿರತ್ವವು (Headship) ಪುರುಷನನ್ನು ಮೊದಲು ಉಂಟುಮಾಡಿ ನಂತರ ಸ್ತ್ರೀಯನ್ನು ಆತನಿಂದ ಬೇರೆಮಾಡಲ್ಪಟ್ಟ ಭಾಗವನ್ನಾಗಿ ನಿರ್ಮಾಣಿಸಿದ್ದರ ದೇವರ ಉದ್ದೇಶದಲ್ಲಿ ಸೂಚಿತವಾಗಿದೆ. ಅಪೋಸ್ತಲನು ಇದೇ ಪ್ರಸ್ತಾಪವಾಗಿ ಚರ್ಚಿಸುತ್ತಾ –"ಪುರುಷನು ದೇವರ ಪ್ರತಿರೂಪನೂ ಪ್ರಭಾವೂ ಆಗಿರುವುದರಿಂದ ತಲೆಯನ್ನು ಮುಚ್ಚಿಕೊಳ್ಳಕೂಡದು; ಸ್ತ್ರೀಯಾದರೋ ಪುರುಷನ ಪ್ರಭಾವವಾಗಿದ್ದಾಳೆ ಪುರುಷನು ಸ್ತ್ರೀಯಿಂದ ಉತ್ಪತ್ತಿಯಾಗಲಿಲ್ಲ; ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು. ಇದಲ್ಲದೆ ಪುರುಷನು ಸ್ತ್ರೀ ನಿಮಿತ್ತವಾಗಿ (ಆಕೆಗೆ ಸಹಾಯಕನಾಗಿ) ನಿರ್ಮಾಣವಾಗಲಿಲ್ಲ; ಸ್ತ್ರೀಯು ಪುರುಷನ ನಿಮಿತ್ತವಾಗಿ (ಆತನ ಸಹಾಯಕಳಾಗಿ) ನಿರ್ಮಾಣವಾದಳು. ಹೀಗಿರುವುದರಿಂದ ದೂತರ ನಿಮಿತ್ತವಾಗಿ ಸ್ತ್ರೀಯು ಪುರುಷನ ಅಧಿಕಾರ ಸೂಚಿಸುವ ಮುಸುಕನ್ನು ತಲೆಯ ಮೇಲೆ ಹಾಕಿಕೊಂಡಿರಬೇಕು" (1 ಕೊರಿಂಥ 11:7–12) ಎಂದಿದ್ದಾನೆ.

ಗಂಡ ಹೆಂಡಿರ ಕರಾರಿನಲ್ಲಿ ಇರುವ ಸಂಬಂಧಗಳ ಬಗ್ಗೆ ಇದು ವಾದವಲ್ಲ ಎಂಬುದನ್ನು ಗಮನಿಸಬೇಕು. ಆದರೆ ಇದು ಇನ್ನೂ ವಿಶಾಲವಾಗಿದ್ದು ದೇವರ ಸೃಷ್ಟಿ ಮತ್ತು ಉದ್ದೇಶಗಳ ಕ್ರಮದ ಮೇಲೆ ಆತುಕೊಂಡಿದೆ. ಯಾವುದೇ ವಿಷಯದಲ್ಲಿ ಇಲ್ಲಿ ಅಪೋಸ್ತಲನಾಗಲೀ ಅಥವಾ ದೇವರ ವಾಕ್ಯವು ಮತ್ತೆಲ್ಲಿಯಾಗಲೀ ಪುರುಷನು ಒಡೆಯ, ಸ್ತ್ರೀಯು ಆತನ ದಾಸಿ ಎಂಬ ಯಾವ ಸಲಹೆಯನ್ನೂ ನಿಯಮಿಸುವುದಿಲ್ಲ. ಇದು ಕೆಲವೊಮ್ಮೆ ತಪ್ಪಾಗಿ ಅರ್ಥೈಸಿದ ಆಲೋಚನೆ ಎಂಬುದಾಗಿ ಕಂಡುಬರುತ್ತದೆ. ಆದರೆ ಎಂದಿಗೂ "ಕ್ರಿಸ್ತನ ಮನಸ್ಸುಳ್ಳವರಿಂದ ಅಲ್ಲ". ದೇವರ ವ್ಯವಸ್ಥೆಯಲ್ಲಿ ಕುಟುಂಬವೆಂಬುದು ಇಂದಿನ ಒಂದು ಘಟಕವಾಗಿದೆ. ಪ್ರಾಯಕ್ಕೆ ಬರುವ ಪ್ರತಿಯೊಬ್ಬ ಪುರುಷನಿಗೆ ಇದನ್ನು ರಚಿಸಿಕೊಳ್ಳುವ ಸೌಲಭ್ಯವಿದೆ ಮತ್ತು ಇದಕ್ಕೆ ಆತನೇ ಶಿರಸ್ಸಾಗಬೇಕು ಮತ್ತು ದೇವರ ಮತ್ತು ಮನುಷ್ಯರ ಮುಂದೆ ಅದರ ಪ್ರತಿನಿಧಿಯಂತಿರಬೇಕು.

## ಪುರುಷನ ಶಿರತ್ವವು (ಯಜಮಾನಿಕೆಯು) ಒಂದು ನಿರಂಕುಶಾಧಿಕಾರವಲ್ಲ
### Man's Headship Not a Tyranny

ಶಿರತ್ವ ಅಥವಾ ಯಜಮಾನಿಕೆಯು ಒಂದು ನಿರಂಕುಶಾಧಿಕಾರವಲ್ಲ ಎಂಬುದು "ಕ್ರಿಸ್ತನು ಸಭೆಯ ಶಿರಸ್ಸಾಗಿದ್ದಾನೆ, ಮಾನವನ ಶಿರಸ್ಸಾಗಿದ್ದಾನೆ" ಎಂಬ ಅಪೋಸ್ತಲನ ಪ್ರಕಟನೆಯಲ್ಲಿ ಮತ್ತು ಆತನ ಮುಂದುವರೆದ ಪ್ರಕಟನೆಯಾದ "ತಂದೆಯಾದ ದೇವರು ಕ್ರಿಸ್ತನ ಮೇಲಿನ ಶಿರಸ್ಸಾಗಿದ್ದಾನೆ" ಎಂಬುದರಲ್ಲಿ ವಿಶದವಾಗುತ್ತದೆ. ಮಗನ ಸಂಬಂಧದಲ್ಲಿನ ಸಭೆಯ ಮೇಲಾಗಲೀ ಅಥವಾ ಮಗನ ಮೇಲಿನ ತಂದೆಯ ಸಂಬಂಧವಾಗಲೀ, ನಮಗೆ ಯಾವುದೇ ನಿರಂಕುಶಾಧಿಕಾರ ಕಂಡುಬರುವುದಿಲ್ಲ. ಆದಾಗ್ಯೂ ಶಿರಸ್ಸಿನ ಪ್ರಾಧಾನ್ಯತೆಯು ಪಾರುಪತ್ಯದ, ಪಾಲನೆಯ ಅಥವಾ ಒದಗಿಸುವಿಕೆಯ ಜವಾಬ್ದಾರಿಯನ್ನು ಹೊಂದಿದೆ. ಆದುದರಿಂದ ಪರಲೋಕದ ತಂದೆಯು ತನ್ನ ಮಗನಿಗೆ ಈ ಮುನ್ನೇರ್ಪಾಡನ್ನು ಮಾಡಿರುತ್ತಾನೆ, ಇದು ಒಂದು ಭವ್ಯವಾದ ಮುನ್ನೇರ್ಪಾಡಾಗಿದೆ. ನಿಜವಾಗಿಯೂ ಮಗನ ಮತ್ತು ದೇವರ ಯೋಜನೆಯ ನೆರವೇರಿಕೆಯು ಶ್ರಮೆ ಮತ್ತು ತ್ಯಾಗಗಳನ್ನೊಳಗೊಂಡಿತ್ತು; ಆದಾಗ್ಯೂ ಪ್ರೀತಿಯುಳ್ಳ ತಂದೆಯು ತನ್ನ ಯೋಜನೆಯನ್ನು ತನ್ನ ಮಹಾ ಮತ್ತು ಅದ್ಭುತವಾದ ಉದ್ದೇಶವನ್ನು ನೆರವೇರಿಸಲು ಅಗತ್ಯವಾದುದಕ್ಕಿಂತ ಹೆಚ್ಚು ಕಠಿಣವನ್ನಾಗಿ, ಇನ್ನೂ ಹೆಚ್ಚು ನಿರ್ಣಾಯಕವನ್ನಾಗಿ ಮಾಡಲಿಲ್ಲ. ಇದರಲ್ಲಿ ಆತನ ಮಗನು ಇದರ ಗೌರವ ಪಾಲುದಾರನಾಗಿ ಸಕಲ ರಾಜತ್ವ, ಮಹತ್ವ, ಪ್ರಭುತ್ವಗಳ ಹೆಸರುಗೊಂಡವರಿಗಿಂತ ಅತ್ಯುನ್ನತ ಸ್ಥಾನವನ್ನು ಈಗ ಏರಿದ್ದಾನೆ. ಮಗನು ತಂದೆಯ ಯೋಜನೆಯ ನೆರವೇರಿಕೆಯಲ್ಲಿ ತ್ಯಾಗ ಮತ್ತು ವಿಧೇಯತೆಯನ್ನು ಅರ್ಪಿಸುವುದರ ಭಾಗ್ಯದಲ್ಲಿ ಮತ್ತು ತಾನು ಪ್ರವೇಶಿಸಲಿರುವ ಮತ್ತು ಮುಂದೆ ಉಂಟಾಗಲಿರುವ ಮಹಿಮೆಯಲ್ಲಿ ಆನಂದಿಸುವವನಾಗಿದ್ದಾನೆ. ಅದೇ ರೀತಿಯಲ್ಲಿ ಕರ್ತನಾದ ಯೇಸುವಿನ ಸಭೆಯ ಶಿರತ್ವದಲ್ಲಿಯೂ ಆನಂದಿಸುವವನಾಗಿದ್ದಾನೆ. ಆದುದರಿಂದ ಆತನ ಶಿರತ್ವವು ನಮಗೆ

ಯಾವುದೇ ನಿರಂಕುಶ ಅಧಿಕಾರವನ್ನು ಸೂಚಿಸುವುದರಿಂದ ಬಹು ದೂರ ಉಳಿದಿದೆ. ಇದೊಂದು ನೂತನ ಸೃಷ್ಟಿಯ ಎಲ್ಲಾ ಸದಸ್ಯರುಗಳ ಮೇಲಣ ಪ್ರೀತಿಯ, ಪಾಲನೆಯ ಮತ್ತು ಸಹಾಯದ ಪರ್ಯಾಯ ಶಬ್ಧವಾಗಿದೆ. ಅದೇ ರೀತಿಯಲ್ಲಿ ಪತ್ನಿಯ ಮತ್ತು ಮಕ್ಕಳ ಮೇಲಣ ಪತಿಯ ಅಥವಾ ತಂದೆಯ ಯಜಮಾನಿಕೆಯು ಒಬ್ಬನೇ ಒದಗಿಸುವವನಾಗಿ, ಮುಂಗಾಣುವವನಾಗಿ, ವ್ಯವಸ್ಥಾಪಕನಾಗಿ, ಕಾಪಾಡುವವನಾಗಿ, ಮಾರ್ಗದರ್ಶಿಯಾಗಿ, ಮಾದರಿಯಾಗಿ ಹೆಚ್ಚಿನ ಜವಾಬ್ಧಾರಿಯನ್ನು, ವಿಶೇಷ ಪಾಲನೆಯನ್ನು ಸೂಚಿಸುವುದಾಗಿದೆ. ಆಹಾ! ಪ್ರತಿಯೊಬ್ಬ ತಂದೆಯೂ ದೇವರ ವ್ಯವಸ್ಥೆಯಲ್ಲಿ ತನ್ನ ಕರ್ತವ್ಯಗಳನ್ನು, ತನ್ನ ಜವಾಬ್ಧಾರಿಕೆಗಳನ್ನು, ಸ್ವಾಭಾವಿಕವಾದ ತನ್ನ ಸವಲತ್ತುಗಳನ್ನು ಸರಿಯಾದ ರೀತಿಯಲ್ಲಿ ನೋಡಲಿ ಮತ್ತು ಇದನ್ನು ನೋಡಿ ಅವರು ಅವನ್ನು ಸದುಪಯೋಗಿಸಲಿ, ದುರುಪಯೋಗಗೊಳಿಸದಿರಲಿ !

ನಾವು ಆದಿಕಾಂಡದಲ್ಲಿ ಓದುವಾಗ, ಆದಿ ಮಾತೆ ಹವ್ವಳ ಮೇಲೆ ನೇರವಾಗಿ ಬಂದ ದಂಡನೆ ಮತ್ತು ಆಕೆಯ ಮೂಲಕ ಹೆಣ್ಣು ಮಕ್ಕಳ ಮೇಲೆ ಪರೋಕ್ಷವಾಗಿ ಎರಗಿದ "ಗಂಡನ ಮೇಲೆ ನಿನಗೆ ಆಶೆಯಿರುವುದು; ಅವನು ನಿನಗೆ ಒಡೆಯನಾಗಿರುವನು" (ಆದಿಕಾಂಡ 3:16) ಎಂಬ ಶಾಪದ ಈ ಮಾತುಗಳು ಮುಂದೆ ಯಾವ ರೀತಿಯಲ್ಲಿ ಪ್ರಪಂಚದಾದ್ಯಂತ ಜಾರಿಗೆ ಬಂತು ಎಂದು ನೋಡುವಾಗ, ಅನೇಕ ಸಂದರ್ಭಗಳಲ್ಲಿ ಇದೊಂದು ರೀತಿಯ ಪೀಡನೆಯಾಗಿ ಕಂಡುಬರುತ್ತದೆ ಮತ್ತು ಪತನಗೊಂಡ ಪುರುಷನ ಮನಸ್ಸಿನ ಶಕ್ತಿ ಮತ್ತು ಸ್ವಭಾವಗಳು ಪತ್ನಿ ಮತ್ತು ಮಕ್ಕಳ ಹಿತದ ಬದಲಾಗಿ ಅವರುಗಳ ನಷ್ಟಕ್ಕೆ ಖಚಿತವಾಗಿ ಸಂಭವಿಸುವುದಲ್ಲ ಎಂದು ತಿಳಿದುಬರುತ್ತದೆ. ಎಲ್ಲಾ ಗಣ್ಯ, ಸಂಭಾವಿತ ಸ್ತ್ರೀ ಪುರುಷರು ಅಂತಹ ಪರಿಸ್ಥಿತಿಯನ್ನು ನಿಷೇಧಿಸಬೇಕು; ಅಂತಹ ಅಧಿಕಾರದ ನಿಂದನೆಯು ಸೃಷ್ಟಿಕರ್ತನ ದೃಷ್ಟಿಯಲ್ಲಿ ಹೊಲಸಾದ ನೀಚ ಕೃತ್ಯವಲ್ಲದೆ ಬೇರೊಂದಲ್ಲ ಎಂದು ಯೋಚಿಸಬೇಕು.

ಕೆಲವು ಗಂಡಂದಿರ ಮತ್ತು ತಂದೆಗಳ ದೈಹಿಕ ಮತ್ತು ಮಾನಸಿಕ ಶಕ್ತಿಗಳ ದುರುಪಯೋಗವು ಅವರ ಸ್ವಂತ ಅಸಂತೋಷಕ್ಕೂ ಮತ್ತು ವಂಶದ ಸಾಮಾನ್ಯ ಅವನತಿಗೂ ಕಾರಣವಾಗುತ್ತದೆ, ಯಾಕೆಂದರೆ, ಸ್ತ್ರೀಯು ಸ್ವಾಭಾವಿಕವಾಗಿ ತನ್ನ ಶಿರವಾದ ಗಂಡನ ಕಡೆಗೆ ವಾಲುವವಳಾಗಿದ್ದು ಯಾವುದು ನೈತಿಕ ಅಧಿಕಾರವೆಂದು ಕಂಡುಕೊಳ್ಳುತ್ತಾಳೋ (ಗಂಡನ ಮೇಲಿನ ಆಸೆ) ಅದನ್ನು ಬಯಸಿ ವಿಧೇಯಳಾಗುತ್ತಾಳಾದರೂ, ಆ ಶಿರದ ನಿಂದನೆ ಮತ್ತು ತೋರುವ ಕೆಟ್ಟ ಅಭ್ಯಾಸಗಳು ಆಕೆಯಲ್ಲಿದ್ದ ಮತ್ತು ಈಗಿರುವ ಸ್ತ್ರೀಯ ಮನೋಧರ್ಮದ ತಳಹದಿಗನುಸಾರವಾಗಿ ಗಣನೀಯವಾಗಿ ಪರಸ್ಪರ ಸರಿದುಹೋಗುವುದು. ಇವು ಯಥೋಚಿತ ವಲ್ಲದ, ಸ್ವಾರ್ಥತೆ ಮತ್ತು ಪೀಡನೆಗಳಿಂದ ಕೂಡಿದ ಬೇಡಿಕೆಗಳಿಂದ ಆಕೆ ತನ್ನನ್ನು ಕಾಪಾಡಿಕೊಳ್ಳುವ ಒತ್ತಾಯವನ್ನುಂಟುಮಾಡುತ್ತದೆ. ಸಾಮಾನ್ಯವಾದ ಈ ಫಲಿತಾಂಶವು ಇಡೀ ವಂಶವನ್ನೇ ನೀತಿಭ್ರಷ್ಟವನ್ನಾಗಿ ಮಾಡಿಬಿಡುತ್ತದೆ. ಸ್ವಾಭಾವಿಕವಾದ ಮತ್ತು ವೇದಾನುಸಾರವಾದ ಕ್ರಮಗಳು ಬಹು ಸಾಮಾನ್ಯವಾಗಿ ಗ್ರಹಿಸಬಹುದಾದರೂ, ಪುರುಷನಾಗಲೀ, ಸ್ತ್ರೀಯಾಗಲೀ ಸಾಮಾನ್ಯವಾಗಿ ತಮ್ಮನ್ನು ಯಾವರೀತಿಯಲ್ಲಿ ಸಾಮಾಜಿಕ ವ್ಯವಹಾರಗಳ ಪ್ರಸ್ತುತ ಅಕ್ರಮಗಳಿಗೆ, ಅವ್ಯವಸ್ಥೆಗಳಿಗೆ ಹೊಂದಿಸಿಕೊಳ್ಳುವುದೆಂದು ತಿಳಿಯರು.

ಇದರ ಪರಿಣಾಮವಾಗಿ ಪತನಗೊಂಡ ಪುರುಷನು ತನಗೆ ಯೋಗ್ಯತೆಯಿಲ್ಲದ ಯಜಮಾನಿಕೆಗಾಗಿ ಹೆಣಗಾಡುವುದನ್ನು ನಾವು ಆಗಾಗ ಕಾಣುತ್ತೇವೆ. ಇದನ್ನು ಅವರು ತಮ್ಮ ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಳ್ಳಲು ಬಯಸುತ್ತಾರೆ. ಅದೇ ಸಮಯದಲ್ಲಿ ಕುಟುಂಬವನ್ನು ಕಾಪಾಡುವ ಸಧಭಿಪ್ರಾಯದಿಂದ ಕೂಡಿದ ತಮ್ಮ ಜವಾಬ್ಧಾರಿಯುತವಾದ ಯುಕ್ತ ಅಧಿಕಾರವನ್ನು ಗ್ರಹಿಸಲು ವಿಫಲರಾಗುತ್ತಾರೆ. ಸ್ತ್ರೀಯರು ಸಹಾ ನೀತಿಭ್ರಷ್ಟರೂ, ಸ್ವಾರ್ಥಿಗಳೂ ಆಗಿದ್ದು ತಮ್ಮ ಉಚಿತವಲ್ಲದ, ಯುಕ್ತವಲ್ಲದ ಯಜಮಾನಿಕೆಯ ವಿರುದ್ಧ ತಿರುಗಿಬೀಳುವ ಮನಸ್ಸುಮಾಡುವುದು ಮಾತ್ರವಲ್ಲದೆ ಯಾವುದೇ ಮತ್ತು ಎಲ್ಲಾ ಪ್ರಸ್ತಾಪಗಳಲ್ಲಿ ಭಿನ್ನಾಭಿಪ್ರಾಯವುಳ್ಳರಾಗಿದ್ದು ಅವುಗಳ ಬಗ್ಗೆ ಚೌಕಾಸಿ ಮತ್ತು ಕಲಹಗಳನ್ನು ಮಾಡುವುದನ್ನೂ ನೋಡುತ್ತೇವೆ. ಕುಟುಂಬಕ್ಕೆ ಒದಗಿಸಿಕೊಡುವವರು ತಾವೇ ಎಂಬುದನ್ನು ಹಕ್ಕಿನಿಂದ ಹೇಳಿಕೊಳ್ಳುವುದರೊಂದಿಗೆ ಹಣಕಾಸು ಮತ್ತು ಇಡೀ ಮನೆಯ ವ್ಯವಹಾರಗಳ ನಿಯಂತ್ರಣವನ್ನು ತನ್ನ ಕೈಗೆ ತಕ್ಕೊಂಡು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಮನೆಯ ಯಜಮಾನನ ಅಧಿಕಾರವನ್ನು ಅಪಹರಿಸುತ್ತಾರೆ. ದೇವರ ಉದ್ದೇಶ ಮತ್ತು ವ್ಯವಸ್ಥೆಗೆ ವಿರೋಧವಾದ ಇಂತಹ ಪರಿಸ್ಥಿತಿಗಳು ಎಲ್ಲೆಲ್ಲಿ ನೆಲೆಸಿವೆಯೋ ಅವುಗಳು ಆ ಸಮಯದಲ್ಲಿ ಎಷ್ಟೇ ವಿವೇಕ ಅಥವಾ ಅಗತ್ಯವೆಂದು ಕಂಡು ಬಂದರೂ ಹೆಚ್ಚು ಕಡಿಮೆ ಬೇಗನೇ ಅಥವಾ ತಡವಾಗಿ ಕಹಿಯಾದ ಫಲವನ್ನು ಉಂಟು ಮಾಡುತ್ತವೆ. ನೈತಿಕತೆಯ ಶಾಂತಿಯುತ ಫಲವನ್ನು ದೇವರ ಸ್ವಾಭಾವಿಕ ಕ್ರಮವನ್ನು ಅನುಸರಿಸುವುದರ ಮೂಲಕವಷ್ಟೇ ನಿರೀಕ್ಷಿಸಬಹುದು. ಸಂಗತಿಗಳ ಪ್ರಸ್ತುತ ಪರಿಸ್ಥಿತಿಯಲ್ಲಿ ಇಂತಹ ತೊಂದರೆಗಳನ್ನು ತಡೆಯಲಾಗದು ಎಂದು ವಾದಿಸಬಹುದು; ಸ್ವಾರ್ಥಿ ಮನುಷ್ಯನು ದೇವರ ಕ್ರಮದ ಮತ್ತು ಉದ್ದೇಶಗಳ ಎಲ್ಲೆಗಳನ್ನು ಮೀರುತ್ತಾನೆ ಮತ್ತು ಸ್ವಾರ್ಥಿಯಾದ ಸ್ತ್ರೀಯು ಸಹಾ ಹಾಗೆಯೇ ಮಾಡುತ್ತಾಳೆ; ಇದರ ಪರಿಣಾಮವಾಗಿ ಯೋಗ್ಯ ಮನುಷ್ಯನಿಗಾಗಿ ನಿಗಧಿಪಡಿಸಿದ ಸಮಾಧಾನ, ಕ್ರಮ ಮತ್ತು ಆಶೀರ್ವಾದಗಳನ್ನು ಅವರ ಪತನಗೊಂಡ ಮಕ್ಕಳಿಂದ ಗ್ರಹಿಸಲು ಎಂದಿಗೂ ಸಾಧ್ಯವಿಲ್ಲ. ಆದಾಮನ ಪತನ ಮತ್ತು ದೇವರ ಕ್ರಮವನ್ನು ತಪ್ಪಿದ್ದರ ಮೂಲಕವಾಗಿ ಉಂಟಾದ ಪ್ರಸ್ತುತ ಕೌಟುಂಬಿಕ ದುರವಸ್ಥೆಯ ದೃಷ್ಟಿಯಲ್ಲಿ ಈಗಿರುವ ನಿವಾರಣೋಪಾಯವೆಂದರೆ ಪುನರ್‌ವಶ ಪಡಿಸುವುದು ಮಾತ್ರವೇ. ಇದಕ್ಕಾಗಿ ನಾವು "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" ಎಂಬ ಕರ್ತನ ಪ್ರಾರ್ಥನೆಯ ಮಾತುಗಳ ಮೂಲಕ ಹೃತ್ಪೂರ್ವಕವಾಗಿ ಸೇರಿಕೊಂಡು ಸಮ್ಮತಿಸುತ್ತೇವೆ.

ಮಾನವ ಕುಲದಲ್ಲಿರುವ ಅಕ್ರಮಗಳನ್ನು ಸರಿಪಡಿಸಿ ಪುನಃ ಕ್ರಮವನ್ನು ತರುವ ಸಾಧ್ಯತೆಗಳ ಬಗ್ಗೆ ನಾವೀಗ ಪರಿಶೀಲಿಸದೆ, ನೂತನ ಸೃಷ್ಟಿಗಳ ಮನೆ, ಕುಟುಂಬ ಮುಂತಾದವುಗಳ ಯೋಗ್ಯ

ವ್ಯವಸ್ಥೆ ಮತ್ತು ಅವರ ಜೀವನ ಕ್ರಮಗಳ ಬಗ್ಗೆ, ಗಂಡ ಹೆಂಡರ, ತಂದೆತಾಯಿಯರ ಮತ್ತು ಮಕ್ಕಳ ಪರಸ್ಪರ ಕರ್ತವ್ಯಗಳು ಇವುಗಳ ಬಗ್ಗೆ ಮಾತ್ರವೇ ಪರಿಶೀಲಿಸುವವರಾಗಿದ್ದೇವೆ. ಈಗ ಯಾವುದೇ ಯೆಹೂದ್ಯ ಮತ್ತು ಅನ್ಯರು ಎಂಬ ಅರ್ಥವನ್ನು ಹೊಂದಿರುವ "ಕ್ರೈಸ್ತರು' ಎಂಬ ಪದವು ಅದರ ಮೂಲ ಅರ್ಥವನ್ನು ಇಷ್ಟರ ಮಟ್ಟಿಗೆ ಕಳಕೊಳ್ಳದೇ ಹೋಗಿದ್ದರೆ ನಾವು ಸೂಕ್ತವಾಗಿ ಈ ಪ್ರಸ್ತಾಪವನ್ನು ಕ್ರೈಸ್ತ ಪುರುಷ ಮತ್ತು ಸ್ತ್ರೀಯರ ಕರ್ತವ್ಯಗಳು ಮತ್ತು ಹಂಗುಗಳು ಎಂಬ ಶಿರೋನಾಮೆಯಡಿಯಲ್ಲಿ ಪರಿಗಣಿಸಬಹುದಿತ್ತು. ಕರಾರುವಕ್ಕಾಗಿ ಹೇಳುವುದಾದರೆ ಕ್ರೈಸ್ತರು ಎಂಬ ಪದವು ನಜರೇತಿನ ಯೇಸುಕ್ರಿಸ್ತನಲ್ಲಿ ವಿಶ್ವಾಸವಿಡುವ ಆತನ ಅನುಯಾಯಿಗಳಾದ ನೂತನ ಸೃಷ್ಟಿಗಳನ್ನಷ್ಟೇ ಸೂಚಿಸುತ್ತದೆ. ಯಾಕೆಂದರೆ, ಪತನಗೊಂಡಿರುವುದು ಸರ್ವೇ ಸಾಮಾನ್ಯವಾಗಿದ್ದು ನಾವು ನೂತನ ಸೃಷ್ಟಿಗಳಾಗಿ ನಿಜವಾಗಿ ಪ್ರತಿಷ್ಠೆಗೊಂಡ ವಿಶ್ವಾಸಿಗಳನ್ನಷ್ಟೇ ಇಲ್ಲಿ ಪ್ರತ್ಯೇಕಪಡಿಸುತ್ತೇವೆ.

ಮಾನವ ಕುಲದ ವೈವಾಹಿಕ ಸಂಬಂಧಗಳು ದೇವರ ವ್ಯವಸ್ಥೆಗಳಿಗೆ ಅನುಸಾರವಾಗಿ ಕ್ರಿಸ್ತ ಮತ್ತು ಆತನ ಮದಲಗಿತ್ತಿಯೂ ದೇಹವೂ ಆಗಿರುವ ಸಭೆಯ ನಡುವೆ ಇರುವಂತೆ ಚಿತ್ರಿಸಲ್ಪಟ್ಟಿರುವುದನ್ನು ಅಪೋಸ್ತಲನು ಸುಸ್ಪಷ್ಟವಾಗಿ ಸೂಚಿಸುತ್ತಾನೆ. ಆತನ ಮಾತುಗಳು ಈ ರೀತಿಯಲ್ಲಿ ಕೂಲಂಕಷವಾಗಿವೆ:

**"ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದರಿಗೆ ಅಧೀನರಾಗಿರ್ರಿ. ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ. ಅದಿರಲಿ; ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತೀಯರು ತಮ್ಮ ತಮ್ಮ ಗಂಡಂದರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿರಬೇಕು" ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು. ಹಾಗೆಯೇ ಪುರುಷನು ಸಹಾ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯನ್ನು ಪ್ರೀತಿಸುವ ಹಂಗಿನವನಾಗಿದ್ದಾನೆ. ತನ್ನ ಹೆಂಡತಿಯನ್ನು ಪ್ರೀತಿಸುವವನು ತನ್ನನ್ನೇ ಪ್ರೀತಿಸಿ ಕೊಳ್ಳುವವನಾಗಿದ್ದಾನೆ. ಯಾರೂ ಎಂದೂ ಸ್ವಶರೀರವನ್ನು ಹಗೆ ಮಾಡಿದ್ದಿಲ್ಲ; ಎಲ್ಲರೂ ತಮ್ಮ ಶರೀರವನ್ನು ಪೋಷಿಸಿ ಸಂರಕ್ಷಿಸುತ್ತಾರೆ. ಯಾವ ದೇಹಕ್ಕೆ ನಾವು ಅಂಗಗಳಾಗಿದ್ದೇವೋ ಸಭೆಯೆಂಬ ಆ ದೇಹವನ್ನು ಕ್ರಿಸ್ತನು ಹಾಗೆಯೇ ಪೋಷಿಸಿ ಸಂರಕ್ಷಿಸುತ್ತಾನಲ್ಲಾ. ಇದರ ನಿಮಿತ್ತದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಬರೆದದೆ. ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಇದ್ದೇನೆ; ಇದುವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು. ಅದಿರಲಿ; ನಿಮ್ಮಲ್ಲಿ ಪ್ರತಿ ಪುರುಷನು ತನ್ನನ್ನು ಪ್ರೀತಿಸಿಕೊಳ್ಳುವಂತೆಯೇ ತನ್ನ ಹೆಂಡತಿಯನ್ನೂ ಪ್ರೀತಿಸಬೇಕು; ಪ್ರತಿ ಹೆಂಡತಿಯೂ ತನ್ನ ಗಂಡನಿಗೆ ಭಯಭಕ್ತಿಯಿಂದ ನಡೆದುಕೊಳ್ಳಬೇಕು" (ಎಫೆಸ 5: 22–33).**

ಲಾಕ್ಷಣಿಕ (typical) ಅನ್ಯೋನತೆಯು ಸಾಮಾನ್ಯವಾಗಿ ಎಷ್ಟೋ ಅಪರಿಪೂರ್ಣವೂ ಮತ್ತು ಎಷ್ಟೋ ಅತೃಪ್ತಿಕರವೂ ಆಗಿರುತ್ತದೆಂಬದು ಸತ್ಯವಾಗಿದೆ, ವಿವಾಹವು ಆ ನಮೂನೆಯದು ಎಂಬ ಆಲೋಚನೆಯನ್ನು ರದ್ದುಮಾಡುವುದಿಲ್ಲ. ಇಸ್ರಾಯೇಲ್ಯರ ಅನೇಕ ಬಲಿದಾನಗಳು ಸಹಾ ಅಸಮರ್ಪಕವೂ, ಅತೃಪ್ತಿಕರವೂ ಆಗಿದ್ದವು. ಆದಾಗ್ಯೂ ಅವುಗಳು ನಿಜವಾದ ಬಲಿದಾನಗಳಂತೆ ರಚಿಸಲ್ಪಟ್ಟವು. ನೂತನ ಸೃಷ್ಟಿಯು ಲಾಕ್ಷಣಿಕ, ಲೌಕಿಕ ವಿವಾಹವನ್ನು ಮತ್ತು ಅದರ ಸಮಂಜಸವಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅದನ್ನು ಕ್ರಿಸ್ತನ ಮತ್ತು ಆತನ ಸಭೆಯ ಅನ್ಯೋನತೆಯ ಪ್ರತಿ ಸಂಕೇತವೆಂಬಂತೆ ಬಹಳ ಹೆಚ್ಚಾಗಿ ಗೌರವಿಸಬೇಕು. ಈ ರೀತಿಯಲ್ಲಿ ಪರಿಗಣಿಸುವಾಗ ಪ್ರತಿಯೊಬ್ಬ ಕ್ರೈಸ್ತನೂ ಕರ್ತನು ತನ್ನ ಸಭೆಯನ್ನು ಪಾಲಿಸುವ ರೀತಿಯಲ್ಲಿರುವಂತೆ ತನ್ನ ಪತ್ನಿಯ ಬಗ್ಗೆ, ಆಕೆಗಾಗಿ ಪ್ರಾಣಾರ್ಪಣೆ ಮಾಡುವಷ್ಟರ ಮಟ್ಟಿಗೆ ಆಕೆಯ ಐಹಿಕ, ಆತ್ಮಿಕವಾದ ಪ್ರಸ್ತುತ ಮತ್ತು ಭವಿಷ್ಯದಲ್ಲಿನ ಪ್ರತಿಯೊಂದು ಹಿತಾಸಕ್ತಿಗಳ ಬಗ್ಗೆ ತನ್ನಲ್ಲಿರಬೇಕಾದ ಕರ್ತವ್ಯಗಳ ಮತ್ತು ಜವಾಬ್ದಾರಿಗಳ ಸಾಧ್ಯವಾದಷ್ಟು ಭವ್ಯವಾದ ನಿದರ್ಶನವನ್ನು ಹೊಂದಿಕೊಳ್ಳುವನು. ಅದರಂತೆ ಪತ್ನಿಯೂ ಸಹಾ ತನ್ನ ಸಭೆಯ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ಮೆಚ್ಚಿಕೊಳ್ಳುವಾಗ ಪತ್ನಿಯ ಜವಾಬ್ದಾರಿಗಳ ಉನ್ನತವಾದ ಆದರ್ಶಗಳನ್ನು ಮತ್ತು ಸಹಾಯಕಳಾಗಿ ತನ್ನ ಪತಿಯ ಬಗ್ಗೆ ಇರಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಗ್ರಹಿಸಿಕೊಳ್ಳತಕ್ಕದ್ದು. ಆದರೆ ಈ ವಿಚಿತ್ರವಾದ ಸಂಬಂಧ ಮತ್ತು ಅದರ ಸೂಕ್ತವಾದ ಅನ್ವಯವು ಕ್ರಿಸ್ತನ ಮನಸುಳ್ಳವರಿಗಲ್ಲದೆ ಬೇರೆಯವರು ಸ್ಪಷ್ಟವಾಗಿ ಗ್ರಹಿಸಬಹುದೆಂದು ನಾವು ನಿರೀಕ್ಷಿಸಬಾರದು. ಆದುದರಿಂದ ಮದುವೆ ಸಂಬಂಧವಾದ ಕರಾರು ಮಾಡುವವರಿಗೆ ದೈವಿಕ ಆದರ್ಶಗಳನ್ನು ಆದಷ್ಟು ಚೆನ್ನಾಗಿ ಗ್ರಹಿಸಿಕೊಳ್ಳುವಂತೆ ಒತ್ತಾಯಿಸುವಾಗ ನಾವು ಪುನಃ ಪವಿತ್ರಾತ್ಮನು ಪಡಕೊಂಡವರಲ್ಲದೆ ಬೇರೆ ಯಾರೊಬ್ಬರೂ ಈ ನಮೂನೆಗೆ ಸಂಬಂಧಿಸಿದ ಎಲ್ಲಾ ಸಿದ್ಧಾಂತಗಳನ್ನು ಗ್ರಹಿಸುವುದಿಲ್ಲ ಮೆಚ್ಚಿಕೊಳ್ಳುವುದಿಲ್ಲ ಮತ್ತು ಅವುಗಳನ್ನು ಅನ್ವಯಿಸಿಕೊಳ್ಳುವುದಿಲ್ಲ ಎಂಬುದನ್ನು ಗಮನಿಸುತ್ತೇವೆ. ಯಾಕೆಂದರೆ ಪವಿತ್ರಾತ್ಮನಿಂದ ಜನಿಸಿದವರು ಮಾತ್ರವೇ ಕ್ರಿಸ್ತನ ಮನಸ್ಸನ್ನು ಹೊಂದಿದವರಾಗಿದ್ದಾರೆ.

ಮಾನವ ಜನಾಂಗದ ಪ್ರತಿಯೊರ್ವ ವ್ಯಕ್ತಿಯೂ ಅದೇ ಮಟ್ಟದಲ್ಲಿ ಕುಸಿದವರಲ್ಲ, ಪತ್ನಿಯು ತನ್ನ ಗಂಡನಿಗಿಂತ ಹೆಚ್ಚಾದ ಮನಸ್ಸು ಮತ್ತು ಹೃದಯವನ್ನು ಹೊಂದಿರುವುದು ವಿರಳವೇನಲ್ಲ. ಆಗ ಅಂತಹ ಪರಿಸ್ಥಿತಿಯಲ್ಲಿ ಉತ್ತಮವಾದ ಮೇಧಾಶಕ್ತಿ, ನಿರ್ಣಾಯಕ ಶಕ್ತಿ ಮತ್ತು ಸಾಮರ್ಥ್ಯಗಳನ್ನು

ಹೊಂದಿರುವ ಪತ್ನಿಯನ್ನು ಕುಟುಂಬದ ಯಜಮಾನಿಯನ್ನಾಗಿ ಮತ್ತು ಆಕೆಯ ಪತಿಯನ್ನು ಸಹಾಯಕನನ್ನಾಗಿ ಪರಿಗಣಿಸಬಹುದೋ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ "ಕೂಡದು' ಎಂದು ನಾವು ಉತ್ತರಿಸುತ್ತೇವೆ. ಅಂತಹ ವಿವಾಹಗಳಲ್ಲಿ ದೇವರ ನಿಯಮವನ್ನು ಅಗೌರವಿಸಲಾಗುತ್ತದೆ; ಯಾವುದೇ ಸ್ತ್ರೀ ತನ್ನ ಗುಣಮಟ್ಟ ಮತ್ತು ಮೇಧಾಶಕ್ತಿಗಿಂತ ಕೆಳಮಟ್ಟದಲ್ಲಿರುವವನನ್ನು – ತನ್ನ 'ಶಿರ'ವೆಂದು ಸರಿಯಾಗಿ ನೋಡಲಾರದವನನ್ನು ವಿವಾಹ ಮಾಡಿಕೊಳ್ಳಲೇಬಾರದು. ಮತ್ತು ಯಾವುದೇ ಪುರುಷನು ತನಗಿಂತ ಉತ್ತಮಳನ್ನು ಮದುವೆ ಮಾಡಿಕೊಳ್ಳಲೇಬಾರದು. ಕ್ರಿಸ್ತ ಯೇಸುವಿನಲ್ಲಿ ನೂತನ ಸೃಷ್ಟಿಯಾದ ಯಾರೂ ಅವರು ಎಷ್ಟೇ ಗಣ್ಯರಾಗಲೀ, ಗೌರವಾನ್ವಿತರಾಗಲೀ ಇನ್ನೂ ಲೌಕಿಕರಾಗಿರುವವರೊಡನೆ ಸಮವಿಲ್ಲದ ಇಜ್ಜೋಡು ಆಗಲೇಬಾರದು. ನೂತನಸೃಷ್ಟಿಗಳು "ಕರ್ತನಲ್ಲಿ ಮಾತ್ರವೇ' ವಿವಾಹವಾಗಬೇಕು ಎಂಬುದು ನಮ್ಮ ಬುದ್ಧಿಮಾತಾಗಿದ್ದು ಇದನ್ನು ಅಲಕ್ಷಿಸಲಾಗದು. ಇದನ್ನು ಅಗೌರವಿಸಿದಾಗ ಕರ್ತನ ಜನರಿಗೆ ಕಠಿಣವಾದ ಕಷ್ಟಗಳು ಉಂಟಾಗಿವೆ.

## ನೂತನ ಸೃಷ್ಟಿಗಳ ವಿವಾಹ

## Marriage of New Creatures

ಹೇಗಿದ್ದರೂ, ಒಮ್ಮೆ ವೈವಾಹಿಕ ಸಂಬಂಧಕ್ಕೆ ಪ್ರವೇಶಿಸಿದ ಮೇಲೆ ಮತ್ತು ದೇವರ ಮಗುವಿಗೆ ವಿವಾಹದ ಒಡಂಬಡಿಕೆಯನ್ನು ಸಂಶಯವಿಲ್ಲದೆ ಯಥಾವತ್ತಾಗಿ ತನ್ನ ಯೊಗ್ಯತಾನುಸಾರ ಪಾಲಿಸದೆ ಬೇರೇನೂ ಉಳಿಯದೇ ಇರುವಾಗ ವಿಷಾದಪಡಲು ಬಹು ತಡವಾಗಿಬಿಡುತ್ತದೆ. ಇಬ್ಬರೂ ನೂತನ ಸೃಷ್ಟಿಗಳಾಗಿದ್ದಲ್ಲಿ ಮತ್ತು ಅವರ ಕೂಡುವಿಕೆಯು ಯುಕ್ತವಾಗಿರುವಲ್ಲಿ ಎರಡೂ ಕಡೆಗಳಲ್ಲಿಯೂ ತಮ್ಮ ಮನೆಯ ಸೂಕ್ತ ವ್ಯವಸ್ಥೆ ಮತ್ತು ನಿಯಮಗಳನ್ನು ಪಾಲಿಸುವಲ್ಲಿ ಯಾವುದೇ ತೊಡಕುಂಟಾಗದು; ಪರಂತು ಸ್ವಾಭಾವಿಕ ಏರ್ಪಾಟು ಮತ್ತು ಅಭಿರುಚಿಯ ಹೊಂದಿಕೆ ಇವುಗಳನ್ನು ಸೂಕ್ತವಾಗಿ ಪರಿಗಣಿಸಬೇಕಾಗುತ್ತದೆ. ಕ್ರಿಸ್ತನ ಮನಸ್ಸನ್ನು ಹೊಂದಿರುವ ನಿಜವಾದ ಕ್ರೈಸ್ತನು ತನ್ನ ಪತ್ನಿಯನ್ನು ಪ್ರೀತಿಸುತ್ತಾನೆ, ಆಕೆಯನ್ನು ಪ್ರೇಮದಿಂದ ಪಾಲಿಸಲು, ಆಕೆಯ ಬಗ್ಗೆ ಕಾಳಜಿವಹಿಸಲು, ದೈಹಿಕ ಅಗತ್ಯತೆಗಳನ್ನು ಮಾತ್ರವಲ್ಲ ಆಕೆಯ ಹೃದಯ ಮತ್ತು ಒಲವನ್ನು ಪೋಷಿಸಲು ತಾನು ಮಾಡಿಕೊಂಡಿರುವ ಒಡಂಬಡಿಕೆಯನ್ನು ಸದಾ ನೆನಪಿನಲ್ಲಿಟ್ಟುಕೊಂಡಿರುತ್ತಾನೆ. ಅಂತಹ ಪತಿಯು ತಾನು ಆಕೆಗೆ ಊಟ, ವಸ್ತ್ರ ಮತ್ತು ವಸತಿಗಳನ್ನು ಒದಗಿಸುವ ಕರ್ತವ್ಯವನ್ನು ನಿರ್ವಹಿಸು ತ್ತಿದ್ದೇನೆಂದು ಮಾತ್ರ ಭಾವಿಸದೆ ಆಕೆಯ ಮಾನಸಿಕ, ನೈತಿಕ ಮತ್ತು ಆತ್ಮಿಕ ಹಿತಾಸಕ್ತಿಗಳನ್ನು ಸಹಾ ಪರಿಗಣಿಸುವುದು ತನ್ನ ಹಂಗು ಎಂದು ಗ್ರಹಿಸುತ್ತಾನೆ. ಆಕೆಯ ಸಮಯವು ಕೌಟುಂಬಿಕ ಕರ್ತವ್ಯ ಮತ್ತು ಪಾಲನೆಗಳಲ್ಲಿ ಮಾತ್ರವೇ ವ್ಯಯವಾಗುವುದರಲ್ಲಿ ಆತನಿಗೆ ತೃಪ್ತಿ ಇರದು. ಆದರೆ ತನ್ನ ಸಾಮರ್ಥ್ಯಕ್ಕನುಸಾರವಾಗಿ ಕುಟುಂಬದಲ್ಲಿನ ತನ್ನ ಯಜಮಾನಿಕೆಯ ಕಾರ್ಯಗಳನ್ನು ಆಕೆಯ ಮನಸ್ಸು, ಆಕೆಯ ಹೃದಯ ಇವುಗಳ ಸಂಸ್ಕರಣದ ಸಲುವಾಗಿ ಆಕೆಗೆ ತನ್ನ ಆತ್ಮೀಕ ಸಾಂಗತ್ಯ ಮತ್ತು ಸತ್ಯದ ಅಧ್ಯಯನಕ್ಕೆ ಸೂಕ್ತವಾದ ಸಮಯವು ದೊರೆಯುವ ರೀತಿಯಲ್ಲಿ ವ್ಯವಸ್ಥೆ ಮಾಡಲು ಸಹಾ ಬಯಸುತ್ತಾನೆ. ಅಂಥಹ ಪತಿಯು, ಉಳಿದ ಇತರ ಎಲ್ಲಾ ಮಾನವ ಕುಟುಂಬದವರಂತೆ, ಸ್ವಾರ್ಥವು ಹೆಚ್ಚು ಕಡಿಮೆ ತನ್ನ ಮರ್ತ್ಯ ದೇಹದಲ್ಲಿ ಒಳಹೊಕ್ಕಿದೆ ಎಂಬುದನ್ನು ಮರೆಯುವುದಿಲ್ಲ ಮತ್ತು ಒಬ್ಬ ನೂತನ ಸೃಷ್ಟಿಯಾಗಿ ಈ ಪ್ರವೃತ್ತಿಯು ಇತರರಿಗೆ–ಮುಖ್ಯವಾಗಿ ತನ್ನ ಮಾಂಸದ ಮಾಂಸವೂ ಮೂಳೆಯ ಮೂಳೆಯೂ ಆಗಿರುವ ತನ್ನ ಹೆಂಡತಿ ಮಕ್ಕಳಿಗೆ ಯಾವುದೇ ಕಷ್ಟ ಅಥವಾ ಹಾನಿಯನ್ನುಂಟುಮಾಡದಂತೆ ಜಾಗರೂಕತೆ ವಹಿಸುತ್ತಾನೆ.

ಈ ರೀತಿಯಲ್ಲಿ ಕುಟುಂಬದ ಯಜಮಾನಿಕೆಯು ಅದರ ಪಾಲನೆಯಲ್ಲಿರುವವರ ಒಳಿತನ್ನು, ಮಾರ್ಗದರ್ಶನ ಮತ್ತು ಸಮಾಲೋಚನೆ ಮುಂತಾದವುಗಳ ಮೂಲಕ ಹಾಗೂ ಅವರಿಗೆ ಅಗತ್ಯವಾದ ವಸ್ತುಗಳನ್ನು ಒದಗಿಸಿಕೊಡುವುದರ ಮೂಲಕ ಸಾಧಿಸುತ್ತದೆ ಮತ್ತು ಬಲಾತ್ಕಾರಗಳಿಂದ ದೂರ ಉಳಿಯುತ್ತದೆ. ಅಂತಹ ಪತಿಯಲ್ಲಿನ ಪ್ರೀತಿಯ ಉತ್ಸಾಹವು ಆತನ ಹೆಂಡತಿಯ ಇಷ್ಟ ಮತ್ತು ಇಷ್ಟವಿಲ್ಲದಿರುವಿಕೆಗಳನ್ನು ಮತ್ತು ಆಕೆಯ ಸೂಕ್ತರೀತಿಯ ಬುದ್ಧಿಮಾತುಗಳನ್ನು ನಿರ್ಲಕ್ಷಿಸುವುದಿಲ್ಲ. ಪರಿಪೂರ್ಣ ನಾಗಿದ್ದ ಆದಾಮನು ಮಾನವತ್ವಕ್ಕೆ ಬೇಕಾದ ಎಲ್ಲಾ ಗುಣಗಳನ್ನು ಹೊಂದಿರುವಾಗಲೂ ಹವ್ವಳ ವಿಭಜನೆಯು ಈ ಕೆಲವು ಗುಣಗಳಿಂದ ಬೇರ್ಪಡುವಿಕೆಯಂತಿತ್ತು ಎಂಬ ಸತ್ಯವನ್ನು ಆತನು ಗ್ರಹಿಸಿದವನಾಗಿದ್ದನು; ಮನಸ್ಸಿನ ಮತ್ತು ದೇಹದ ಶಕ್ತಿಗಳು ದೇವರ ವ್ಯವಸ್ಥೆಗಳಿಗನುಸಾರವಾಗಿ ನೆಲೆಗೊಂಡಿದ್ದು ಆತನನ್ನು ಕುಟುಂಬದ ಯಜಮಾನನನ್ನಾಗಿ ನೇಮಿಸಿದ್ದಾಗ್ಯೂ, ವಿಶೇಷವಾಗಿ ಸ್ತ್ರೀಯು ಹೊಂದಿರುವ ಕೆಲವೊಂದು ಗುಣಲಕ್ಷಣಗಳು ಇವೆ ಎಂಬುದನ್ನು ಸಹಾ ಆತನು ಗ್ರಹಿಸಿಕೊಂಡಿರುತ್ತಾನೆ. ಪ್ರೀತಿಯ ಚೈತನ್ಯಕ್ಕೆ ಸೇರಿರುವ ನಮ್ರತೆಯು ಸೃಷ್ಟಿಕರ್ತನು ಸ್ತ್ರೀಯರಿಗೆ ಹಂಚಿಕೊಟ್ಟಿರುವ ಗುಣಲಕ್ಷಣವೆಂದು ಮಾನ್ಯಮಾಡಲು ಆತನು ದೃಷ್ಟಿಹೀನನಾಗಿ ಹಿಂಜರಿಯುವುದಿಲ್ಲ. ಮತ್ತು ತನ್ನ ಹೃದಯ ಮತ್ತು ಬುದ್ಧಿಯ ಸ್ವಂತ ಗುಣಲಕ್ಷಣಗಳು ವಿಶೇಷವಾಗಿ ಸ್ತ್ರೀಯು ಸ್ವಾಭಾವಿಕವಾಗಿ ಹೊಂದಿರುವ ಕೆಲವೊಂದು ಗುಣಲಕ್ಷಣಗಳಿಂದ ಅನುಬಂಧಿತವಾಗಬೇಕಾಗಿದೆ ಎಂಬುದನ್ನು ಆತನು ಗ್ರಹಿಸುತ್ತಾನೆ. ಆದುದರಿಂದ, ತನ್ನಲ್ಲಿರುವ ಸ್ವಸ್ಥ ಮನಸ್ಸಿನ ಅನುಪಾತಕ್ಕನುಸಾರವಾಗಿ ತನ್ನ ಪತ್ನಿಯನ್ನು, ಆಕೆಯ ಸಹಕಾರವನ್ನು, ಆಕೆಯ ದೃಷ್ಟಿಕೋನವನ್ನು, ಆಕೆಯ ಸಹಾನುಭೂತಿಯನ್ನು, ಆಕೆಯ ಪ್ರೇಮವನ್ನು ಆತನು ಬಯಸುತ್ತಾನೆ ಮತ್ತು ಅವುಗಳನ್ನು ಅತಿಯಾಗಿ ಮೆಚ್ಚಿಕೊಳ್ಳುತ್ತಾನೆ.

ಪತ್ನಿಯ ಸಮಾಲೋಚನೆಯನ್ನು ಬಯಸುವುದೆಂದರೆ ಎಲ್ಲಾ ಪ್ರಕರಣಗಳಲ್ಲಿ ಆಕೆಯ ಅಭಿಪ್ರಾಯಕ್ಕೆ ವಿಧೇಯನಾಗುವುದು ಎಂಬ ಅರ್ಥವಲ್ಲ ; ಪತಿಯು ಪ್ರತಿಯೊಂದನ್ನೂ ಅಳೆದು, ಸಮತೋಲನಗೊಳಿಸಿದ ನಂತರವೇ ಅವನ್ನು ಪರಿಗಣನೆಗೆ ನಿರ್ಧರಿಸಬೇಕು, ತನ್ನ ಪತ್ನಿಯ ಮನೋಭಿಪ್ರಾಯಕ್ಕೆ ಸಮರ್ಪಕವಾದ, ಯಥೋಚಿತವಾದ, ಪರೋಪಕಾರಿಯಾದ ಅರ್ಥವಿವರಣೆಯನ್ನು ಕಂಡು ಕೊಳ್ಳಬೇಕು. ಯಜಮಾನಿಕೆಯ

ಜವಾಬ್ದಾರಿಯು ಪತಿಯ ಮೇಲಿದೆ ಮತ್ತು ಆತನು ಇದರಿಂದ ತಪ್ಪಿಸಿಕೊಳ್ಳಕೂಡದು. ಇದು ದೇವರಿಂದ ಹೊರಿಸಲ್ಪಟ್ಟದ್ದು, ಆತನ ಮನೆವಾರ್ತೆಯ ಭಾಗವೂ ಆಗಿದ್ದು ಅದಕ್ಕೆ ಆತನು ಕೆಲವು ಸಂಧರ್ಭಗಳಲ್ಲಿ ಲೆಕ್ಕ ಕೊಡಬೇಕಾಗುತ್ತದೆ.

ಅದರಂತೆ, ನೂತನ ಸೃಷ್ಟಿಯಾದ ಮತ್ತು ಕರ್ತನಲ್ಲಿ ವಿವಾಹಗೊಂಡ ಪತ್ನಿಯು ಸಹಾ ಸೂಕ್ತವಾದ ನಿರ್ಧಾರಗಳನ್ನು ಕೈಕೊಂಡು ಉತ್ತಮ ಜೋಡಿಯಾಗಿರುವುದರಿಂದ ತನ್ನ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ, ಮಾನವ ಸ್ವಭಾವಕ್ಕನುಸಾರವಾದ ತನ್ನ ಸ್ಥಾನಮಾನವನ್ನು ಗ್ರಹಿಸಿಕೊಳ್ಳುವಲ್ಲಿ ಆಕೆಗೆ ಕಿಂಚಿತ್ತೂ ತೊಂದರೆಯಾಗಕೂಡದು. "ಪತ್ನಿಯು ತನ್ನ ಪತಿಯನ್ನು ಗೌರವಿಸುವುದನ್ನು ನೋಡಿಕೊಳ್ಳಲಿ" ಎಂದು ಅಪೋಸ್ತಲನು ಹೇಳುತ್ತಾನೆ. ಆಕೆಯು ತನ್ನ ಪತಿಗೆ ಗೌರವ ತೋರುವಲ್ಲಿ ಕೊರತೆಯುಳ್ಳವಳಾಗಿದ್ದಾಳೆ ಎಂದು ಹೊರಗಿನವರಿಂದ ಬುದ್ದಿ ಹೇಳಿಸಿಕೊಳ್ಳುವವರೆಗೆ ಅಥವಾ ತನ್ನ ಪತಿಯೇ ಆಕೆಯು ವಿವಾಹದಲ್ಲಿನ ಒಡಂಬಡಿಕೆ ಅನುಸಾರವಾದ ಮತ್ತು ದೇವರ ವಾಕ್ಯಗಳಲ್ಲಿ ಹೇಳಿರುವ ಪತ್ನಿಯ ಕರ್ತವ್ಯ ಗಳಿಗನುಸಾರವಾದ ಸೂಕ್ತ ಗೌರವವನ್ನು ತನಗೆ ನೀಡುತ್ತಿಲ್ಲವೆಂದು ಸೂಚಿಸುವವರೆಗೆ ಆಕೆ ಕಾಯದಿರಲಿ. ಇದಕ್ಕೆ ವ್ಯತಿರಿಕ್ತವಾಗಿ, ಪತ್ನಿಯ ಕರ್ತವ್ಯ ಮತ್ತು ಜವಾಬ್ದಾರಿಗಳೇನೆಂದು ನೋಡುವಲ್ಲಿ ಆಕೆಯು ತನ್ನ ಪತಿಯನ್ನು ಗೌರವಿಸುವುದನ್ನು ಮತ್ತು ವಿವಾಹದಲ್ಲಿ ನೀಡಿದ ದೇವರ ವಾಕ್ಯಗಳಿಗನುಸಾರವಾದ ಪ್ರಮಾಣ ವಚನಗಳಿಗೆ ಕೊರತೆಯಾಗದಂತೆ ನೋಡಿಕೊಳ್ಳಲಿ. ಲೋಕಾನುಸಾರ ಮತ್ತು ಮಾನವ ವಿಚಾರಗಳಲ್ಲಿ ಇವುಗಳಿಗೆ ಯಾವುದೇ ಅರ್ಥದಲ್ಲಾದರೂ ಸರಿ, ಗಂಡನನ್ನು ಗೌರವಿಸುವುದು ಅಂದರೆ ಹೆಚ್ಚಾಗಿ ಜೀವನದ ಎಲ್ಲಾ ವ್ಯವಹಾರಗಳಿಗೆ ನಿಜವಾಗಿಯೂ ಪ್ರವೇಶಿಸುವುದು. ಇದು ಎಲ್ಲಾ ಕ್ರಿಯೆ, ಮಾತು ಮತ್ತು ಆಲೋಚನೆಗಳನ್ನು ಮನೆಯ ಮತ್ತು ಅದರ ಹಿತಕ್ಕನುಸಾರವಾಗಿ ಸ್ಪಂದಿಸುತ್ತದೆ ಮತ್ತು ಪ್ರಭಾವ ಬೀರುತ್ತದೆ.

ಅಪೋಸ್ತಲನಾದ ಪೇತ್ರನು ಇದೇ ವಿಷಯವನ್ನು ಹೆಚ್ಚುಕಡಿಮೆ ಅದೇ ರೀತಿಯ ಮಾತುಗಳಿಂದ ಈ ರೀತಿಯಲ್ಲಿ ನಮ್ಮ ಗಮನ ಸೆಳೆಯುತ್ತಾನೆ –"ಸ್ತ್ರೀಯರೇ ನಿಮ್ಮ ಗಂಡಂದರಿಗೆ ಅಧೀನರಾಗಿರಿ... ಸಾತ್ವಿಕವಾದ ಶಾಂತ ಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದೂ ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ. ಪೂರ್ವಕಾಲದಲ್ಲಿ ದೇವರ ಮೇಲೆ ನಿರೀಕ್ಷೆಯಿಟ್ಟ ಭಕ್ತೆಯರಾದ ಸ್ತ್ರೀಯರು ಸಹಾ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡರು. ಅವರು ತಮ್ಮ ತಮ್ಮ ಗಂಡಂದರಿಗೆ ಅಧೀನರಾಗಿದ್ದು ಯಾವ ಭೀತಿಗೂ ಗಾಭರಿಪಡದೆ ಒಳ್ಳೇದನ್ನೇ ಮಾಡುವವರಾಗಿದ್ದರು. ಸಾರಳು ಹಾಗೆಯೇ ಅಬ್ರಹಾಮನಿಗೆ ವಿಧೇಯಳಾಗಿದ್ದು ಅವನನ್ನು ಯಜಮಾನ ಎಂದು ಕರೆದಳು" (1 ಪೇತ್ರ 3:1–6). ಹೇಗೆ ಪುರುಷನು ತನ್ನ ಪತ್ನಿಯನ್ನು ಗೌರವಿಸುವುದರಿಂದ ತನ್ನನ್ನೇ ಗೌರವಿಸಿಕೊಳ್ಳುತ್ತಾನೆಯೋ ಹಾಗೆಯೇ ತನ್ನ ಗಂಡನನ್ನು ಗೌರವಿಸುವ ಸ್ತ್ರೀಯು ತನ್ನನ್ನೇ ಗೌರವಿಸಿಕೊಳ್ಳುತ್ತಾಳೆ. ಗಂಡನನ್ನು ತನ್ನ ಒಡೆಯ, ಯಜಮಾನ, ಮನೆಯ ಅಧಿಪತಿ ಎಂದು ಕರೆಯುವುದು ಗುಲಾಮಗಿರಿ ಎನಿಸದು. ಯಾಕೆಂದರೆ ಸಭೆಯು ಕರ್ತನ ದಾಸ್ಯ ಸ್ಥಾನವನ್ನು ಅಲಂಕರಿಸುವುದಿಲ್ಲ ಅಥವಾ ದಾಸತ್ವದ ಹೆದರಿಕೆಯನ್ನೂ ಉಂಟುಮಾಡುವುದಿಲ್ಲ ಆದರೆ ಅದು ಕರ್ತನಿಗೆ ಪ್ರೀತಿಭರಿತವಾದ ಗೌರವ ಮತ್ತು ಭಕ್ತಿಯನ್ನು ತೋರುತ್ತದೆ. ಇದುವೇ ತಕ್ಕ ಉದಾಹರಣೆಯಾಗಿದೆ.

ಗಂಡನ ಬಗ್ಗೆ ಈ ರೀತಿಯಾದ ಗೌರವವು ಪತ್ನಿಯು ತನ್ನ ನಿರ್ಣಯಗಳನ್ನು ಮಾಡಬಾರದು, ತನಗುಂಟಾಗುವ ಕಷ್ಟ, ತಾಪತ್ರಯ, ಮತ್ತು ತಾನು ಹೊರಲಾಗದ ಪೀಡನೆ ಮುಂತಾದವುಗಳನ್ನು ಗಂಡನ ಗಮನಕ್ಕೆ ತರಬಾರದು ಎಂಬ ಅರ್ಥವನ್ನುಂಟುಮಾಡದು. ಆದರೆ ಆಕೆ ತನ್ನ ದೃಷ್ಟಿಕೋನ, ತನ್ನ ನಿರೀಕ್ಷೆ ಮತ್ತು ಆಕಾಂಕ್ಷೆಗಳನ್ನು ಪ್ರಸ್ತುತಿಗೊಳಿಸುವಾಗ ಅದು ಆಜ್ಞಾಪೂರ್ವಕವಾಗಿ ಇರದೆ, ಗೌರವಯುತವಾಗಿ ಕೂಡಿದ್ದಾಗಿರಬೇಕು ಮತ್ತು ತನ್ನ ಗಂಡನ ಯಜಮಾನಿಕೆಯನ್ನು ಗ್ರಹಿಸುವಂತಿರಬೇಕು. ಪರಸ್ಪರ ಹಿತವನ್ನು ಕೋರುವ ಆಕೆಯ ಎಲ್ಲಾ ಆಲೋಚನೆಗಳೂ ಆತನ ಸಂತೋಷದಾಯಕ ನಿರ್ಣಯಗಳನ್ನು ಬಯಸುವಂತಿರಬೇಕು. ಆಕೆಯು ತನ್ನ ಗಂಡನು ತನಗೊಪ್ಪಿಸುವ ತನ್ನ ಮನೆಯ ನಿರ್ವಹಣೆಯಲ್ಲಿ ವಿವೇಕಿಯೂ, ವಿವೇಚನೆಯುಳ್ಳವಳೂ ಆಗಿದ್ದು ಆತನ ವಿಶ್ವಾಸವನ್ನು ಹೆಚ್ಚು ಹೆಚ್ಚಾಗಿ ಗಳಿಸಿಕೊಳ್ಳಬೇಕು ಮತ್ತು ಆತನ ಸಹಾಯಕಳಾಗಿ ಮನೆಯ ತನ್ನ ಜವಾಬ್ದಾರಿಕೆಯನ್ನು ಹೆಚ್ಚು ಹೆಚ್ಚಾಗಿ ನಿರ್ವಹಿಸಬೇಕು. ಆಕೆಯು ಒಬ್ಬ ಸಹಾಯಕಿ ಮತ್ತು ತನ್ನ ಗಂಡನ ಅನುಮತಿಯನ್ನು ಪಡೆಯಬೇಕೆಂಬ ಆಕೆಯ ಅಪೇಕ್ಷೆ ಇವುಗಳು ಅಪೋಸ್ತಲನ ಸಲಹೆಯಂತೆ ಸಭೆಗೆ ಕರ್ತನ ಬಗ್ಗೆ ಇರಬೇಕಾದ ಪ್ರಮಾಣಿಕತೆ ಮತ್ತು ಆತನ ಒಪ್ಪಿಗೆಯ ಅಪೇಕ್ಷೆ ಇಂತಹ ಮನೋವೃತ್ತಿಗಳಿಗನುಸಾರವಾಗಿರಬೇಕು. ಆದರೆ, ಸಭೆಯಲ್ಲಿಯಲ್ಲಿರುವಂತೆ ಕರ್ತನನ್ನು, ತನ್ನ ಯಜಮಾನನ್ನು ಯಾವುದೇ ಮಟ್ಟದಲ್ಲಿ ಕ್ರಿಯೆ ಮತ್ತು ಹಿತಕ್ಕೆ ಸಂಬಂಧಿಸಿದಂತೆ ಅಲಕ್ಷಿಸುವುದು ಒಂದು ಅಪರಾಧವಾಗಿದೆ. ಆದುದರಿಂದ ಪತ್ನಿಯು ತನ್ನ ಇಹಲೋಕದ ಮನೆಯ ಕ್ರಮಪಡಿಸುವಿಕೆಯಲ್ಲಿ ಯಾವುದೇ ಮಟ್ಟದಲ್ಲಿ ತನ್ನ ಗಂಡನನ್ನು ಅಲಕ್ಷಿಸುವುದು ಎಲ್ಲಾ ಸಮಯಗಳಲ್ಲಿ ತನ್ನ ಕುಟುಂಬದ ಯಜಮಾನನ್ನು ಗೌರವಿಸುತ್ತೇನೆಂದು ಮಾಡಿಕೊಂಡ ಪ್ರಮಾಣದ ವಿರುದ್ಧವಾದ ಅಪರಾಧವಾಗುತ್ತದೆ ಮತ್ತು ತನ್ನ ಒಡಂಬಡಿಕೆಯು ಉಲ್ಲಂಘನೆಯಾಗುತ್ತದೆ ಎಂದು ಭಾವಿಸಿಕೊಳ್ಳಬೇಕು.

ಇಬ್ಬರು ನೂತನ ಸೃಷ್ಟಿಗಳು ಸರಿಯಾದ ಜೋಡಿಯಾಗದಿರುವ ಪ್ರಕರಣದಲ್ಲಿ ಹೆಂಡತಿಯು ಸ್ಪಷ್ಟವಾಗಿ ಪ್ರಧಾನ್ಯತೆಯುಳ್ಳವಳಾಗಿರುವಲ್ಲಿ – ಸಂಗತಿಗಳನ್ನು ವ್ಯವಸ್ಥೆಪಡಿಸುವಲ್ಲಿ ಗಂಡಾತರವಿದೆ. ಮನೆಯನ್ನು ಮುನ್ನಡಿಸುವಲ್ಲಿ, ಹಣವನ್ನು ಖರ್ಚುಮಾಡುವಲ್ಲಿ, ಮಕ್ಕಳ ತರಬೇತಿ ಮುಂತಾದವುಗಳಲ್ಲಿ ಪತ್ನಿಗೆ ಉತ್ತಮವಾದ ನಿರ್ಣಯಗಳಿದ್ದಲ್ಲಿ ಆಕೆಯು ಆ ಕಾರಣದಿಂದ ಮನೆಯ ಯಜಮಾನಿಕೆಯನ್ನು ವಹಿಸುವ ಅನಿರ್ಬಂಧತೆಯನ್ನು ಹೊಂದಿದ್ದಾಳೆ ಎಂಬುವುದಲ್ಲ ಮತ್ತು ಆಕೆ ತನ್ನ ಗಂಡನ ಮೇಲೆ

ಆತನು ಆಕೆಯ ಮಕ್ಕಳಲ್ಲಿ ಒಬ್ಬನೋ ಅಥವಾ ಮನೆಯ ಸೇವಕನೋ ಎಂಬಂತೆ ಹಕ್ಕು ಚಲಾಯಿಸಲಾಗದು. ಆ ರೀತಿಯ ದೇವರ ನಿಯಮದ ಉಲ್ಲಂಘನೆಯು ಒಂದು ವೇಳೆ ಆರ್ಥಿಕವಾದ ಅಥವಾ ಲೌಕಿಕವಾದ ಹಾನಿಯನ್ನುಂಟು ಮಾಡದಿದ್ದರೂ ಪುರುಷನಿಗೆ ಮಾತ್ರವಲ್ಲದೆ ಸ್ತ್ರೀಗೂ ಖಂಡಿತವಾಗಿಯೂ ಆತ್ಮೀಕವಾದ ಅನಾನುಕೂಲತೆ ಗಳನ್ನುಂಟುಮಾಡುತ್ತದೆ.

ಅಂತಹ ಪರಿಸ್ಥಿತಿಗಳಲ್ಲಿ ಪುರುಷನು ತನ್ನಲ್ಲಿರುವ ಅಲ್ಪ ಪೌರುಷವನ್ನೂ ಕಳಕೊಂಡು ಕ್ರಮೇಣವಾಗಿ ಎಲ್ಲವನ್ನೂ ತನ್ನ ಪತ್ನಿಗೆ ಒಪ್ಪಿಸಿಕೊಟ್ಟು ಜೀವನ ಸಾಗಿಸುವಲ್ಲಿ ಮತ್ತು ಆಕೆಯ ಆಜ್ಞೆಗಳನ್ನು ಪಾಲಿಸುವಲ್ಲಿ ಕೇವಲ ಆಕೆಯ ಸಾಧನವಾಗಿ, ಗುಲಾಮನಾಗಿ ಬಿಡುತ್ತಾನೆ. ಅಂತಹ ಪರಿಸ್ಥಿತಿಯು ಒಬ್ಬ ನೂತನ ಸೃಷ್ಟಿಯಾದ ಪತಿಗೆ ಅನುಕೂಲಕರವಾಗಿರುವುದಿಲ್ಲ; ಆತನ ಮಾನವ ಸ್ವಭಾವದ ಅಂತಹ ಹೀನೈಕೆಯು ಆತನ ಮೇಲೆ ಅನಾನುಕೂಲ ಪರಿಣಾಮಗಳನ್ನು ಬೀರಿ ಆತನನ್ನು ಚೈತನ್ಯ ಹೀನನನ್ನಾಗಿ ಮಾಡುವುದಲ್ಲದೆ ಕೃಪೆಯ, ಜ್ಞಾನದ ಮತ್ತು ಸತ್ಯದ ಸೇವೆಯಲ್ಲಿನ ಆತನ ಬೆಳವಣಿಗೆಯನ್ನು ಖಂಡಿತವಾಗಿಯೂ ಕುಂಠಿತಗೊಳಿಸುತ್ತವೆ. ಇದರ ಪರಿಣಾಮಗಳು ಪತ್ನಿಯ ಮೇಲೆಯೂ ಆಕೆಯ ತಪ್ಪು ಕ್ರಮದ ಅನುಸರಣೆಯ ಕಾರಣ ಹೆಚ್ಚು ಅಥವಾ ಕಡಿಮೆ ಹಾನಿಕರವಾಗಿ ಕಂಡುಬರುತ್ತವೆ. ಈ ಸಂಗತಿಗಳು ಅತಿರೇಕಗೊಂಡಾಗ ಪತ್ನಿಯು–ಆಕೆಯ ಪತಿಯು ಕ್ರಮೇಣವಾಗಿ ಅದನ್ನು ಆಕೆಯ ಮೇಲೆ ಬೀಳತೊಡಗಿಸಿದಾಗ ಅಥವಾ ಆತನ ಕೈಯಿಂದ ಜವಾಬ್ದಾರಿಗಳು ಕ್ರಮೇಣ ಆಕೆಗೆ ಜಾರಿಹೋಗುವಾಗ ಇದರ ಭಾರವು ತನ್ನ ತಾಯ್ತನದ ಜವಾಬ್ದಾರಿಗಳೊಂದಿಗೆ ಆಕೆಗೆ ಹೊರೆಯಾಗುವ ಅನುಭವವಾಗುತ್ತದೆ; ಪತಿ–ಪತ್ನಿಯ, ತಂದೆ–ತಾಯಿಯ ಎರಡೂ ಜವಾಬ್ದಾರಿಗಳನ್ನು ನಿಭಾಯಿಸುವ ಪ್ರಯತ್ನದಲ್ಲಿ ಆಕೆಯು ನಿಶ್ಚಯವಾಗಿಯೂ ಓರ್ವ "ಉದ್ಯೋಗಿ ಮಹಿಳೆ" ಯಂತಾಗಿ ಹೆಚ್ಚುಕಡಿಮೆ ದುಡುಕಿನವಳೂ, ಆತ್ಮಪ್ರಜ್ಞಾವಂತಳೂ ಆಗಿ ಬಿಡುತ್ತಾಳೆ. ಆಕೆಯ ಸ್ನೇಹಿತೆಯರು ಆಕೆಯು ತೋರುವ ಲಕ್ಷಣದ ಬಲದ ಬಗ್ಗೆ ಆಕೆಯನ್ನು ಮೆಚ್ಚಿಕೊಳ್ಳಬಹುದು ಮತ್ತು ಆಕೆಯ ಈ ಕ್ರಮವು ತಡೆಯಲಾರದ್ದಾಗಿತ್ತೆಂದು ಪರಿಗಣಿಸಬಹುದು. ಅವರು ಆಕೆಯನ್ನು ಪ್ರೋತ್ಸಾಹಿಸಲೂ, ಆಕೆಯು ಒಬ್ಬ ಶಕ್ತಿಶಾಲಿ ಮನಸ್ಸುಳ್ಳ ಮಹಿಳೆಯಾಗಿ ಪ್ರಶಂಸನಾರ್ಹ ಕಾರ್ಯವನ್ನು ಮಾಡುತ್ತಿದ್ದಾಳೆಂದು ಆಕೆಯನ್ನು ಮೇಲೆತ್ತಲೂಬಹುದು. ಆದರೆ ಇವರಲ್ಲಿ ಯಾರೂ ಆಕೆ ನಿಜವಾದ ರೀತಿಯ ಸ್ತ್ರೀಯತ್ವ ಮತ್ತು ಮಾತೃತ್ವಗಳ ಹಾದಿಯಲ್ಲಿ ಮುಂದುವರೆಯುತ್ತಿದ್ದರೆ ಆಕೆಯನ್ನು ಪ್ರೀತಿಸುತ್ತಿದ್ದಷ್ಟು ಈಗ ಪ್ರೀತಿಸಲಾರರು. ಇದಕ್ಕೂ ಹೆಚ್ಚಾಗಿ ಇಂತಹ ಕ್ರಮದಿಂದ ಅಭಿವೃದ್ಧಿಗೊಂಡ ಶಾರೀರಿಕ ಗುಣಲಕ್ಷಣಗಳು ಕ್ರಿಸ್ತನಲ್ಲಿ ಒಬ್ಬ ನೂತನ ಸೃಷ್ಟಿಯಾದ ಆಕೆಯ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತವೆ ಮತ್ತು ಅರಿವಿಲ್ಲದೆ ಆಕೆ ಸಭೆಗೆ ಸಂಬಂಧಿಸಿದ ವಿಷಯಗಳಲ್ಲಿ ಕಡಿಮೆ ಆತ್ಮೀಕತೆಯುಳ್ಳವಳೂ ಹೆಚ್ಚು ಸ್ವಯಂಪ್ರಜ್ಞಾವಂತಳೂ ಆಗಿ ಬಿಡುತ್ತಾಳೆ.

ನೂತನ ಸೃಷ್ಟಿಗಳ ನಡುವೆ ಉಂಟಾಗಬಹುದಾದ ಇಂತಹ ತಪ್ಪು ಜೋಡಿಗಳಲ್ಲಿ ಅನುಸರಿಸಬೇಕಾದ ಸರಿಯಾದ ಕ್ರಮವೇನೆಂದು ಪತಿಯು ತನಗೆ ತಾನೇ ಹೀಗೆ ಹೇಳಿಕೊಳ್ಳಬೇಕಾಗುತ್ತದೆ – "ನಾನು ನನ್ನ ಪತ್ನಿಯನ್ನು ದೇವರ ವ್ಯವಸ್ಥೆಗೆ ವಿರೋಧವಾಗಿ ಕೊಂಡೊಯ್ದಿದ್ದೇನೆ. ಈ ರೀತಿಯಲ್ಲಿ ನಾನು ಸಂಸಾರದಲ್ಲಿನ ಅಸುಖದ ಮಹಾ ಕೇಡಿಗೆ ಕಾರಣನಾಗಿದ್ದೇನೆ. ಈಗ ನನಗಿರುವ ಏಕೈಕ ಮಾರ್ಗವೆಂದರೆ ನನ್ನ ಸಾಮರ್ಥ್ಯವನ್ನೂ ಮೀರಿ ಪತಿಯ ಉತ್ತಮ ಆದರ್ಶಗಳನ್ನು ತಲುಪಲು ಹೆಣಗುವುದು. ಆದಷ್ಟೂ ಕರ್ತನ ಉದಾಹರಣೆಯ ವಿನ್ಯಾಸವನ್ನು ಅನುಸರಿಸುವುದು. ನಾನು ನನ್ನ ಎಲ್ಲಾ ನಡೆ ನುಡಿಗಳಲ್ಲಿ ಆದಷ್ಟು ಜಾಗರೂಕನಾಗಿರತಕ್ಕದ್ದು – ಮೇಲಿನಿಂದ ಬರುವ ವಿವೇಕವನ್ನು ನಿಷ್ಠೆಯಿಂದ ಬಯಸತಕ್ಕದ್ದು. ಈ ರೀತಿಯಲ್ಲಿ ನಾನು ಸ್ವಾಭಾವಿಕವಾಗಿ ಅರ್ಹನಲ್ಲದದಿದ್ದರೂ ಮನೆ ಯಜಮಾನನ ಜವಾಬ್ದಾರಿಗಳನ್ನು ಆದಷ್ಟು ಹೆಚ್ಚಾಗಿ ನಿರ್ವಹಿಸತಕ್ಕದ್ದು."

ಅಂತಹ ಪರಿಸ್ಥಿತಿಯಲ್ಲಿರುವ ಪತ್ನಿಯು ಸಹಾ ಹೀಗೆ ಹೇಳಿಕೊಳ್ಳಬೇಕು –" ನಾನು ಕರ್ತನ ದೈವಿಕ ನಿಯಮವನ್ನು ನಿರ್ಲಕ್ಷಿಸಿದ್ದೇನೆ. ನಾನು ನನ್ನ ಪತಿಯನ್ನು ಗೌರವಿಸದೆ ಹೊಂದಾಣಿಕೆಯಿಲ್ಲದ ತಪ್ಪು ಜೋಡಿಯಾಗಿದ್ದೇನೆ, ಆದರೆ ಸ್ವಯಂಸ್ಫೂರ್ತಿಯಿಂದ ನಾನು ಸ್ವಾಭಾವಿಕ ಪ್ರತಿಭೆಯಿಂದ ನನ್ನನ್ನು ಆತನಿಗಿಂತ ಶ್ರೇಷ್ಠಳು ಅಂದುಕೊಂಡಿದ್ದೇನೆ. ನಾನು ಈ ಸಂಗತಿಗಳನ್ನು ಉತ್ತಮ ಪಡಿಸಿಕೊಳ್ಳಬೇಕು. ನಾನು ನನ್ನ ಪಾಲಿನದನ್ನು ನಿಷ್ಠೆಯಿಂದ ಪಾಲಿಸಬೇಕು; ನನ್ನ ಪತಿಯು ಕೊರತೆಯುಳ್ಳವನೆಂದು ನನಗೆ ಕಂಡು ಬರುವ ಸಂಗತಿಗಳಲ್ಲಿ ಸೂಕ್ತ ಸಮ ಪ್ರಮಾಣವನ್ನರಿತು ನಾನು ಆತನಿಗೆ ಹೇಗೆ ಸಹಾಯ ಮಾಡುವುದು ಆತನನ್ನು ಮೇಲಕ್ಕೆ ಎತ್ತಿ ಆತನನ್ನು ಒಬ್ಬ ಕುಲೀನ ವ್ಯಕ್ತಿಯನ್ನಾಗಿ ಮಾಡುವ ಬಗ್ಗೆ ಮತ್ತು ಆತನ ಸಾಮರ್ಥ್ಯಗಳನ್ನು ಸಾಧ್ಯವಾದಷ್ಟು ವಿಸ್ತರಿಸಲು ನನ್ನ ನೈಪುಣ್ಯತೆಯನ್ನು ಉಪಯೋಗಿಸ ಬಯಸುತ್ತೇನೆ ಮತ್ತು ಮೇಲಿನಿಂದ ದೊರೆಯುವ ಆಶೀರ್ವಾದಗಳಿಗಾಗಿ ಪ್ರಾರ್ಥಿಸುತ್ತೇನೆ. ಈ ರೀತಿಯಲ್ಲಿ ಆತನ ಬಗ್ಗೆ ನನಗಿರುವ ಪ್ರೀತಿ ಮತ್ತು ಗೌರವಗಳು ಹೆಚ್ಚಲಿ. ನನ್ನ ವೈವಾಹಿಕ ಒಡಂಬಡಿಕೆಯಲ್ಲಿ ಇದಕ್ಕಿಂತ ಕಡಿಮೆಯಾದ ನನ್ನ ಕರ್ತವ್ಯ ಬೇರೆ ಯಾವುದೂ ಇಲ್ಲ – ಇವನ್ನು ಕರ್ತನಿಗಾಗಿ ನಿಷ್ಠೆಯಿಂದ ನೆರವೇರಿಸಲಾಗುವುದು. ಆತನ ಬಲಹೀನತೆಗಳು ಮತ್ತು ಬಲಹೀನ ತೀರ್ಮಾನಗಳ ಬಗ್ಗೆ ನಾನು ಅವುಗಳನ್ನು ಹೊರಗಿನವರಿಂದ ಮುಚ್ಚಿಡುವುದಲ್ಲದೆ ಸಾಧ್ಯವಾದ ಮಟ್ಟಿಗೆ ಅವುಗಳನ್ನು ನನ್ನಿಂದಲೂ ಮುಚ್ಚಿಡುತ್ತೇನೆ; ಅವುಗಳನ್ನು ನನ್ನ ಪತಿಗೆ ಹೇಳುವಾಗ ನಾನು ಯಾವುದೇ ಉಲ್ಲೇಖವನ್ನಾಗಲೀ ಮಾಡದೆ ಆ ಬಗ್ಗೆ ನನ್ನ ಹೆಚ್ಚಿನ ಸಾಮರ್ಥ್ಯವನ್ನು ಸಹಾ ತೋರಗೊಡದಿರಲು ಬಯಸುತ್ತೇನೆ. ತಕ್ಕ ಸಮಯದಲ್ಲಿ ಆತನ ಬಲಹೀನತೆಗಳೇ ಆತನಿಗೆ ನನ್ನ ಉತ್ತಮ ನಿರ್ಣಯಗಳನ್ನು ಒಪ್ಪಿಸಿಕೊಡುತ್ತವೆ ಎಂದು ನಾನು ನಿರೀಕ್ಷಿಸುತ್ತೇನೆ. ಆದರೆ, ಹೇಗೂ ಇವುಗಳನ್ನು ಆತನ ಮೇಲೆ ನಾನು ಒತ್ತಾಯಿಸುವುದಿಲ್ಲ ಅಥವಾ ಆಗ್ರಹಪಡಿಸುವುದಿಲ್ಲ. ಆದರೆ ಅವುಗಳನ್ನು ಒಬ್ಬ ಸಹಾಯಕ ಸಂಗಾತಿಗೆ ಸೂಕ್ತವೆನಿಸುವಂತೆ

ದಯಾಪೂರ್ವಕವಾಗಿ ಅವನಿಗೆ ತಿಳಿಸುತ್ತೇನೆ. ಇನ್ನು ಮುಂದೆ ಆತನು ನನ್ನ ಸಮಾಲೋಚನೆಗಳನ್ನು ಬಯಸಿ ಅವುಗಳಿಗೆ ಆತನ ಜೀವನದ ಎಲ್ಲಾ ಸಂಗತಿಗಳಲ್ಲಿ ಹೆಚ್ಚು ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬಹುದೆಂಬುದು ನನ್ನ ನಿರೀಕ್ಷೆಯಾಗಿದೆ. ಈ ರೀತಿಯಲ್ಲಿ ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ನಾವು ಕ್ರಿಸ್ತನಿಗೂ ಮತ್ತು ಸಭೆಗೂ ಇರುವ ಸಂಬಂಧದಂತಹ ದೈವಿಕ ವಿನ್ಯಾಸಕ್ಕನುಸಾರವಾಗಿ ಸಾಮರಸ್ಯದಲ್ಲಿ ಬೆಳೆಯಬಹುದು. ಈ ರೀತಿಯಾಗಿ ನಾನು ಒಬ್ಬ ಪತ್ನಿಯಾಗಿ ದೈವಿಕ ವ್ಯವಸ್ಥೆಗೆ ನಮ್ರತೆ ಮತ್ತು ವಿಧೇಯತೆಗಳನ್ನು ತೋರಿಸುವುದರ ಮೂಲಕ ದೈವಾಶೀರ್ವಾದಗಳನ್ನು ಪಡಕೊಳ್ಳಬಹುದು. ನನ್ನ ಪತಿಯೂ ಸಹಾ ನಾನು ಆತನಿಗೆ ಪ್ರಭಾವಗಳನ್ನು ಎತ್ತಿ ಹಿಡಿಯುವುದರಲ್ಲಿ ಶಕ್ತಳಾಗುವ ಮೂಲಕ ಆಶೀರ್ವಾದವನ್ನು ಹೊಂದಿ ಕೊಳ್ಳುತ್ತಾನೆ. ಈ ರೀತಿಯಲ್ಲಿ ಮೊದಲಿಗೆ ಅನಾನುಕೂಲವೆಂದು ಕಂಡುಬಂದ ನಮ್ಮ ತಪ್ಪಾದ ಜೋಡಿಯು ದೇವರ ಕೃಪೆಯಿಂದ – ಆತನ ವಾಕ್ಯದಲ್ಲಿನ ಸೂಚನೆಗಳನ್ನು ಪಾಲಿಸುವುದರ ಮೂಲಕ – ನಮ್ಮಿಬ್ಬರನ್ನೂ ಅಪೋಸ್ತಲರು ನೇಮಿಸಿದ ದೈವಿಕ ಮಟ್ಟದ ಹತ್ತಿರಕ್ಕೆ ತರುವುದರಲ್ಲಿ ಫಲದಾಯಕವಾಗುತ್ತದೆ.

ಮೇಲಿನದಿಕ್ಕಿಂತಲೂ ಭಿನ್ನವಾದ ಪ್ರಕರಣದ ಸಾಧ್ಯತೆಯ ಸಲಹೆಯನ್ನು ಸಹಾ ನೀಡಬಹುದಾಗಿದೆ. ಅದ್ಯಾವುದೆಂದರೆ, ಶಾರೀರಕವಾಗಿ ಉತ್ತಮವಾಗಿ ಜೋಡಿಯಾದ ಇಬ್ಬರು ನೂತನ ಸೃಷ್ಟಿಗಳು ಕೆಲವು ವರ್ಷಗಳ ಅನ್ಯೋನತೆಯಲ್ಲಿ ಪರಸ್ಪರ ಸಹಾಯಕರಾಗಿದ್ದ ನಂತರ ತಪ್ಪು ಜೋಡಿಯಾಗಬಹುದು. ಅಂತಹ ಅನಾನುಕೂಲಕಾರಿ ಆರಂಭಕ್ಕೆ ಮತ್ತು ಅಂತಹ ಮುಕ್ತಾಯಕ್ಕೆ, ಅವರಲ್ಲಿ ಒಬ್ಬರಲ್ಲ ಒಬ್ಬರು ಪ್ರೀತಿಯ ಪವಿತ್ರ ಆತ್ಮನನ್ನು ಪೂರ್ಣವಾಗಿ ಅಲ್ಲವಾದರೂ ಹೆಚ್ಚಿನ ಮಟ್ಟಿಗಾದರೂ ಕಳೆದುಕೊಂಡಿದ್ದಾರೆಂಬ ಅರ್ಥ ನೀಡುತ್ತದೆ. ಅವರಲ್ಲಿ ಯಾರೋ ಒಬ್ಬರು ಅಪೋಸ್ತೋಲಿಕ ಪ್ರತಿಬಂಧಕಾಜ್ಞೆಗಳನ್ನು ಹಾಗೂ ಪತಿಯ ಬಗ್ಗೆ ಪತ್ನಿಯ ಅಥವಾ ಪತ್ನಿಯ ಬಗ್ಗೆ ಪತಿಯ ದೈವ ನೇಮಿತವಾದ ಸಮಗ್ರ ಕರ್ತವ್ಯಗಳನ್ನು ನಿರ್ಲಕ್ಷಿಸಿದ್ದಾದರೆ, ಈ ತಪ್ಪು ಪತಿಯದಾಗಿದ್ದರೆ ಮತ್ತು ಆತನು ತನ್ನ ಪತಿಗೆ ಒದಗಿಸಬೇಕಾದವುಗಳನ್ನು ಸ್ಥಗಿತಗೊಳಿಸಿದ್ದರೆ, ಆಕೆಯನ್ನು ಪ್ರೇಮದಿಂದ ಪಾಲಿಸುವುದನ್ನು ನಿಲ್ಲಿಸಿದ್ದರೆ ಮತ್ತು ಇದಕ್ಕೆ ವ್ಯತಿರಿಕ್ತವಾಗಿ ಹೃದಯದಿಂದ, ಒಲವಿನಿಂದ ಅಥವಾ ನಿಜವಾಗಿಯೂ ಆಕೆಯನ್ನು ತೊರೆದಿದ್ದರೆ ಆತನು ಕರ್ತನಿಂದ, ಆತನ ಆತ್ಮನ ಮಾರ್ಗದರ್ಶನದಿಂದ ಮತ್ತು ಇವುಗಳು ಮೊದಲಿಗೆ ಪರಿಶುದ್ಧವೂ, ನಂತರ ಸಮಾಧಾನವಾದದ್ದೂ, ವಿನಯವುಳ್ಳದ್ದೂ ಕರುಣೆ ಮುಂತಾದ ಉತ್ತಮ ಫಲಗಳಿಂದ ಕೂಡಿ ಸುಲಭವಾಗಿ ವಿಜ್ಞಾಪಿಸುವಂತದ್ದೂ ಆಗಿದ್ದು ಮೇಲಿನಿಂದ ಬರುವ ವಿವೇಕದಿಂದ ಭಯಂಕರವಾಗಿ ತೊರೆದಿದ್ದಾನೆ ಎಂಬರ್ಥ. ಇಂತಹ ಸಂಧರ್ಭಗಳಲ್ಲಿ ಅವನು ಜಯಹೊಂದಿರುವವನು ಎಂಬದಾಗಿ ಕರ್ತನು ಒಪ್ಪಿದ್ದಾನೆಂದು ಅವನು ಸುಧಾರಣೆ ಹೊಂದುವವರೆಗೂ ನಾವು ಪರಿಗಣಿಸಲಾಗದು.

ಅಥವಾ ದೋಷವು ಪತ್ನಿಯಲ್ಲಿದ್ದಿರಬಹುದು. ಆಕೆಯು ದುಡುಕಿನವಳೂ, ಗರ್ವಿಷ್ಠಳೂ, ಸ್ವಯಂ ಅಭಿಪ್ರಾಯವುಳ್ಳವಳೂ ಆಗಿದ್ದು ಕ್ರಮೇಣ ತನ್ನ ಪತಿಯ ಮೇಲಿನ ಗೌರವವನ್ನು ಕಳಕೊಳ್ಳುವವಳೂ ಆಗಿದ್ದಿರಬಹುದು – ಆತನನ್ನು ತಪ್ಪಾಗಿ ತಿಳಿದಿದ್ದಿರಬಹುದು ಮತ್ತು ಆತನನ್ನು ತ್ಯಜಿಸಿದವಳೂ, ಅತನ ಮೇಲೆ ತಪ್ಪಾಗಿ ಅನೇಕ ಅಪವಾದಗಳನ್ನು ಹೊರಿಸುವವಳಾಗಿದ್ದಿರಬಹುದು. ಇಂತಹ ಸಂಗತಿಗಳು ಆಕೆಯ ಮನಸ್ಸಿನ ದುಃಸ್ಥಿತಿಯನ್ನು ಸೂಚಿಸುವುದಾಗಿದ್ದು, ವಾಕ್ಯಗಳ ಉಪದೇಶದಿಂದ ಬಹಳ ದೂರ ಸರಿದಿದ್ದಾಗಿದೆ. ಬಾಹ್ಯರೂಪದ ದೈವಿಕತೆಯನ್ನು ಎಷ್ಟರ ಮಟ್ಟಿಗೆ ಕಾಪಾಡಿಕೊಂಡಿದ್ದರೂ ಖಂಡಿತವಾಗಿಯೂ ಇದು ಆತ್ಮೀಕ ನಿಕೃಷ್ಟಸ್ಥಿತಿಯನ್ನು ಬಿಂಬಿಸುತ್ತದೆ. ಇಂಥವರು ಖಂಡಿತವಾಗಿಯೂ ಪರಲೋಕದ ಮದಲಿಂಗನ ಮುಂದೆ ಆತನ ಅಂಗೀಕಾರದ ನಿರೀಕ್ಷೆಯೊಡನೆ ಕಾಣಿಸಿಕೊಳ್ಳಲು ಬಲಹೀನ ಸ್ಥಿತಿಯಲ್ಲಿರುತ್ತಾರೆ. ಯಾಕೆಂದರೆ, ಲೌಕಿಕ ಮದಲಿಂಗನೊಡನೆ ಅಂತಹ ಕ್ರಮವು ನಿಶ್ಚಯವಾಗಿಯೂ ಕರ್ತನ ಬಗ್ಗೆ ಸಭೆಯ ಕರ್ತವ್ಯದ ಕುರಿತಾಗಿ ಸ್ವಲ್ಪಮಟ್ಟಿನ ಮೆಚ್ಚುಗೆಯನ್ನು ಸೂಚಿಸುವುದಾಗಿದೆ. ಆಕೆ ಕಂಡ ಈ ಲೋಕದ ಪತಿಯೊಡನೆ ಅಪ್ರಮಾಣಿಕಳಾಗಿರುವುದಾದಲ್ಲಿ ಅದು ಆಕೆ ಕಾಣದ ಪರಲೋಕದ ಮದಲಿಂಗನಿಗೆ (Heavenly Bridegroom) ಇನ್ನೂ ಹೆಚ್ಚಿನ ಅಪ್ರಮಾಣಿಕತೆಯನ್ನು ತೋರಿಸುವುದೆಂದು ಖಂಡಿತ ವಾಗಿಯೂ ವಾದಿಸಲಾಗುವುದು.

ನೂತನ ಸೃಷ್ಟಿ ಮತ್ತು ನೂತನ ಸೃಷ್ಟಿಯಲ್ಲದವರ ನಡುವಿನ ಲೌಕಿಕ ಸಂಬಂಧವು ಹೆಚ್ಚಿನ ಗೊಂದಲವನ್ನುಂಟು ಮಾಡುವುದಾಗಿದೆ. ಅನೇಕರು ಇಂತಹ ಸ್ಥಿತಿಯಲ್ಲಿದ್ದಾರೆ. ಇಬ್ಬರೂ ದೈಹಿಕವಾಗಿ ಉತ್ತಮ ಒಡನಾಟವಿದ್ದಲ್ಲಿ ಸಮಸ್ಯೆಯು ಇನ್ನೂ ಕಠಿಣಗೊಳ್ಳುತ್ತದೆ; ಆದರೆ ಅವು ಶಾರೀರಿಕವಾಗಿಯೂ, ಆತ್ಮೀಕವಾಗಿಯೂ ಸರಿಯಾದ ರೀತಿಯಲ್ಲಿ ಹಂಚಲ್ಪಡದೇ ಇರುವಲ್ಲಿ ತೊಂದರೆಗಳು ಹೆಚ್ಚುತ್ತಾ ಹೋಗುತ್ತವೆ. ಪತಿಯು ನೂತನ ಸೃಷ್ಟಿಯಾಗಿದ್ದು, ಪತ್ನಿಯು ಲೌಕೀಕ ರೀತಿಯ ಆತ್ಮವನ್ನು ಹೊಂದಿರುವಲ್ಲಿ, ಆತನ ನಿಜವಾದ ಧರ್ಮವು ಮತ್ತು "ದೃಢಮನಸ್ಸಿನ ಉತ್ಸಾಹವು" (Spirit of a sound mind) ಎಲ್ಲವುಗಳ ಮೇಲೆ ಪ್ರಭಾವ ಬೀರುವುದಾಗಿದ್ದು, ಅದು ಎಲ್ಲಾ ಸಂಗತಿಗಳ ಬಗ್ಗೆ ಉಪದೇಶಿಸಿ ನಿಗ್ರಹಿಸುತ್ತಾ ಕ್ರಮೇಣವಾಗಿ ಆತನ ಪ್ರಾಪಂಚಿಕ ಪತ್ನಿಯಲ್ಲಿ ಸ್ವಾಭಾವಿಕವಾದ ಶ್ರೀಮಂತ ಗುಣಲಕ್ಷಣಗಳೂ, ಮಧುರಶೀಲ ಪ್ರವೃತ್ತಿ ಇರುವಲ್ಲಿ ಅದು ಆತನಲ್ಲಿ ಆಕೆಗೆ ಸದಭಿಪ್ರಾಯದಲ್ಲಿ ಏರುತ್ತಾ ಏರುತ್ತಾ ಹೋಗುತ್ತದೆ. ಆತನ ವಿವೇಚನಾ ಪೂರ್ವಕವಾದ ನಡವಳಿಕೆ, ಆತನು ಆಕೆಗೆ ಉದ್ದೇಶಪೂರ್ವಕವಾಗಿ ಅನುಗ್ರಹಿಸುವ ಮನಸ್ಸಾಕ್ಷಿಯ ಪೂರ್ಣ ಸ್ವಾತಂತ್ರ್ಯ, ಮತ್ತು ನೀತಿನಿಯಮಗಳು ಆತನ ಸ್ವಯಂ ಶ್ರದ್ಧೆ ಇವುಗಳೆಲ್ಲವೂ ಇವರ ಅನ್ಯೋನತೆಯನ್ನ ಸಂತೋಷ ಕರವನ್ನಾಗಿ ಮಾಡುವುದಾಗಿದೆ. ಆದರೆ ನೂತನ ಸೃಷ್ಟಿಯಾಗಿರುವ ಪತಿಯು ಬೇರೆಲ್ಲಾ ಸಾಂಗತ್ಯಗಳಿಗಿಂತ ಹೆಚ್ಚಾಗಿ ಮೆಚ್ಚಿಕೊಳ್ಳುವ ಆತ್ಮೀಕ ಸಾಂಗತ್ಯದ ಕೊರತೆಯನ್ನು ತನ್ನ ಪತ್ನಿಯಲ್ಲಿ ಕಾಣುವವನಾಗಿದ್ದಾನೆ. ಆದರೆ ಅಂತಹ ಉದಾತ್ತ ಮನಸ್ಸಿನ ಪತ್ನಿಯ ಬಗ್ಗೆ ಆತನು ಮಾಡುವ ಪ್ರಾರ್ಥನೆಗಳು, ಆತನ ಮಾದರಿ ಮತ್ತು ನಿಜವಾದ ಮನಸ್ಸನ್ನು ವಿವೇಚನಾಪೂರ್ವಕವಾಗಿ ವ್ಯಕ್ತಪಡಿಸುವಿಕೆ ಮುಂತಾದವು

ಗಳೆಲ್ಲವೂ ಎಲ್ಲಾ ಸಾಧ್ಯತೆಗಳಲ್ಲಿ ಅಂತಹ ಪತ್ನಿಯನ್ನು ಕರ್ತನಿಗಾಗಿ ಗೆದ್ದುಕೊಡುತ್ತದೆ ಮತ್ತು ಆಕೆಯನ್ನು ಆತ್ಮೀಕಳನ್ನಾಗಿಯೂ ಯೋಗ್ಯ ಸಂಗಾತಿಯನ್ನಾಗಿಯೂ ಮಾಡುತ್ತದೆ. ಈ ರೀತಿಯಲ್ಲಿ ಆಕೆ ನೀತಿನಿಯಮಗಳಿಗೆ ನಿಷ್ಠಾವಂತಳಾಗುವಾಗ ತನ್ನ ವೈವಾಹಿಕ ಹಂಗುಗಳ ಬಗ್ಗೆ ಆತನಿಗಿರುವ ತಾಳ್ಮೆ ಮತ್ತು ಪ್ರಾಮಾಣಿಕತೆಗಳು ಭವ್ಯವಾದ ಪರಿಹಾರವನ್ನುಂಟುಮಾಡುವಾಗ ಅದಕ್ಕೆ ಸಮವಾಗಿ ಆಕೆಯ ಜೀವಿತಕ್ಕೆ ಹರ್ಷ ಮತ್ತು ಆಶೀರ್ವಾದಗಳನ್ನು ತರುವುದಾಗಿವೆ.

ಪತ್ನಿಯು ನೂತನ ಸೃಷ್ಟಿಯ ಸದಸ್ಯಳಾಗಿದ್ದು, ಆಕೆಯ ಪತಿಗೆ ಪ್ರಾಪಂಚಿಕ ಸ್ಫೂರ್ತಿ ಇದ್ದು ಅವರುಗಳು ಉತ್ತಮವಾಗಿ ಒಡನಾಟವಿರುವಲ್ಲಿ ಸಮಸ್ಯೆಗೆ ತುಲನಾತ್ಮಕವಾದ ಸುಲಭ ನಿವಾರಣೆಯಿದೆ. ಉದಾತ್ತ ಮನಸ್ಸಿನ ಪತಿಯು ಪ್ರಾಪಂಚಿಕನಾಗಿದ್ದರೂ ತನ್ನ ಪತ್ನಿಯ ಮನಸ್ಸಾಕ್ಷಿಯನ್ನು ಅದರ ಹಿಡಿತವುಳ್ಳ ಬಳಕೆಯಲ್ಲಿ ಗ್ರಹಿಸುವವನಾಗಿರುತ್ತಾನೆ; ಮತ್ತು ಆಕೆಯ ಮಾನಸಿಕ ಮತ್ತು ನೈತಿಕ ಹಾಗೂ ಆತ್ಮೀಕ ಅವಕಾಶಗಳನ್ನು ಆಕೆಗೆ ಒದಗಿಸಿಕೊಡುವ ಆತನ ಆಕಾಂಕ್ಷೆಯು ಆಕೆಯ ಪತಿಯಾಗಿ ತನ್ನ ಕರ್ತವ್ಯವೆಂದು ಅರಿತಿರುತ್ತಾನೆ ಮತ್ತು ಆತ್ಮಿಕ ಸಾಂಗತ್ಯದ ಹೊರತಾಗಿ ಆಕೆಯು ಅಪೇಕ್ಷಿಸುವುದೆಲ್ಲವನ್ನೂ ಒದಗಿಸಬಲ್ಲವನಾಗಿರುತ್ತಾನೆ. ಅಂಥಹ ಉದಾತ್ತ ಮನಸ್ಸಿನ ಮನುಷ್ಯನಿಗೆ, ನಾವು ಚರ್ಚಿಸುತ್ತಿರುವಂತೆ, ಕರ್ತನಿಗೆ ಆತನ ಪತ್ನಿಯ ಸ್ವಾಮಿನಿಷ್ಠೆಯು ಮತ್ತು ಜೀವನದ ಎಲ್ಲಾ ಕರ್ತವ್ಯಗಳಿಗೆ ಆತನಿಗೆ ತೋರುವ ಪ್ರಾಮಾಣಿಕತೆಯು ಕೊನೆಗೆ ಪತಿಯು ಕರ್ತನಿಗೆ ಪ್ರತಿಷ್ಠಿಸಿಕೊಳ್ಳುವಂತೆ ಮಾಡಬಹುದಾಗಿದೆ. ಆತನು ಎಷ್ಟೇ ಕುಲೀನನಾದ ಸ್ವಾಭಾವಿಕ ವ್ಯಕ್ತಿಯಾಗಿದ್ದರೂ ತನ್ನ ಪತ್ನಿಯ ಐಹಿಕವಾದ, ಧಾರ್ಮಿಕವಾದ ಉತ್ತಮ ಇಚ್ಛೆ ಮತ್ತು ಆಕಾಂಕ್ಷೆಗಳನ್ನು ಆತನು ಮೆಚ್ಚಿಕೊಳ್ಳದಿರಬಹುದು. ಅಂತಹ ಸಂದರ್ಭಗಳಲ್ಲಿ ಆಕೆಯು ಕರ್ತನು ಆತನ ಜನರಿಗೆ ನೀಡಿದ ಹಿತಮಿತವಾಗಿರಬೇಕೆಂಬ ಸಮಾಲೋಚನೆಗಳನ್ನು ಪರಿಗಣಿಸ ಬೇಕಾಗುತ್ತದೆ; ಅದರಂತೆ ಆಕೆಯು ಸಹಾ ತನ್ನ ಪತಿಯ ಸರ್ವಸಾಮಾನ್ಯವಾದ ಉದಾರತ್ವವನ್ನು ಪರಿಗಣಿಸುವುವಳಾಗ ಬೇಕಾಗುತ್ತದೆ. ಅದೇ ಸಮಯದಲ್ಲಿ ಮನಸ್ಸಾಕ್ಷಿಯ ಅಥವಾ ನೀತಿ ಸಂಬಂಧಿತವಾದ ಯಾವುದೇ ಸಂಗತಿಗಳೊಂದಿಗೆ ರಾಜಿಮಾಡಿಕೊಳ್ಳದೆ ಆಕೆಯು ದೇವರಿಂದ ಮಾನ್ಯಮಾಡಲ್ಪಟ್ಟ ತನ್ನ ಪತ್ನಿಯ ಕರ್ತವ್ಯದಲ್ಲಿ ಹೆಚ್ಚಿನ ಮಟ್ಟದಲ್ಲಿ ತನ್ನ ಸಾಂಗತ್ಯವನ್ನು ನೀಡಬೇಕಾಗಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದು ಸಭೆಯ ಕೆಲವು ಕೂಟಗಳಲ್ಲಿ ಹಾಜರಿಯಾಗದಂತೆ ಆಕೆಯನ್ನು ಅಡ್ಡಿಪಡಿಸಲೂಬಹುದು; ಆದರೆ ಆಕೆಯು ತನ್ನ ಇಚ್ಛೆಯಲ್ಲಿ ಹಾಗಾಗದಿರಲೆಂದು ತನ್ನ ಪತಿಯನ್ನು ಸಂಪ್ರೀತಿಗೊಳಿಸಲು ತನ್ನ ಮನಸ್ಸಾಕ್ಷಿಗೆ ವಿರೋಧವಾಗಿ ಪರಲೋಕದ ತನ್ನ ಮದಲಿಂಗನಾದ ಕರ್ತನ ಬಗೆಗಿನ ತನ್ನ ಕರ್ತವ್ಯ ಮತ್ತು ವಿಧೇಯತೆಗಳಿಗೆ ಅಡ್ಡಿಯಾಗದಂತೆ ಜಾಗರೂಕಳಾಗಿರತಕ್ಕದ್ದು. ನಾವು ಸಭೆಯಾಗಿ ಸೇರಿಬರುವುದನ್ನು ಮರೆಯಬಾರದು ಎಂಬ ಆತನ ಆಜ್ಞೆಗಳನ್ನು ಆಕೆಯು ನೆನಪಿನಲ್ಲಿಟ್ಟುಕೊಳ್ಳಬೇಕು. ಆಕೆಯು ಸಂಯಮವನ್ನು, ತನ್ನ ಪತಿಯ ಗೌರವ ಪರಿಗಣನೆ ಮುಂತಾದವುಗಳನ್ನು ಪ್ರಯೋಗಿಸಬೇಕೆಂದು ನಾವಿಲ್ಲಿ ಒತ್ತಾಯಿಸುವವರಾಗಿದ್ದೇವೆ. ಈ ರೀತಿಯಲ್ಲಿ ಆಕೆಯು ತನ್ನ ಸಮಯವನ್ನು ಕಳೆದು ವಿವೇಚನಾಪೂರಕವಾದ ಸಮಯವನ್ನು ಆತನಿಗೆ ನೀಡಬಹುದಾಗಿದೆ.

ಎಲ್ಲಿ ಇವರಿಬ್ಬರೂ ಇಜ್ಜೋಡಾಗಿರುತ್ತಾರೋ – ಅಂದರೆ ಒಬ್ಬರು ಅವಿಶ್ವಾಸಿ ಮತ್ತು ಮತ್ತೊಬ್ಬರು ನೂತನ ಸೃಷ್ಟಿ – ಇದಕ್ಕೂ ಹೆಚ್ಚಾಗಿ ಅವರು ದೇಹಭಾವಕ್ಕನುಸಾರವಾಗಿಯೂ ಸಾಮರಸ್ಯವಿಲ್ಲದಿದ್ದರೆ, ಹೆಂಡತಿಯು ಬುದ್ಧಿಶಕ್ತಿಯಲ್ಲಿ ಉತ್ತಮಳಾಗಿದ್ದು ಗಂಡನು ಕೆಳ ಮಟ್ಟದವನಾಗಿರುವುದು ಇವೇ ಮುಂತಾಗಿ–ಅಲ್ಲಿ ಪ್ರಕರಣವು ಇನ್ನೂ ಹೆಚ್ಚು ಗೊಂದಲಮಯವಾಗಿದ್ದು ವಿಶ್ವಾಸಿಯ ಹೆಚ್ಚಿನ ಬುದ್ಧಿವಂತಿಕೆ ಮತ್ತು ಕೃಪೆ ಬೇಕಾಗುತ್ತವೆ. ಹೀಗಿರುವವರ ಬಗ್ಗೆ ಅಪೊಸ್ತಲನು ಎಚ್ಚರಿಸುತ್ತಾ – "ಒಬ್ಬ ಸ್ತ್ರೀಗೆ ಕ್ರಿಸ್ತ ನಂಬಿಕೆಯಿಲ್ಲದ ಗಂಡನಿರಲಾಗಿ ಅವನು ಆಕೆಯೊಂದಿಗೆ ಒಗೆತನಮಾಡುವುದಕ್ಕೆ ಸಮ್ಮತಿಸಿದರೆ ಆಕೆಯು ಅವನನ್ನು ಬಿಡಬಾರದು. ಯಾಕೆಂದರೆ ಕ್ರಿಸ್ತನಂಬಿಕೆಯಿಲ್ಲದ ಗಂಡನು ತನ್ನ ಹೆಂಡತಿಯಲ್ಲಿ ದೇವಜನಕ್ಕೆ ಸಂಬಂಧಪಟ್ಟವನಾದನು ಮತ್ತು ಕ್ರಿಸ್ತ ನಂಬಿಕೆಯಿಲ್ಲದ ಹೆಂಡತಿಯು ನಮ್ಮ ಸಹೋದರನಾದ ತನ್ನ ಗಂಡನಲ್ಲಿ ದೇವಜನಕ್ಕೆ ಸಂಬಂಧಪಟ್ಟವಳಾದಳು. ಆದರೆ ಕ್ರಿಸ್ತ ನಂಬಿಕೆಯಿಲ್ಲದವನು ಅಗಲಬೇಕೆಂದಿದ್ದರೆ ಅಗಲಿಹೋಗಲಿ; ಇಂತಹ ಸಂದರ್ಭಗಳಲ್ಲಿ ಕ್ರೈಸ್ತ ಸಹೋದರನಾಗಲೀ, ಸಹೋದರಿಯಾಗಲಿ ಬದ್ಧರಲ್ಲ. ಸಮಾಧಾನದಲ್ಲಿರಬೇಕೆಂದು ದೇವರು ನಮ್ಮನ್ನು ಕರೆದಿದ್ದಾನೆ. ಎಲೈ ಸ್ತ್ರೀಯೇ, ನಿನ್ನ ಗಂಡನನ್ನು ರಕ್ಷಿಸುವೆಯೋ ಏನೋ ನಿನಗೇನು ಗೊತ್ತು? ಎಲೈ ಪುರುಷನೇ, ನಿನ್ನ ಹೆಂಡತಿಯನ್ನು ರಕ್ಷಿಸುವಿಯೋ ಏನೋ ನಿನಗೇನು ಗೊತ್ತು?" ( 1 ಕೊರಿ. 7: 13–16).

ವಿಶ್ವಾಸಿಯ ಕರ್ತವ್ಯದ ಬಗ್ಗೆ ಒಂದು ಅಂಶವು ಸ್ಪಷ್ಟವಾಗಿದೆ. ಏನೆಂದರೆ, ಆತನು ತನ್ನ ಕರ್ತವ್ಯವನ್ನು ನಿಭಾಯಿಸಬೇಕು ಮತ್ತು ಗೌರವಯುತವಾಗಿ ಮನೆಯ ಶಾಂತಿಯನ್ನು ಮತ್ತು ಅದರ ಸಾಮಾನ್ಯ ಹಿತವನ್ನು ರಕ್ಷಿಸಿಕೊಳ್ಳಲು ಎಲ್ಲಾ ಸೂಕ್ತ ಕ್ರಮಗಳನ್ನು ಅನುಸರಿಸಬೇಕು. ನೀತಿನಿಯಮ ಮತ್ತು ಆತ್ಮಸಾಕ್ಷಿಯು ಅನುಮತಿಸಿದಂತೆ ಕೆಲವೊಂದು ತೃಪ್ತಿಕರ ಅಂಶಗಳನ್ನು ನೀಡಬೇಕು. ಅಗಲುವಿಕೆಗೆ ಸರಿಯಾದ ಕಾರಣವಿದ್ದಲ್ಲಿ ಇದಕ್ಕೆ ಕಾರಣ ತಾನಲ್ಲವಲ್ಲ ಎಂಬುದನ್ನು ವಿಶ್ವಾಸಿಯು ನೋಡಿಕೊಳ್ಳಬೇಕು. ಆತನಲ್ಲಿರುವ ಕ್ರಿಸ್ತನ ಆತ್ಮವು ಆತನನ್ನು ಹೆಚ್ಚು ವಿನೀತನನ್ನಾಗಿ, ಹೆಚ್ಚು ವಿನಯಶೀಲನನ್ನಾಗಿ. ಹೆಚ್ಚು ಶಾಂತಿಯುಳ್ಳವನನ್ನಾಗಿ, ಹೆಚ್ಚು ದೂರದೃಷ್ಟಿಯುಳ್ಳವನನ್ನಾಗಿ, ಹೆಚ್ಚು ವಿವೇಕಿಯನ್ನಾಗಿ, ಹೆಚ್ಚು ಸಹಿಷ್ಣುತೆ ಉಳ್ಳವನನ್ನಾಗಿ, ಹೆಚ್ಚು ತಾಳ್ಮೆಯುಳ್ಳವನನ್ನಾಗಿ, ಹೆಚ್ಚು ಪ್ರೀತಿಯುಳ್ಳವನನ್ನಾಗಿ, ಮತ್ತು ದಿನದಿಂದ ದಿನಕ್ಕೆ ಹೆಚ್ಚು ಕರುಣೆಯುಳ್ಳವನನ್ನಾಗಿ ಮಾಡುತ್ತದೆ. ಹೀಗಿದ್ದಾಗ್ಯೂ ಇವುಗಳೆಲ್ಲವೂ ಎಲ್ಲಾ ಪರಿಸ್ಥಿತಿಗಳಲ್ಲಿ ಅಗತ್ಯತೆಗಳನ್ನು ಪೂರೈಸುವುದಿಲ್ಲ. ಕೆಲವೊಮ್ಮೆ ಅವಿಶ್ವಾಸಿಯು ಕೀಳಾದ ಸ್ವಾಭಾವಿಕ ಪ್ರವೃತ್ತಿಯನ್ನು ಹೊಂದಿದ್ದು ಅದನ್ನು ಸಾಧ್ಯಂತವಾಗಿ ಸಿಡಕುವ ಮಟ್ಟಿಗೆ ಕೊಂಡೊಯ್ಯಬಹುದು. ಹೇಗೆ ದೇವರು ಫರೋಹನೊಡನೆ ನಡೆಸಿದ ಕೃಪಾಕಾರ್ಯಗಳೆಲ್ಲವೂ ವ್ಯರ್ಥಗೊಂಡು ಆತನು ಕಠಿಣ ಹೃದಯವುಳ್ಳವನಾದನೋ

ಅದರಂತೆಯೇ ದೇವರ ಮಕ್ಕಳಲ್ಲಿರುವ ದೇವರ ಆತ್ಮವು, ಅದರ ಉತ್ತಮ ಸಾಮರ್ಥ್ಯ ಮತ್ತು ಫಲಾನುಸಾರ, ಪ್ರಕಾಶಿಸುತ್ತಿದ್ದರೂ ಕೆಲವೊಮ್ಮೆ ಕತ್ತಲೆಯು ಬೆಳಕನ್ನು ದ್ವೇಷಿಸುವಂತಹ ಹಗೆತನವನ್ನು ಎದುರಿಸಬೇಕಾಗಬಹುದು. ನಮ್ಮ ಕರ್ತನು ಇದರ ಬಗ್ಗೆ ಹೇಳಿದ್ದೇನೆಂದರೆ – "ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವುದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು. ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವುದಿಲ್ಲ. ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವುದಿಲ್ಲ" (ಯೋಹಾನ 3:19–20). ಅಂತಹ ಸಂದರ್ಭಗಳಲ್ಲಿ ಅಪೋಸ್ತಲನು ಹೇಳುವಂತೆ ಅಗಲುವಿಕೆ ಉಂಟಾಗಬಹುದು ಮತ್ತು ಇದು ಈ ಲೋಕದ ನ್ಯಾಯಾಲಯದಿಂದ ನಿರ್ಣಯ ಹೊಂದಿರಲೂಬಹುದು, ಹೊಂದಿಲ್ಲದಿರಲೂಬಹುದು. ಯಾವುದೇ ವೇಳೆಯಲ್ಲಿ, ಹೇಗೂ ನೂತನ ಸೃಷ್ಟಿಯು ವಿಚ್ಛೇದನ ದೊರೆಯದ ಹೊರತು ಮರುಮದುವೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುವುದಿಲ್ಲ. ಹಾಗೆ ಮಾಡಿಕೊಳ್ಳುವವನು ಕರ್ತನು ಹೇಳಿದಂತೆ ವ್ಯಭಿಚಾರ ಮಾಡುವವನಾಗುತ್ತಾನೆ (ಮತ್ತಾಯ 19:9 ನೋಡಿರಿ).

ಮೇಲೆ ಹೇಳಿದ ವಾಕ್ಯಭಾಗದಲ್ಲಿ, "ಕ್ರಿಸ್ತ ನಂಬಿಕೆಯಿಲ್ಲದವನು ಅಗಲಬೇಕೆಂದಿದ್ದರೆ ಅಗಲಿ ಹೋಗಲಿ" (1 ಕೊರಿ.7:15) ಎಂದು ಅಪೋಸ್ತಲನು ಪ್ರಕಟಿಸುತ್ತಾನೆ. ಆದರೆ, ಈ ಮಾತುಗಳು ಜೊತೆಗಾರರ ಪರಿತ್ಯಾಗವು ಗಂಡನಿಗಾಗಲೀ, ಹೆಂಡತಿಗಾಗಲೀ ಬೇರೆಯವರನ್ನು ಮದುವೆ ಮಾಡಿಕೊಳ್ಳುವ ಸ್ವಾತಂತ್ರ್ಯ ನೀಡುವುದೆಂಬ ಸೂಚನೆ ನೀಡುತ್ತದೆ ಎಂದು ಅರ್ಥೈಸಬಾರದು; ಅಂತಹ ಪರಿತ್ಯಾಗವನ್ನು ವಿಶ್ವಾಸಿಯು ಅದು ಕೇವಲ ದೇವರಿಂದ ಒದಗಿ ಬಂದ ಜೀವನದಲ್ಲಿನ ಒಂದು ಸಂದರ್ಭವೆಂದೆಣಿಸಿ ಇದನ್ನು ದೇವರು ಆ ನಂಬಿಗಸ್ತನಿಗಾಗಿ ಹಿತವನ್ನು ಧಾರಳವಾಗಿ ನಿರ್ಣಯಿಸುವನು ಎಂಬಂತೆ ನೋಡಬೇಕು – ಮತ್ತು ಆ ರೀತಿಯಲ್ಲಿ ಅದನ್ನು ಒಪ್ಪಿಕೊಂಡು ಕರ್ತನ ಸೇವೆಗೆ ಉಪಯುಕ್ತವಾಗುವ ಅನುರೂಪವಾದ ಅವಕಾಶಗಳನ್ನು ನಿರೀಕ್ಷಿಸಬೇಕು. ವಿಶ್ವಾಸಿಯು ಎಂದೂ ಪರಿತ್ಯಾಗಿಯಾಗಕೂಡದೆಂದು ಅಪೋಸ್ತಲನು ಅಭಿವ್ಯಕ್ತಾತ್ಮಕವಾಗಿ ಹೇಳುವನಾದರೂ, ಮಾನವ ನ್ಯಾಯಾಲಯಗಳು ಬಲು ಬುದ್ಧಿವಂತಿಕೆಯಿಂದ ಅರಿತುಕೊಂಡು "ರಚನಾತ್ಮಕವಾದ ಪರಿತ್ಯಾಗ' ಎಂಬುದಿದೆ ಎಂದು ನಿರ್ಣಯಿಸಿ ಅದನ್ನು ಒಬ್ಬ ಜೊತೆಗಾರನು/ಳು ತನ್ನ ಜೀವನ ಸಂಗಾತಿಯನ್ನು ಪೂರ್ಣವಾಗಿ ಸಹವಾಸ ತೊರೆಯದೆಯೂ ಬಿಟ್ಟುಬಿಡಬಹುದೆಂದು ಅರ್ಥೈಸುತ್ತದೆ. ಅವಿಶ್ವಾಸಿಯಾದ ಪತ್ನಿಯು ಹಲವಾರು ಕ್ಷುಲ್ಲಕ ಬಲತ್ಕಾರಗಳನ್ನು ತನ್ನ ಮನೆಯಲ್ಲಿ ಉಪಯೋಗಿಸಿ ಮನೆಯ ಲಕ್ಷಣವನ್ನೇ ಹಾಳುಗೆಡವಿದ್ದಿರಬಹುದು ಮತ್ತು ಅದನ್ನು ಕೇವಲ ದುಃಸ್ಥಿತಿಯುಳ್ಳ ಸ್ಥಳವನ್ನಾಗಿ ಮಾಡಿದ್ದಿರಬಹುದು. ಆಕೆಯು ತನ್ನ ಪತಿಯ ಧಾರ್ಮಿಕ ಸಾಹಿತ್ಯಗಳನ್ನೆಲ್ಲಾ ನಾಶಗೊಳಿಸಿ, ಆತನು ಅವನ್ನು ಓದಲು, ಧ್ಯಾನ ಮಾಡಲು, ಅವುಗಳ ಬಗ್ಗೆ ಚಿಂತಿಸಲು ಅಸಾಧ್ಯವಾಗುವಂತೆ ಮಾಡಿದ್ದಿರಬಹುದು. ಮಕ್ಕಳಲ್ಲಿ ಬೇಕೆಂತಲೇ ಗದ್ದಲ ಹುಟ್ಟಿಸುವುದರ ಮೂಲಕ, ಅವರು ತಂದೆಯು ಬುದ್ಧಿಮಾತುಗಳನ್ನು, ಸಮಾಲೋಚನೆಗಳನ್ನು ಧಿಕ್ಕರಿಸುವಂತೆ ಮಾಡಿ ಅತನನ್ನು ಅಗೌರವಿಸುವಂತೆಯೂ ಮಾಡಬಹುದು.

ಅಂತಹ ಸ್ತ್ರೀಯು ತನ್ನ ಪತಿಯನ್ನು ನೈಜವಾಗಿ ತೊರೆಯದೇ ಇದ್ದರೂ ತನ್ನ ಕೀಳಾದ ಬುದ್ಧಿಯಿಂದಾಗಿ ತನ್ನ ಪತಿಯನ್ನು ಗುಲಾಮನಂತೆ ಉಪಯೋಗಿಸಲು ಬಯಸುತ್ತಿರಬಹುದು–ಆದರೆ ಆತನ ಸಾಮರ್ಥ್ಯದಿಂದಲೇ ಆಕೆ ಜೀವನದ ಅನುಕೂಲತೆ ಗಳನ್ನು ಪಡಕೊಳ್ಳುತ್ತಾಳೆ. ಮಾನವ ಕಾನೂನುಗಳು ಪರಿತ್ಯಾಗದ ಬಗ್ಗೆ ತನ್ನದೇ ಆದ ಕ್ರಮವನ್ನು ವಾಖ್ಯಾನಿಸುತ್ತದೆ – ವಿವಾಹ ಒಡಂಬಡಿಕೆ ಮತ್ತು ಹಂಗುಗಳ ಮತ್ತು ಯುಕ್ತವಾದ ಮತ್ತು ವಿವೇಚನಾ ಪೂರ್ವಕವಾದ ಜೀವನದಲ್ಲಿನ ಕರ್ತವ್ಯಗಳ ಕೈಬಿಡುವಿಕೆ ಇತ್ಯಾದಿಗಳಾಗಿವೆ. ಇಂಥವರು ಸಹಕಾರಿಯಾಗುವುದಕ್ಕೆ ಬದಲಾಗಿ ಅಡಚಣೆ ಮಾಡುವವರು ಮತ್ತು ಹಾನಿಪಡಿಸುವವರೂ ಆಗಿರುತ್ತಾರೆ. ಇಂತಹ ಪ್ರಕರಣಗಳಲ್ಲಿ ಪತಿಯು ತನ್ನನ್ನು ಪರಿತ್ಯಾಗಿ ಎಂದು ನಿರ್ಣಯಿಸಿಕೊಳ್ಳುವುದು ನ್ಯಾಯಬದ್ಧವಾಗಿದೆ ಎಂದು ನಾವು ನಂಬುತ್ತೇವೆ. ಆಗ ಆತನು ಬೇರೆ ಮನೆ ಮಾಡಿ ತಾಯಿಯ ತಪ್ಪು ಕ್ರಮಗಳಿಂದ ಇನ್ನೂ ಪೂರ್ಣವಾಗಿ ಕೆಟ್ಟುಹೋಗದ ಮಕ್ಕಳನ್ನು ತನ್ನ ಸಂಗಡ ಕೊಂಡೊಯ್ಯಬಹುದು. ಅಕೆಯ ಈ ಕ್ರಮದಿಂದಾಗಿ ಆಕೆಯ ಬಗ್ಗೆ ಅವನಿಗಿರಬೇಕಾದ ಹಂಗು ಅಲ್ಲಿಗೆ ಮುಕ್ತಾಯಗೊಳ್ಳುತ್ತದೆ. ಮದುವೆಯ ಕರಾರನ್ನು ಮುರಿದವಳು, ಕೈಬಿಟ್ಟವಳೂ ಆಕೆಯೇ ಆಗಿದ್ದಾಳೆ. ಆಕೆಗೆ ತನ್ನ ಬೆಂಬಲವನ್ನು ಹಿಂತೆಗೆದುಕೊಳ್ಳುವುದರ ಮೂಲಕ ಆತನು ಕೇವಲ ಆಕೆಯ ಕ್ರಮದ ಹಕ್ಕುಕೇಳಿಕೆಗಳನ್ನು ಸಮ್ಮತಿಸುವವನಾಗುತ್ತಾನೆ. ಹೇಗೂ ಯಾವುದೇ ಸಮಯದಲ್ಲಿ ಆಕೆ ತನ್ನ ತಪ್ಪುಗಳಿಗಾಗಿ ಪಶ್ಚಾತ್ತಾಪಪಡುವುದಾದಲ್ಲಿ ಆತನು ಧಾರಾಳವಾಗಿ ಅವುಗಳನ್ನು ಕ್ಷಮಿಸಬೇಕು ಮತ್ತು ಕುಟುಂಬ ವ್ಯವಸ್ಥೆಯನ್ನು ಪುನಃ ಸ್ಥಾಪಿಸಿಕೊಳ್ಳಬೇಕು. ಈ ಬುದ್ಧಿಮಾತುಗಳಲ್ಲಿ ಯಾವುದನ್ನೂ ತಾಳ್ಮೆಯಿಲ್ಲದಿರುವಿಕೆಯನ್ನು ಬೆಳೆಸಿಕೊಳ್ಳುವುದು ಅಥವಾ ತಪ್ಪನ್ನು ಒಪ್ಪಿಕೊಂಡು ಹಾನಿಯನ್ನು ಅನುಭವಿಸುವುದು ಎಂದು ಭಾವಿಸಲಾಗದು. ಸಹಿಸಿಕೊಳ್ಳಬಹುದಾದವುಗಳನ್ನೆಲ್ಲಾ ಸಹಿಸಿಕೊಳ್ಳುವಂತೆ ಪ್ರೀತಿಯು ಕೇಳುತ್ತದೆ. ಮಾತು ಅಥವಾ ಕಾರ್ಯದಲ್ಲಿ ಕೆಟ್ಟದಕ್ಕೆ ಕೆಟ್ಟವುಗಳನ್ನೇ ಮಾಡಿದಲ್ಲಿ, ತಪ್ಪುಗಳನ್ನು ಸಣ್ಣಮೊಳಕೆ ಎಂದು ಭಾವಿಸಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳಬಾರದು.

ಬೇರೆ ಪ್ರಕರಣಗಳಲ್ಲಿ ಪರಿತ್ಯಾಗವು ಅವಿಶ್ವಾಸಿ ಪತಿಯ ದೆಸೆಯಿಂದ ಆಗಿದ್ದಿರಬಹುದು. ದುಷ್ಟತನದಿಂದ ಕೂಡಿದ ಆತನ ಕೀಳುಮನಸ್ಸು ಆತನನ್ನು ಕ್ರೌರ್ಯ ಪೀಡಕನನಾಗಿ ಮಾಡಿದ್ದಿರಬಹುದು. ಆತನಿಗೆ ತನ್ನ ಪತ್ನಿಯ ಆರೋಗ್ಯ ಮತ್ತು ಸಂತೋಷದ ಬಗ್ಗೆ ಯಾವ ಕಾಳಜಿಯೂ ಇಲ್ಲದಿರಬಹುದು. ವಿಶೇಷವಾಗಿ ಆತನು ಆಕೆಯ ಧಾರ್ಮಿಕ ದೃಷ್ಟಿಕೋನದ ಬಗ್ಗೆ ಹಗೆಯುಳ್ಳವನಾಗಿರಬಹುದು. ನಾವೀಗಾಗಲೇ ಸೂಚಿಸಿರುವಂತೆ, ವಿಶ್ವಾಸಿಯು ಪ್ರೀತಿ ಚೈತನ್ಯದ ಕೃಪೆಯನ್ನು ಬಯಸಿ ಪಡಕೊಳ್ಳಬೇಕು. ಇದು "ಎಲ್ಲವನ್ನೂ' ಕಾರ್ಯರೂಪದಲ್ಲಿ ಸಹಿಸಿಕೊಳ್ಳುವಂತೆ ಮಾಡುತ್ತದೆ ಮತ್ತು

ಅಂತಹ ಪರಿಸ್ಥಿತಿಗಳ ಮೂಲಕ ಕೃಪೆಯಲ್ಲಿ ಬೆಳೆಯಲು ಲಾಭದಾಯಕವಾಗಿರುತ್ತದೆ. ಆದರೆ ಎಲ್ಲವುಗಳಿಗೆ ಒಂದು ಮಿತಿಯುಂಟು ಮತ್ತು ಈ ಮಿತಿಯನ್ನು ಮೀರಿಹೋಗುವುದು ಯುಕ್ತವಲ್ಲ. ಆ ಮಿತಿಗಿಂತ ಮುಂದಕ್ಕೆ ಅನ್ಯಾಯಗಾರನಾದ ಸಂಗಾತಿಯ ಮೇಲಿನ ಪ್ರಭಾವವು ಸಹಾಯಕವಾಗದೆ ಹಾನಿಯನ್ನುಂಟು ಮಾಡುತ್ತದೆ. ಪ್ರತಿಯೊಬ್ಬರೂ ಅಂತಹ ಪರಿಸ್ಥಿತಿಗಳಲ್ಲಿ ವಶವಾಗಬೇಕಾದ ಯಾವ ಮಿತಿಯು ತಮಗೆ ಯಾವುದು ಯುಕ್ತವಾದುದೆಂದು ನಿರ್ಣಯಿಸಿಕೊಳ್ಳಬೇಕು. ಆತನ ಸ್ವಂತ ಮನಸ್ಸಾಕ್ಷಿಯು ದೇವರ ವಾಕ್ಯದ ಸ್ಪೂರ್ತಿಯಿಂದಾಗಿ ದೊರೆಯುವ ಶಿಕ್ಷಣದ ಮೂಲಕವಾಗಿ ಇದನ್ನು ನಿರ್ಧರಿಸಬೇಕಾಗುತ್ತದೆ. ಕೃಪೆಯಲ್ಲಿ ಬೆಳೆದುಬರುವಾಗ ಶೋಧನೆಗಳು ಕಠಿಣವಾಗಬಹುದು. ಆದರೆ ಬಲು ನಮ್ರತೆಯಿಂದ ಸಹಿಸಿಕೊಳ್ಳುವ ಮತ್ತು ಸಹಿಸಲಾಗದ ನಿಷ್ಠೂರತೆ ಮತ್ತು ಹಾನಿಯ ಮಟ್ಟವನ್ನು ತಲುಪಿದಾಗ ನಿರ್ಣಯಿಸಲು " ಪರಿಪಕ್ವವಾದ ಮನಸ್ಸು" ಬೇಕಾಗುತ್ತದೆ. ಮೇಲಿನಿಂದ ಕೃಪೆಯು ವಾಗ್ದಾನಿಸಲ್ಪಟ್ಟಿದೆ. ಅದನ್ನು ಇಂತಹ ಸಂದರ್ಭಗಳಲ್ಲಿ ಪ್ರಾಮಾಣಿಕವಾಗಿ ಬೇಡಿಕೊಳ್ಳತಕ್ಕದ್ದು. (ಯಾಕೋಬ 1:5 )

ನಿರ್ಲಕ್ಷಿಸಬಹುದಾದ ಕೆಲವೊಂದು ಪಾಶವಿಕ/ನೀಚ ಗಂಡಂದಿರು ಇದ್ದಾರೆ. ಅವರಿಗೆ ಪತಿಯ ಜವಾಬ್ಧಾರಿಗಳ ಬಗ್ಗೆಯಾಗಲೀ, ಪತ್ನಿಯ ಯುಕ್ತವಾದ ಸ್ವಾತಂತ್ರ್ಯಗಳ ಬಗ್ಗೆಯಾಗಲೀ ಯಾವುದೇ ಕಲ್ಪನೆಗಳು ಇರುವುದಿಲ್ಲ. ಪತ್ನಿಯ ಬಗ್ಗೆ ಅವರ ಒಂದೇ ಕಲ್ಪನೆಯೆಂದರೆ ಆಕೆ ತಾನು ಬಾಡಿಗೆಗೆ ಪಡಕೊಳ್ಳಬಹುದಾದ ಗುಲಾಮಳಿಗಿಂತ ಉತ್ತಮಳಾದ ಒಬ್ಬ ದುಡಿಯುವ ಗುಲಾಮಳು ಅಥವಾ ದಾಸಿ, ವೇಶ್ಯೆಯ ಬದಲು ಅಗ್ಗದ ದಾಸಿ ಎಂಬುದೇ. ಪತಿಯ ಈ ರೀತಿಯ ವರ್ತನೆಯೂ ಆತನ ಕರ್ತವ್ಯ ಚ್ಯುತಿಯನ್ನು ತೋರಿಸುತ್ತದೆ. ಅಪೋಸ್ತಲನು ಇಲ್ಲಿ ಸಮರ್ಪಕವಾಗಿ ವಿವರಿಸಿ ಹೇಳಿರುವ ದೇವರ ನಿಯಮವು ಸಂಪೂರ್ಣವಾಗಿ ಮಾನವ ನಿಯಮಗಳಿಗೆ ಅನುಸಾರವಾಗಿಯೇ ಅವೆ ಎಂದು ನಾವು ನಂಬುತ್ತೇವೆ. ಅಂತಹ ಮನುಷ್ಯನಿಗೆ "ಪತಿ'ಎಂಬ ನಾಮವು ತಪ್ಪಾದ ಹೆಸರಾಗಿದೆ. – ಆತನು ಎಂದಾದರೂ ತನ್ನ ಪತ್ನಿಯೊಂದಿಗೆ ವಿವಾಹದ ಕರಾರುಗಳನ್ನು ಮಾಡಿಕೊಂಡಿದ್ದಲ್ಲಿ ಅವುಗಳನ್ನು ಆತನು ಸಂಪೂರ್ಣವಾಗಿ ಮತ್ತು ನಿರ್ಧಾರಾತ್ಮಕವಾಗಿ ಮುರಿದಿದ್ದಾನೆ ಮತ್ತು ಅಂಥಹ ನಡಕೊಳ್ಳುವಿಕೆಯಿಂದ ಆತನು ಅದನ್ನು ರುಜುವಾತು ಮಾಡುವವನಾಗಿದ್ದಾನೆ. ಇಂತಹ ಪರಿಸ್ಥಿತಿಗೊಳಗಾದ ಪತ್ನಿಯು ಅಕೆಯನ್ನು ಪರಿತ್ಯಾಗಿಯನ್ನಾಗಿ ಪರಿಗಣಿಸಿಕೊಳ್ಳುವ ಸ್ವಾತಂತ್ರ್ಯ ಹೊಂದಿರುತ್ತಾಳೆ ಮತ್ತು ತನಗೆ ಸಾಧ್ಯವಾದ ಮಟ್ಟಿಗೆ ಉತ್ತಮ ಸ್ಥಿತಿಯನ್ನು ಉಂಟುಮಾಡಿಕೊಳ್ಳಬಹುದಾಗಿದೆ. ಆದರೆ, ಇಂತಹ ಪರಿಸ್ಥಿತಿಯಲ್ಲಿ ಆಕೆಯು ಮರುವಿವಾಹವಾಗುವುದಲ್ಲಿ ದೈವಿಕ ನಿಯಮವಾಗಲೀ, ಮಾನವ ನಿಯಮವಾಗಲೀ ಒಪ್ಪುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಆಕೆಯು ತನ್ನ ದುಃಸ್ಥಿತಿಯನ್ನು ಕಡಿಮೆ ಮಾಡುವಂತೆ, ಸಾಧ್ಯವಾದರೆ ಅವುಗಳಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ತೋರಿಸುವಂತೆ ದೇವರಿಗೆ ಮೊರೆಹೋಗಬಹುದು. ಆಕೆಯು ತನ್ನ ಮಕ್ಕಳ ವಯಸ್ಸನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಅವರಿಗೂ ಹಾಗೂ ತನಗೂ ಯಾವ ಏರ್ಪಾಡುಗಳನ್ನು ಮಾಡಲು ಸಾಧ್ಯ ಎಂಬುದನ್ನು ಆಲೋಚಿಸಬೇಕಾಗುತ್ತದೆ. ಈ ದೆಸೆಯಲ್ಲಿ ಯಾವುದೇ ಹೆಜ್ಜೆ ಇಡಬೇಕಾದರೂ ಪರಿಸ್ಥಿತಿಯನ್ನು ಜಾಗರೂಕತೆಯಿಂದ ಮತ್ತು ಪ್ರಾರ್ಥನಾ ಪೂರ್ವಕವಾಗಿ ತೂಗಿ ನೋಡಬೇಕಾಗುತ್ತದೆ. ಆದರೆ, ಆಕೆಯ ಪರಿಸ್ಥಿತಿಯು ಸಹಿಸಿಕೊಳ್ಳಬಹುದಾಗಿದ್ದರೆ, ಆಕೆಯು ಹಾಗೆಯೇ ಇರಲಿ ಅಪೋಸ್ತಲನು ಹೇಳುವಂತೆ ಆಕೆಯು ತನ್ನ ಮೃದುತ್ವ, ಸೌಮತ್ಯೆ, ಪ್ರೀತಿ ಮುಂತಾದ ಭಾವನೆಗಳನ್ನು ತೋರಿಸುವುದರ ಮೂಲಕ ಆಕೆ ತನ್ನ ಜೊತೆಗಾರನ ಪ್ರೀತಿಯನ್ನು ಪುನಃ ಗೆದ್ದುಕೊಳ್ಳಬಹುದು ಮತ್ತು ಬಹುಶಃ ಆತನನ್ನೂ ದೇವರಿಗಾಗಿ ಗೆದ್ದುಕೊಳ್ಳಬಹುದು ಎಂದು ಆಕೆಯು ನಿರೀಕ್ಷಿಸಲಿ.

ನಾವು ಈ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾಗಿ ಪರಿಶೀಲಿಸುತ್ತಾ ವಿಸ್ತಾರವಾದ ಖಾಸಗಿ ಪತ್ರವ್ಯವಹಾರಗಳ ಮೂಲಕ ಕರ್ತನ ಅನೇಕಾನೇಕ ನಿಷ್ಠಾವಂತ ಮಕ್ಕಳು ವೈವಾಹಿಕ ವ್ಯಥೆಯ ಕಠಿಣ ಪರೀಕ್ಷೆಯಲ್ಲಿ ಜೀವಿಸುತ್ತಿದ್ದಾರೆಂಬುದನ್ನು ಗ್ರಹಿಸಿಕೊಂಡಿದ್ದೇವೆ. ನೂತನ ಸೃಷ್ಟಿಯ ಕರೆ ಎಂಬ ಕರಾರಿನಲ್ಲಿ ಯಾರೊಬ್ಬರೂ, ಪ್ರಸ್ತುತ ಜೀವನವು ಸುಲಲಿತವಾಗಿರುತ್ತದೆ ಮತ್ತು ಅದು ಈ ಲೋಕದ ಪರಮಾನಂದದ ಒಂದು ಸುಂದರ ಸ್ವಪ್ನವಾಗಿರುತ್ತದೆ ಎಂದು ನಿರೀಕ್ಷಿಸಲಾಗದು. ಯಾಕೆಂದರೆ, ನಮ್ಮ ಕರ್ತನು ಹೇಳಿದಂತೆ "ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು" (ಮತ್ತಾಯ 10:36) ಸತ್ಯದ ಸಲುವಾಗಿ ಬಹಳಷ್ಟು ಸಹಿಸಬೇಕಾದಲ್ಲಿ ಅವರು ಆಶ್ಚರ್ಯಪಡಬೇಕಾಗಿಲ್ಲ. ಈ ರೀತಿಯಲ್ಲಿ ಅವರು ಕರ್ತನಿಗೆ ಮತ್ತು ಆತನ ಮಾತುಗಳಿಗೆ ತಮ್ಮ ನಿಷ್ಠೆಯನ್ನು ಮತ್ತು ಆತ್ಮನ ಕೃಪೆಯನ್ನು ಬೆಳೆಸಿಕೊಳ್ಳುವ ಸಲುವಾಗಿ ಅವರು ಎದುರಿಸಬೇಕಾಗುವ ತೀಕ್ಷ್ಣವಾದ ಪರೀಕ್ಷೆಗಳನ್ನು ಎದುರಿಸುವ ತಮ್ಮ ಸಮ್ಮತಿಯನ್ನು ಪ್ರದರ್ಶಿಸಬೇಕಾಗುವುದು. ತಮ್ಮನ್ನು ಅಭಿವೃದ್ಧಿಗೊಳಿಸುವ, ಮತ್ತು ದೇವರ ರಾಜ್ಯವನ್ನು ಸಂಧಿಸಲು ಸಹಾಯ ಮಾಡುವ ಈ ಕಠಿಣವಾದ ಪರೀಕ್ಷೆಗಳನ್ನು ಅವರು ತಾವಾಗಿಯೇ ಆಯ್ದು ಕೊಳ್ಳುವಂತಿಲ್ಲ ಎಂಬುದನ್ನು ಅವರು ಗ್ರಹಿಸಿಕೊಳ್ಳಬೇಕು ಮತ್ತು ಈ ಎಲ್ಲಾ ಸಂಗತಿಗಳನ್ನು ಕರ್ತನಿಗೆ ಬಿಟ್ಟುಬಿಡಬೇಕು. ಹೀಗಿದ್ದಾಗ್ಯೂ, ಈ ರೀತಿಯಲ್ಲಿ ಯಾತನೆಪಡುತ್ತಿರುವವರಿಗೆ ಅವರುಗಳು ಯುಕ್ತವಾದ ಪರೀಕ್ಷೆಗಳ ಮತ್ತು ಅಭಿವೃದ್ಧಿಯ ನಂತರ ದೈವಿಕ ಬಿಡುಗಡೆಯನ್ನು ಹುಡುಕಿ ಕಂಡುಕೊಳ್ಳಬೇಕು, ಇದರಿಂದ ತಪ್ಪಿಸಿಕೊಳ್ಳುವ ಮಾರ್ಗವು ತೆರೆಯಲ್ಪಡುವದನ್ನು ಸಹಿಸಿಕೊಳ್ಳುವುದು ಬಹಳ ಕಷ್ಟಕರ ಎಂಬುದನ್ನು ತಿಳಿಹೇಳುವುದು ನಮ್ಮ ಕರ್ತವ್ಯವಾಗಿದೆ. ಇದು " ಒಂದು ಊರಲ್ಲಿ ನಿಮ್ಮನ್ನು ಹಿಂಸೆಪಡಿಸಿದರೆ ಮತ್ತೊಂದು ಊರಿಗೆ ಓಡಿ ಹೋಗಿರಿ" (ಮತ್ತಾಯ 10:23,2:13; 04:12; 12:15) ಎಂಬ ನಮ್ಮ ಕರ್ತನ ಎಚ್ಚರಿಕೆ ಮತ್ತು ಉದಾಹರಣೆಗಳಿಗೆ ಸರಿಸಮವಾಗಿದೆ.

## ಮನಸ್ಸಾಕ್ಷಿಯು ಅಂತಿಮ ಪರೀಕ್ಷೆಯಾಗಿದೆ.

## Conscience, the Final Test

ಈ ಸಂಗತಿಗಳಿಗೆ ಸಂಬಂಧಿಸಿದಂತೆ ನಾವು ಮನಸ್ಸಾಕ್ಷಿಯ ಬಗ್ಗೆ ಉಲ್ಲೇಖಿಸಿದ್ದೇವೆ. ಈ ಪದದ ಅರ್ಥದ ಬಗ್ಗೆ ಗಮನ ಸೆಳೆಯುವುದು ಇಲ್ಲಿ ಸೂಕ್ತವೆನಿಸುತ್ತದೆ. ಯಾವುದು ಸರಿ,

ಯಾವುದು ಕರ್ತವ್ಯ ಎಂಬುದರ ನಿಶ್ಚಿತಾಭಿಪ್ರಾಯ ಎಂದು ನಾವು ಅರ್ಥೈಸುತ್ತೇವೆ. ಪರಿಪೂರ್ಣನಾದ ವ್ಯಕ್ತಿಗೆ ಮನಸ್ಸಾಕ್ಷಿಯು ಒಂದು ಪೂರ್ಣವಾದ ಮಾರ್ಗದರ್ಶನ ವಾಗಿದ್ದು ಆತನು ಸರಿಯಾದುದನ್ನು, ತನ್ನ ಕರ್ತವ್ಯವನ್ನು ಸಹಜವಾಗಿಯೇ ಅರಿತುಕೊಳ್ಳುತ್ತಾನೆ; ಆದರೆ, ಆರು ಸಹಸ್ರವರ್ಷಗಳ ಪತನವು ನಮ್ಮ ಜನಾಂಗದವರ ಮನಸ್ಸಾಕ್ಷಿಯನ್ನು ಪೂರ್ಣವಾಗಿ ಹಾಳಾಗಿ ಹೋಗಿರುವ ಪರಿಸ್ಥಿತಿಗೆ ತಂದಿಟ್ಟಿದೆ. ಅದು ತಪ್ಪು ದೃಷ್ಟಿಕೋನದಿಂದ ದಾರಿತಪ್ಪಿದೆ. ಕ್ರಿಸ್ತೀಯ ಮನಸ್ಸಾಕ್ಷಿಯ ತಳಹದಿ ದೇವರ ಮೇಲಿನ ವಿಶ್ವಾಸ ಮತ್ತು ಆತನ ಚಿತ್ತವನ್ನು ಸರಿಯಾದುದೆಂದು ಒಪ್ಪಿಕೊಳ್ಳುವುದು ಹಾಗೂ ದೈವಿಕ ಚಿತ್ತಕ್ಕೆ ಹೃತ್ಪೂರ್ವಕವಾಗಿ ವಿಧೇಯರಾಗುವ ಹಂಗಾಗಿದೆ. ಆದುದರಿಂದ ಮನಸ್ಸಾಕ್ಷಿಗೆ ದೇವರ ವಾಕ್ಯವು ಒದಗಿಸುವಂತಹ ಬೋಧನೆಗಳ ಅಗತ್ಯವಿದೆ. ಈ ಕಾರಣದಿಂದ ಅಭಿವೃದ್ಧಿಗೊಂಡ ನೂತನ ಸೃಷ್ಟಿಯು ಸ್ವಸ್ಥವಾದ ಮನಸ್ಸನ್ನು – ಯಾವುದು ಸರಿ, ಯಾವುದು ತಪ್ಪು ಎಂಬುದರ ದೃಢ ನಿಶ್ಚಯ, ಕೃಪೆ ಮತ್ತು ಜ್ಞಾನದಲ್ಲಿ ಹಾಗೂ ಪ್ರೀತಿಯ ಸ್ಫೂರ್ತಿಯಲ್ಲಿ ಬೆಳೆಯುವ ಅನುಪಾತಕ್ಕನುಗುಣವಾಗಿ ಹೊಂದಿರಬೇಕಾಗುತ್ತದೆ. ಮನಸ್ಸಾಕ್ಷಿಗೆ ವಿಧೇಯರಾಗುವುದು ಎಂದರೆ ದೇವರು ತಾನು ಏನು ಮಾಡಬೇಕೆಂದು ಬಯಸುತ್ತಾನೆಂದು ನಂಬಿದ್ದಾನೋ ಅದನ್ನು ನೆರವೇರಿಸುವುದು; ಯಾವುದೇ ಒಂದು ಸಂಗತಿಯ ಅಂತಿಮ ತೀರ್ಮಾನಕ್ಕೆ ಆತನು ಬರುವಂತಿಲ್ಲ. ಆದರೆ ಆತನು ದೇವರ ವಾಕ್ಯದ ಪುರಾವೆಗಳನ್ನು ಜಾಗರೂಕತೆಯಿಂದ ತೂಗಿನೋಡತಕ್ಕದ್ದು ಮತ್ತು ಅದರಂತೆ ನಿರ್ಧರಿಸತಕ್ಕದ್ದು. ಕೆಲವರು ತಮ್ಮ ಮನಸ್ಸಾಕ್ಷಿಗೆ ಅಂಜಿಕೆ ಮತ್ತು ಗುಲಾಮತನಗಳ ಪ್ರಭಾವ ಬೀರಿ ಭ್ರಷ್ಟಗೊಳಿಸುವ ಅವಕಾಶ ಮಾಡಿಕೊಡುತ್ತಾರೆ ಮತ್ತು ಅದುವೇ ನಿಜವಾದ ಉಪದೇಶಕನೆಂದು ಭಾವಿಸುತ್ತಾರೆ, ಕರ್ತನ ಜನರು ಅನುಸರಿಸಬೇಕಾದ ಸರಿಯಾದ ಕ್ರಮವೆಂದರೆ ತಮ್ಮ ಮನಸ್ಸಾಕ್ಷಿಗೆ ಸರಿಯಾದ ಮಾರ್ಗದರ್ಶನಮಾಡುವುದು – ಅಂದರೆ ತಮ್ಮ ನಿಶ್ಚಿತಾಭಿಪ್ರಾಯವನ್ನು ಸುವರ್ಣ ನಿಯಮ ಮತ್ತು ಸಕಲ ಸಂಬಂಧಿತ ಬೋಧನೆಗಳಿಗನುಸಾರವಾಗಿ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ನಿರ್ದೇಶಿಸುವುದು.

## ನಪುಂಸಕರು, ಕನ್ಯೆಯರು ಮತ್ತು ಬ್ರಹ್ಮಚಾರಿಗಳು
## Eunuchs, Virgins, Celibacy

ಲೈಂಗಿಕತೆಯ ಪ್ರಶ್ನೆಗಳು ನಿಜವಾಗಿಯೂ ನೂತನ ಸೃಷ್ಟಿಗೆ ಸಾಕಷ್ಟು ಕಳವಳವನ್ನುಂಟು ಮಾಡುವುದಾಗಿದೆ. ಆದುದರಿಂದ ಅವುಗಳನ್ನು ಇಲ್ಲಿ ನಿರ್ಲಕ್ಷಿಸುವಂತಿಲ್ಲ. ಆತ್ಮೀಕ ಸಂತೋಷಗಳಿಗಾಗಿ, ಆಶೀರ್ವಾದಗಳಿಗಾಗಿ, ಸಾಂಗತ್ಯ ಮತ್ತು ಸಂಯೋಗಕ್ಕಾಗಿ ಪವಿತ್ರಾತ್ಮನಿಂದ ಜನಿಸಿದವರು ಸಹಜ ಪ್ರವೃತ್ತಿಯಿಂದ ದೈಹಿಕ ಮತ್ತು ವಿಷಯಲಂಪಟವಾದ ಸಂಭೋಗವು ಆತ್ಮೀಕವಾಗಿ ಘನವಾದದ್ದಲ್ಲ ಆದರೆ ಅವುಗಳ ಧೋರಣೆಯು ವಿರುದ್ಧ ದಿಕ್ಕಿನಲ್ಲಿವೆ ಎಂಬುದನ್ನು ಗ್ರಹಿಸಿಕೊಳ್ಳುತ್ತಾರೆ. ದೇವರಿಂದ ಪ್ರತಿಷ್ಠೆಗೊಂಡ ಎಲ್ಲಾ ಅವಿವಾಹಿತರೂ ವಿವಾಹ ಸಂಬಂಧವನ್ನು ಪ್ರವೇಶಿಸಿ ಅದರ ಜವಾಬ್ದಾರಿಗಳನ್ನು ವಹಿಸುವ ಮುನ್ನ ಈ ಪ್ರಸ್ತಾಪವನ್ನು ಕೂಲಂಕುಷವಾಗಿ ಅಳೆದು ನೋಡುವುದು ಒಳ್ಳೆಯದು. ಅವಿವಾಹಿತ ಸ್ಥಿತಿಯನ್ನು ಒಪ್ಪಿಕೊಳ್ಳುವಂತೆ ನಮ್ಮ ಕರ್ತನು "ತಾಯಿಯ ಗರ್ಭದಿಂದ ನಪುಂಸಕರಾಗಿ ಹುಟ್ಟಿದವರು ಕೆಲವರು ಇದ್ದಾರೆ; ಮನುಷ್ಯರಿಂದ ನಪುಂಸಕರಾಗಿ ಮಾಡಲ್ಪಟ್ಟವರು ಕೆಲವರು ಇದ್ದಾರೆ; ಮತ್ತು ಪರಲೋಕದ ರಾಜ್ಯದ ನಿಮಿತ್ತವಾಗಿ ತಮ್ಮನ್ನು ತಾವೇ ನಪುಂಸಕರಾಗಿ ಮಾಡಿಕೊಂಡವರು ಕೆಲವರು ಇದ್ದಾರೆ" (ಮತ್ತಾಯ 19:12) ಎಂದು ಹೇಳಿದನೆಂದು ಕಂಡುಬರುತ್ತದೆ. ಅಂದರೆ, ಕೆಲವರು ತಮ್ಮ ಚಿತ್ತವನ್ನು ಕರ್ತನಿಗೆ ಪ್ರತಿಷ್ಠಿಸಿಕೊಂಡ ಮೇಲೆ ವಿವಾಹವಾಗದೇ, ಅವಿವಾಹಿತರಾಗಿಯೇ ಇದ್ದುಕೊಂಡು ತಮ್ಮ ಪಾವಿತ್ರತೆಯನ್ನು ಕಾಪಾಡಿಕೊಳ್ಳಲು ನಿರ್ಧರಿಸುತ್ತಾರೆ. ನಮ್ಮ ಕರ್ತನು ಸಹಾ ಇಂಥವರಲ್ಲಿ ಒಬ್ಬನಾಗಿದ್ದಾನೆ ಮತ್ತು ಇವುಗಳಲ್ಲಿ ಆತನೇ ನಮ್ಮ ಅಮೂಲ್ಯ ಮಾದರಿಯಾಗಿದ್ದು ಆದಷ್ಟು ಸಮೀಪವಾಗಿ ನಾವು ಆತನನ್ನು ಅನುಸರಿಸಬೇಕು. ಅಪೋಸ್ತಲನು ಈ ಬಗ್ಗೆ ಹೀಗೆ ಒತ್ತಾಯಿಸುತ್ತಾ ನಮ್ಮ ಗಮನವನ್ನು ಸೆಳೆಯುತ್ತಾನೆ.

"ಕನ್ಯೆಯರನ್ನು (ಪುರುಷ ಹಾಗೂ ಸ್ತ್ರೀ) ಕುರಿತು ಕರ್ತನಿಂದ ಬಂದ ಆಜ್ಞೆ ನನಗೆ ಯಾವುದೂ ಇಲ್ಲ; ಆದರೆ ನಂಬಿಗಸ್ತನಾಗಿರುವುದಕ್ಕೆ ಕರ್ತನಿಂದ ಕರುಣೆಯನ್ನು ಹೊಂದಿದವನಾಗಿ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ಈಗಿನ ಕಷ್ಟಕಾಲದ (ಅಂದರೆ ಪ್ರಸ್ತುತ ಪರಿಸ್ಥಿತಿಯಲ್ಲಿ–ನಮ್ಮ ಮುಂದಿರುವ ನಮ್ಮ ಸ್ವಂತ ಅಸಮರ್ಪಕತೆಗಳು ಮತ್ತು ಇತರರ ಅಸಮರ್ಪಕತೆಗಳು, ಮತ್ತು ಕರ್ತನಿಗಾಗಿ ತಮ್ಮನ್ನು ಪ್ರತಿಷ್ಠಿಸಿಕೊಂಡಿರುವವರ ವಿಶೇಷ ಕರ್ತವ್ಯಗಳು, ಸವಲತ್ತುಗಳು ಮತ್ತು ಅವಕಾಶಗಳು) ನಿಮಿತ್ತ ಜನರು ಇದ್ದಹಾಗೇ (ಸತ್ಯವು ಆತನನ್ನು ಕಂಡುಕೊಳ್ಳುವಂತೆ ವಿವಾಹಿತನಾಗಿಯೋ, ಅವಿವಾಹಿತನಾಗಿಯೋ)ಇರುವುದು ಒಳ್ಳೆಯದೆಂದು ಭಾವಿಸುತ್ತೇನೆ. ಹೆಂಡತಿಯನ್ನು ಕಟ್ಟಿಕೊಂಡಿದ್ದೀಯೋ? ಬಿಡುಗಡೆ ಆಗುವುದಕ್ಕೆ ಪ್ರಯತ್ನಿಸಬೇಡ. ಹೆಂಡತಿಯ ಕಟ್ಟಿಲ್ಲದವನಾಗಿದ್ದೀಯೋ? ಹೆಂಡತಿಯನ್ನು ದೊರಕಿಸಿಕೊಳ್ಳುವುದಕ್ಕೆ ಪ್ರಯತ್ನಿಸ ಬೇಡ. ಒಂದು ವೇಳೆ ನೀನು ಮದುವೆ ಮಾಡಿಕೊಂಡರೂ ಪಾಪವಿಲ್ಲ, ಕನ್ನಿಕೆಯು ಮದುವೆ ಮಾಡಿಕೊಂಡರೂ ಪಾಪವಿಲ್ಲ".

"ಆದರೆ, ಮದುವೆಮಾಡಿಕೊಂಡವರಿಗೆ ಶರೀರ ಸಂಬಂಧವಾಗಿ ಕಷ್ಟ ಸಂಭವಿಸುವುದುಂಟು; ಇದು ನಿಮಗೆ ಉಂಟಾಗಬಾರದೆಂದು ನನ್ನ ಅಪೇಕ್ಷೆ. ಸಹೋದರರೇ, ನಾನು ಹೇಳುವುದೇನೆಂದರೆ – ಸಮಯವು ಸಂಕೋಚವಾದದ್ದರಿಂದ ಇನ್ನು ಮೇಲೆ ಹೆಂಡತಿಯುಳ್ಳವರು ಹೆಂಡತಿ ಯಿಲ್ಲದವರಂತೆಯೂ, (ಸಾಧ್ಯವಾದಷ್ಟು ಲೌಕಿಕ ಸಂಬಂಧವನ್ನು ಲಕ್ಷಿಸದಿರುವುದು ಮತ್ತು ಪರಲೋಕದವುಗಳ ಮೇಲೆ ಪ್ರೀತಿಯನ್ನಿರಿಸಿಕೊಳ್ಳುವುದು) ಮತ್ತು ಅಳುವವರು (ಲೌಕಿಕ ತೊಂದರೆಗಳಿಂದ) ಅಳದವರಂತೆಯೂ (ಪರೀಕ್ಷೆಗಳು ಮತ್ತು ನಿರಾಶೆಗಳನ್ನು ಹಾಗೂ ಲೌಕಿಕ ಪರಿಸ್ಥಿತಿಯಲ್ಲಿ ಒದಗುವ ಎಲ್ಲಾ ಕಷ್ಟಗಳನ್ನು ಮುಂದೆ ಒದಗಿಬರುವ ಉತ್ತಮ ವಾಗ್ದಾನಗಳ ಸಂತೋಷಗಳಿಗಾಗಿ ಮರೆತು) ಸಂತೋಷಪಡುವವರು (ಲೌಕಿಕ ಸಂಗತಿಗಳಿಗಾಗಿ) ಸಂತೋಷ ಪಡದವರಂತೆಯೂ (ಆತ್ಮೀಕ

ಸಂಗತಿಗಳ ಬಗ್ಗೆ ಅವರಿಗಿರುವ ಸಂತೋಷವು ಎಲ್ಲಾ ಲೌಕಿಕ ಸಂತೋಷಗಳನ್ನು ಮರೆಮಾಡುತ್ತವೆ), ಕೊಂಡುಕೊಳ್ಳುವವರು ಕೊಂಡದ್ದು ತಮ್ಮದೇ ಎಂದು ಹೇಳದವರಂತೆಯೂ ( ಲೌಕಿಕ ಸಂಗತಿಗಳ ಮೇಲೆ ತಮ್ಮ ಪ್ರೀತಿಯನ್ನು ಇರಿಸದಂತೆ), ಲೋಕವನ್ನು ಅನುಭೋಗಿಸುವವರು ಅದನ್ನು ಪರಿಪೂರ್ಣವಾಗಿ ಅನುಭೋಗಿಸದವರಂತೆಯೂ ಇರಬೇಕು; ಯಾಕೆಂದರೆ ಈ ಪ್ರಪಂಚದ ತೋರಿಕೆಯು ಗತಿಸಿಹೋಗುತ್ತಾ ಅದೆ (ಅದರೆ ನೂತನ ಸೃಷ್ಟಿಗಳಾಗಿ ನಾವು ನೂತನ ಭರವಸೆಗಳಿಗನುಸಾರ ಜೀವಿಸುವವರಾಗಿದ್ದು ನಿರಂತರವಾಗಿ ದೈಹಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸದೆ, ಯಾವುದೇ ಬೆಲೆತೆತ್ತು ನಮ್ಮ ಕರೆ ಮತ್ತು ಆಯ್ಕೆಗಳನ್ನು ನಿಶ್ಚಿತ ಪಡಿಸಿಕೊಳ್ಳುವವರಾಗಿದ್ದು ಆ ಕಾರಣ ಭವ್ಯವಾದ ದೈವೇಚ್ಛೆಯಲ್ಲಿ ಬರಲಿರುವ ಲೋಕದಲ್ಲಿ ಕರ್ತನೊಂದಿಗೆ ಪಾಲುಗಾರರಾಗಲು ಬಯಸುತ್ತೇವೆ)."

"ಆದರೆ, ನೀವು ಚಿಂತೆಯಿಲ್ಲದವರಾಗಿರಬೇಕೆಂಬುದು ನನ್ನ ಇಷ್ಟ. (ಲೌಕಿಕ ಸಂಗತಿಗಳಿಗಾಗಿ ಮತ್ತು ಅವುಗಳ ಕಾರಣ ಮುಂಬರುವ ವಾತ್ಸಲ್ಯ ಮತ್ತು ಮಾನಸಿಕ ಪರಿವರ್ತನೆಗಳ ಎಚ್ಚರಿಕೆಗಳಿಗಾಗಿ, ನಾನೀಗ ಕೆಲವೊಂದು ಪ್ರಶ್ನಿಸಲಾಗದ ಸತ್ಯತೆಗಳ ಬಗ್ಗೆ ನಿಮ್ಮ ಗಮನವನ್ನು ಸೆಳೆಯುತ್ತೇನೆ) ಮದುವೆಯಿಲ್ಲದವನು (ಸಂಪೂರ್ಣವಾಗಿ ಪ್ರತಿಷ್ಠಿತನಾದವನು) ತಾನು ಕರ್ತನನ್ನು ಹೇಗೆ ಮೆಚ್ಚಿಸಬೇಕೆಂದು ಕರ್ತನ ಕಾರ್ಯಗಳನ್ನು ಕುರಿತು ಚಿಂತಿಸುತ್ತಾನೆ. ಮದುವೆಯಾದವನು ತನ್ನ ಹೆಂಡತಿಯನ್ನು ಹೇಗೆ ಮೆಚ್ಚಿಸಬೇಕೆಂದು ಪ್ರಪಂಚದ ಕಾರ್ಯಗಳನ್ನು ಕುರಿತು ಚಿಂತಿಸುತ್ತಾನೆ, (ಆತನು ತನ್ನ ವಾತ್ಸಲ್ಯದ ವಿಭಜನೆಯನ್ನು ಎದುರಿಸುವ ನಿರಂತರವಾದ ಗಂಡಾತರವನ್ನು ಮತ್ತು ತನ್ನನ್ನು ನಿರಂತರವಾಗಿ ಕಾಪಾಡಿಕೊಳ್ಳುವ ಅವಶ್ಯಕತೆಯನ್ನು ಇಲ್ಲವಾದಲ್ಲಿ ಈ ಲೋಕದ ವಾತ್ಸಲ್ಯವು ತನ್ನೆಲ್ಲಾ ಸಮಯವನ್ನು, ಪ್ರೀತಿಯನ್ನು ಮತ್ತು ಆಸಕ್ತಿಗಳನ್ನು ಹೀರಿಕೊಳ್ಳುವ ಸಾಧ್ಯತೆಗಳನ್ನು ಎದುರಿಸುತ್ತಾನೆ ಮತ್ತು ಇದು ಆತನು ಕರ್ತನೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಉಲ್ಲಂಘನೆಯಾಗುತ್ತದೆ; ಮತ್ತು ಆತನು ಜಯಹೊಂದುವ ಶಿಷ್ಯನೂ ದೇವರ ರಾಜ್ಯದ ಸಹ ವಾರಸುದಾರನೂ ಆಗಿದ್ದಲ್ಲಿ ಸತ್ಯದ ಆಸಕ್ತಿಗಳು ಉತ್ತುಂಗ ಸ್ಥಿತಿಯಲ್ಲಿರುತ್ತವೆ). ಅದರಂತೆ ಹೆಂಡತಿಗೂ ಕನ್ನಿಕೆಗೂ (ಪರಿಸ್ಥಿತಿಗಳಲ್ಲಿ) ವ್ಯತ್ಯಾಸವುಂಟು. ಮದುವೆಯಿಲ್ಲದವಳು (ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡವಳು) ತಾನು ದೇಹಾತ್ಮಗಳಲ್ಲಿ ಪವಿತ್ರಳಾಗಿರಬೇಕೆಂದು ಕರ್ತನ ಕಾರ್ಯಗಳನ್ನು ಕುರಿತು ಚಿಂತಿಸುತ್ತಾಳೆ. ಆದರೆ ಮದುವೆಯಾದವಳು ತನ್ನ ಗಂಡನನ್ನು ಹೇಗೆ ಮೆಚ್ಚಿಸಬೇಕೆಂದು ಪ್ರಪಂಚದ ಕಾರ್ಯಗಳನ್ನು ಕುರಿತು ಚಿಂತಿಸುತ್ತಾಳೆ."

"ನಾನು ನಿಮಗೆ ಉರ್ಲು ಹಾಕಬೇಕೆಂದು ( ನಿಮ್ಮ ಸ್ವಾತಂತ್ರ್ಯವನ್ನು ಕಾರ್ಯಗತಗೊಳಿಸುವುದನ್ನು ನಿಗ್ರಹಿಸುವಂತೆ) ಇದನ್ನು ಹೇಳುವುದಿಲ್ಲ ( ಆದರೆ, ಯಾವುದೇ ದಾಸತ್ವಕ್ಕೆ ಒಳಗಾಗುವಂತೆ, ಅಥವಾ ನಿಮಗೆ ಹೆಚ್ಚು ಹೊರೆಯಾಗುವಂತೆ ಬಯಸುವುದಿಲ್ಲ. ಆದರೆ ಅವಿವಾಹಿತರು ತಾವು ಎದುರಿಸಬೇಕಾದ ಸಂಗತಿಗಳನ್ನು ಜಾಗರೂಕತೆಯಿಂದ ತೂಗಿನೋಡಿ ಆತ್ಮಿಕ ಹಿತಾಸಕ್ತಿಗಳನ್ನು ಪರಿಗಣಿಸಿ, ವಿವಾಹವಾಗುವುದರಿಂದ ಕಳೆದುಕೊಳ್ಳುವ ಸವಲತ್ತುಗಳನ್ನು ಗಣನೆಗೆ ತೆಗೆದುಕೊಂಡು) ನೀವು ಸಜ್ಜನರಿಗೆ ತಕ್ಕ ಹಾಗೆ ನಡೆದು ಭಿನ್ನಭಾವವಿಲ್ಲದೆ ಕರ್ತನಿಗೆ ಪಾದಸೇವೆ ಮಾಡುವವ ರಾಗಬೇಕೆಂದು ( ನೂತನ ಸೃಷ್ಟಿಗಳಾದ ನಿಮಗೆ ಇದು ಬಹಳ ಅನುಕೂಲಕರ) ನಿಮ್ಮ ಹಿತಕ್ಕೋಸ್ಕರವೇ ಹೇಳುತ್ತೇನೆ. ಒಬ್ಬನು ತನ್ನ ಮಗಳಿಗೆ (ಮದುವೆ ಮಾಡಿಸುತ್ತೇನೆಂದು ನಂಬಿಸಿದ ತನ್ನ ಮಹಿಳಾ ಸ್ನೇಹಿತೆಗೆ) ಮದುವೆಯಿಲ್ಲದಿರುವುದು ಮರ್ಯಾದೆ ಅಲ್ಲವೆಂದು ಭಾವಿಸಿದರೆ ಮತ್ತು ಆಕೆಗೆ ಪ್ರಾಯವು ಕಳೆದುಹೋಗುತ್ತದಲ್ಲಾ, (ಆಕೆಯ ನಿಶ್ಚಿತಾರ್ಥದ ಕಾರಣ ಬೇರೆ ವೈವಾಹಿಕ ಅವಕಾಶಗಳು ತಪ್ಪಿಹೋಗಿರುವಲ್ಲಿ) ಮದುವೆಯಾಗುವುದು (ಆಕೆಯನ್ನು ಕಾಪಾಡಲು, ಬೆಂಬಲ ನೀಡಲು) ಅವಶ್ಯವೆಂದು ಅವನಿಗೆ ಕಂಡರೆ (ಪ್ರಕರಣದ ಅವಶ್ಯಕತೆಯು ಆಜ್ಞಾಪಿಸುವುದಾದಲ್ಲಿ) ತನ್ನಿಷ್ಟದಂತೆ ಮಾಡಲಿ. ಅವನು ಪಾಪ ಮಾಡುವುದಿಲ್ಲ, ಮದುವೆ ಮಾಡಿಕೊಡಲಿ. ಆದರೆ ಒಬ್ಬನು ದೃಢಚಿತ್ತನಾಗಿದ್ದು (ಸ್ವಯಂ ನಿಯಂತ್ರಣವನ್ನು ಜಾರಿಗೊಳಿಸುವವನಾಗಿ ಅವಿವಾಹಿತನಾಗಿಯೇ ಇದ್ದು ತನ್ನ ಜೀವನವನ್ನು ಕರ್ತನಿಗೆ ಮೀಸಲಿಡುವ ದೃಢ ಮನಸ್ಕನಾಗಿದ್ದಲ್ಲಿ) ಬಲವಂತವೇನೂ ಇಲ್ಲದೆ ತನ್ನಿಷ್ಟವನ್ನು ನಡಿಸುವುದಕ್ಕೆ ಹಕ್ಕುಳ್ಳವನಾಗಿ ತನ್ನ ಮಗಳನ್ನು ಮದುವೆ ಮಾಡಿಕೊಡುವುದಿಲ್ಲವೆಂದು ತನ್ನೊಳಗೆ ನಿರ್ಣಯಿಸಿಕೊಂಡರೆ ಅವನು ಹಾಗೆ ಮಾಡುವುದು ಒಳ್ಳೆಯದು. ಹಾಗಾದರೆ ತನ್ನ ಮಗಳನ್ನು ಮದುವೆ ಮಾಡಿಕೊಡುವವನು ಒಳ್ಳೇದನ್ನು ಮಾಡುತ್ತಾನೆ. ಮದುವೆ ಮಾಡಿಕೊಡದೆ ಇರುವವನು ಇನ್ನೂ ಒಳ್ಳೆಯದನ್ನು ಮಾಡುತ್ತಾನೆ".

"ಹೆಂಡತಿಯು ತನ್ನ ಗಂಡನು ಜೀವದಿಂದಿರುವ ತನಕ ಅವನಿಗೆ ಬದ್ಧಳಾಗಿದ್ದಾಳೆ; ಗಂಡನು ಸತ್ತಿದ್ದರೆ ಆಕೆ ಬೇಕಾದವನನ್ನು ಮದುವೆ ಮಾಡಿಕೊಳ್ಳುವುದಕ್ಕೆ ಸ್ವತಂತ್ರಳಾಗಿದ್ದಾಳೆ. ಆದರೆ ಈ ಕಾರ್ಯವು ಕರ್ತನ ಶಿಷ್ಯರಿಗೆ ತಕ್ಕಂತೆ ನಡೆಯಲಿ. ಆದರೂ ಮದುವೆ ಮಾಡಿಕೊಳ್ಳುವುದಕ್ಕಿಂತಲೂ ಇದ್ದ ಹಾಗೆಯೇ ಇರುವುದು ಆಕೆಗೆ ಸುಖವೆಂದು ನನ್ನ ಅಭಿಪ್ರಾಯ; ನನಗೂ ದೇವರ ಆತ್ಮವುಂಟೆಂದು ನೆನಸುತ್ತೇನೆ." (ನಾನೀಗಾಗಲೇ ಸ್ವಚ್ಛವಾಗಿ ಹೇಳಿರುವಂತೆ ಈ ವಿಷಯದಲ್ಲಿ ಕರ್ತನ ಮನಸ್ಸು, ವಿಧಿಗನುಸಾರವಾಗಿಯಾಗಲೀ ನೇರವಾದ ಸ್ಫೂರ್ತಿ ಯಿಂದಾಗಲೀ ಮಾತನಾಡುತ್ತಿಲ್ಲ; ಆದರೆ ನನ್ನ ಸ್ವಂತ ನಿಶ್ಚಿತಾಭಿಪ್ರಾಯ ಅಥವಾ ದೇವರ ಚಿತ್ತದ ನಿರ್ಣಯಕ್ಕೆ ಅನುಸಾರವಾಗಿ ಮಾತನಾಡುತ್ತೇನೆ) ( 1 ಕೊರಿ.7:25-40).

ವಿವಾಹವಾದ ನಂತರ ಬ್ರಹ್ಮಚರ್ಯ ಜೀವಿತವನ್ನು ಜೀವಿಸುವುದೋ ಇಲ್ಲವೋ ಎಂದು ನಿರ್ಣಯಿಸುವುದು ಒಬ್ಬನಿಗೆ ಬಹಳ ತಡವಾಗುವುದು. ಇದನ್ನು ಅಪೋಸ್ತಲನು ಬಹಳ ವೈಶಿಷ್ಟಪೂರ್ವಕ ಸೂಚಿಸುತ್ತಾ ಪತಿಗಾಗಲೀ, ಪತ್ನಿಗಾಗಲೀ ತಮ್ಮ ದೇಹದ ಮೇಲೆ ಅನನ್ಯವಾದ ನಿಯಂತ್ರಣವಿರುವುದಿಲ್ಲ; ವಿವಾಹದಲ್ಲಿ ಪ್ರತಿಯೊಬ್ಬರೂ ಮತ್ತೊಬ್ಬರಿಗೆ ಯಾವ ರೀತಿಯಲ್ಲಿ ಒಪ್ಪಿಸಿಕೊಟ್ಟಿದ್ದಾರೆಂದರೆ ಯಾವುದೇ ಮಿತವಾದ ಮತ್ತು ವಿವೇಚನಾಪೂರ್ವಕವಾದ

ವೈವಾಹಿಕ ಹಕ್ಕನ್ನು ನಿರಾಕರಿಸುವುದು ಅನ್ಯಾಯ ಮತ್ತು ವೈವಾಹಿಕ ಕರಾರಿನ ಉಲ್ಲಂಘನೆ ಎನಿಸುತ್ತದೆ. ಇಂತಹ ಕ್ರಮದ ಬಗ್ಗೆ "ಒಬ್ಬರನ್ನೊಬ್ಬರು ವಂಚಿಸುವುದು" ಎಂಬುವಂತೆ ಅಪೊಸ್ತಲನು "ಪ್ರಾರ್ಥನೆಗೆ ಮನಸ್ಸು ಕೊಡುವುದಕ್ಕಾಗಿ ನೀವು ಪರಸ್ಪರ ಸಮ್ಮತಿಯಿಂದ ಸ್ವಲ್ಪಕಾಲ ದಂಪತಿಧರ್ಮವನ್ನು ಬಿಟ್ಟು ಅಗಲಿರಬಹುದೇ ಹೊರತು ಅನ್ಯಥಾ ಹಾಗೆ ಮಾಡಬಾರದು" (1 ಕೊರಿ. 7:5) ಎಂದಿದ್ದಾನೆ. ಅಂತಹ ಸಂಗತಿಗಳ ಬಗ್ಗೆ ನಿರ್ಧರಿಸುವ ಕಾಲ ವಿವಾಹದ ಮುಂಚೆಯೇ, ಯಾರೊಬ್ಬರೂ ಮತ್ತೊಬ್ಬರನ್ನು ಕಟ್ಟಿಹಾಕುವ ಪ್ರಯತ್ನ ಮಾಡುವುದಾಗಲೀ, ವಿವಾಹ ಬಂಧನಕ್ಕೊಳಪಟ್ಟ ನಂತರ ಬ್ರಹ್ಮಚರ್ಯವನ್ನು ಪಾಲಿಸುತ್ತೇನೆಂಬುದಾಗಲೀ ಸರಿಯಲ್ಲ. ಬೇರೆ ಲೌಕಿಕ ವಿಚಾರಗಳಲ್ಲಿ ಇರುವಂತೆ ಇದರಲ್ಲಿ ಸಂಯಮವು ಒಂದು ನಿಯಮವಾಗಿರಬೇಕು. ಅದನ್ನು ತಡೆಹಿಡಿಯುವುದರಿಂದ ನೂತನ ಸ್ವಭಾವವು ದೇಹದ ಮೇಲೆ ತನ್ನ ಪ್ರಭಾಲ್ಯವನ್ನು ಕಾಪಾಡಿಕೊಳ್ಳಬಯಸುತ್ತದೆ* – ಹೃದಯದ ಪ್ರತಿಯೊಂದು ಆಲೋಚನೆಗಳನ್ನು ಸಹಾ ದೇವರಿಗೆ ಒಪ್ಪಿಸುವುದು. ಅದು ಎಷ್ಟೇ ಅಭಿಲಾಷೆಯುಳ್ಳದ್ದಾಗಿರಲಿ ನಿರ್ಬಂಧವಿಲ್ಲದ ಇಂದ್ರಿಯ ನಿಗ್ರಹ ಇವುಗಳು ಒಂದು ಉರುಲು ಅಥವಾ ವಿವಾಹ ಕರಾರನ್ನು ಉಲ್ಲಂಘಿಸುವ ಶೋಧನೆಯಾಗಬಾರದೆಂದು ಮತ್ತು ಇವುಗಳನ್ನು ಒಬ್ಬರು ಮತ್ತೊಬ್ಬರ ಮೇಲೆ ಹೇರಬಾರದೆಂದು ಸೂಚಿಸುತ್ತಾ ಅಪೊಸ್ತಲನು ಹೇಳುವುದೇನೆಂದರೆ:–

**"ಗಂಡನು ಹೆಂಡತಿಗೆ ಸಲ್ಲತಕ್ಕದ್ದನ್ನು ಸಲ್ಲಿಸಲಿ, ಹಾಗೆಯೇ ಹೆಂಡತಿಯು ಗಂಡನಿಗೆ ಸಲ್ಲಿಸಲಿ. ಹೆಂಡತಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ; ಅದು ಗಂಡನಿಗುಂಟು. ಹಾಗೆಯೇ ಪುರುಷನಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ ಅದು ಹೆಂಡತಿಗುಂಟು. ಪ್ರಾರ್ಥನೆ ಮನಸ್ಸು ಕೊಡುವುದಕ್ಕಾಗಿ ನೀವು ಪರಸ್ಪರ ಸಮ್ಮತಿಯಿಂದ ಸ್ವಲ್ಪ ಕಾಲ ದಂಪತಿಧರ್ಮವನ್ನು ಬಿಟ್ಟು ಅಗಲಿರಬಹುದೇ ಹೊರತು ಅನ್ಯಥಾ ಹಾಗೆ ಮಾಡಬಾರದು; ಆಮೇಲೆ ಸೈತಾನನು ನಿಮಗೆ ದಮೆಯಿಲ್ಲದಿರುವುದನ್ನು ನೋಡಿ ನಿಮಗೆ ದುಷ್ಪ್ರೇರಣೆ ಮಾಡದಂತೆ ತಿರುಗಿ ಕೂಡಿಕೊಳ್ಳಿರಿ. ಹೀಗೆ ಮಾಡಬಹುದೆಂದು ಹೇಳುವುದು ಹಿತೋಪದೇಶವೇ ಹೊರತು ಆಜ್ಞೆಯಲ್ಲ. ನಾನಿರುವಂತೆಯೇ ಎಲ್ಲಾ ಮನುಷ್ಯರೂ ಇರಬೇಕೆಂಬುದು ನನ್ನ ಇಷ್ಟ; ಆದರೆ ಒಬ್ಬನು ಒಂದು ವಿಧವಾಗಿ ಮತ್ತೊಬ್ಬನು ಇನ್ನೊಂದು ವಿಧವಾಗಿ ದೇವರಿಂದ ವರವನ್ನು ಹೊಂದಿಕೊಂಡಿದ್ದಾನೆ. ಮದುವೆಯಿಲ್ಲದವರನ್ನೂ ವಿಧವೆಯರನ್ನೂ ಕುರಿತು ನಾನು ಹೇಳುವುದೇನೆಂದರೆ– ನಾನಿರುವಂತೆಯೇ ಇರುವುದು ಅವರಿಗೆ ಒಳ್ಳೆಯದು. ಅವರು ದಮೆಯಿಲ್ಲದವರಾದರೆ ಮದುವೆ ಮಾಡಿಕೊಳ್ಳಲಿ; ಕಾಮತಾಪ ಪಡುವುದಕ್ಕಿಂತ ಮದುವೆ ಮಾಡಿಕೊಳ್ಳುವುದು ಉತ್ತಮವಷ್ಟೆ" (1ಕೊರಿ.7:3–9) (* ಯಾಜಕ ಕಾಂಡ 20:18; ಮತ್ತು 15:25ರಲ್ಲಿರುವ ಯೆಹೂದಿ ಕಟ್ಟುಪಾಡುಗಳು).**

## "ಕರ್ತನಲ್ಲಿ ಮಾತ್ರವೇ" "Only in the Lord"

ಕರ್ತನ ಆಜ್ಞೆಗಳು ಎಷ್ಟೋ ವಿವೇಚನಾಯುಕ್ತವೂ, ವಿವೇಕವುಳ್ಳವುಗಳೂ ಆಗಿವೆ! – ಅವುಗಳು ಕೇಳುವ ಕಿವಿಯುಳ್ಳವರಿಗೆ ಮತ್ತು ತಮ್ಮ ಸಮಾಲೋಚನಾಕಾರನಿಗೆ ವಿಧೇಯರಾಗುವವರಿಗೆ ಎಷ್ಟೋ ಲಾಭಧಾಯಕವಾಗಿವೆ. "ಕರ್ತನ ಜನರು ಕರ್ತನಲ್ಲಿ ಮಾತ್ರವೇ ವಿವಾಹವಾಗಬೇಕು!" ಎಂಬ ಮಾತು ಮೊದಲ ನೋಟಕ್ಕೆ ಒಂದು ಮಿತಿಯುಳ್ಳದ್ದಾಗಿ, ಹದ್ದುಬಸ್ತಿನದಾಗಿ ಮತ್ತು ದಾಸ್ಯದ ಮಾತಾಗಿ ಕಂಡುಬರುತ್ತದೆ! ಆದರೆ ಹಾಗಲ್ಲ – ಇದು ಕೇವಲ ಒಂದು ಬುದ್ಧಿಮಾತು, ಈ ಬುದ್ಧಿಮಾತುಗಳನ್ನು ಅನುಸರಿಸುವವರು ತಾವು ಸಂಭವನೀಯವಾಗಿ ಅದರಿಂದ ಆಶೀರ್ವಾದ ಹೊಂದಿದವರಾಗಿ ಕಂಡುಬರುತ್ತಾರೆ ಮತ್ತು ಯಾರ್ಯಾರು ಈ ಬುದ್ಧಿಮಾತುಗಳನ್ನು ಉಪೇಕ್ಷೆಮಾಡುತ್ತಾರೋ ಅಂಥವರು ನಂತರದಲ್ಲಿ ತಮ್ಮ ಕ್ರಮದ ಅವಿವೇಕತೆಯ ತೀವ್ರ ಅನುಭವವನ್ನು ಪಡಕೊಳ್ಳುತ್ತಾರೆ.

ಪ್ರಸ್ತುತ ಜೀವನಕ್ಕೆ ಸಂಬಂದಪಟ್ಟ ಬೇರೆ ಯಾವುದೇ ಕರಾರು ಅಥವಾ ವ್ಯವಸ್ಥೆಗಳು ವಿವಾಹ ಒಪ್ಪಂದದಷ್ಟು ಮುಖ್ಯವಲ್ಲ: ಹೀಗಿದ್ದಾಗ್ಯೂ ಸೊಗಸಾದ ಸಮತೋಲನವುಳ್ಳ ಮನಸ್ಸುಳ್ಳವರು ಇದನ್ನು ಹಗುರವಾಗಿ ಮತ್ತು ತುಚ್ಛತನದಿಂದ ಎಣಿಸುವಂತೆ ಕಂಡುಬರುತ್ತಾರೆ. ಕೆಲವು ತಂದೆತಾಯಿಗಳು ಜಮೀನು ಕೊಳ್ಳುವ, ತಮ್ಮ ದನಕರುಗಳ, ಕುರಿಗಳ, ಕುದುರೆಗಳ, ನಾಯಿಗಳ ಮತ್ತು ಹಂದಿಗಳ ಪೋಷಣೆ ಮಾಡುವಾಗ ಮಾನವ ಸಂತತಿಯನ್ನು ಅಭಿವೃದ್ಧಿ ಪಡಿಸುವ ತಮ್ಮ ಪಾಲಿಗಿಂತ ಹೆಚ್ಚಿನ ಬುದ್ಧಿವಂತಿಕೆ ಪ್ರದರ್ಶಿಸಿ ಬಹಳ ಜಾಗ್ರತೆ ವಹಿಸುತ್ತಾರೆ. ಅಂತಹ ಅವಿವೇಕತೆಯನ್ನು ಪರಿಗಣಿಸುವುದು ಕಷ್ಟ. ಬಹುಶಃ ಅವರು ವಿವಾಹವನ್ನು ಒಂದು ಲಾಟರಿ ಅಥವಾ ಅದೃಷ್ಟದ ಆಯ್ಕೆ, ಉದ್ದೇಶಪೂರ್ವಕದ ಬದಲಾಗಿ ಆಕಸ್ಮಿಕವಾಗಿ ನಡೆಯುವಂತಾದ್ದು ಎಂದು ಭಾವಿಸುತ್ತಾರೆ; ಅಥವಾ ಅವರು ದೇವರು ಮಾನವ ಕುಲದ ಪ್ರತಿಯೊಬ್ಬ ವ್ಯಕ್ತಿಯ ಸೃಷ್ಟಿಕರ್ತನು ಎಂದು ಭಾವಿಸಿದರೂ ಪ್ರಥಮ ಜೋಡಿಯಲ್ಲಿ ಯಶಸ್ವಿಯಾಗಿ ಪೂರೈಸಲ್ಪಟ್ಟ ಆತನ ಸಮರ್ಪಕವಾದ ಕಾರ್ಯವನ್ನು ಮತ್ತು ಆತನು ಅವರಿಗೆ ನೀಡಿದ ಜನ್ಮಕೊಡುವ ಶಕ್ತಿಯನ್ನು ಮತ್ತು ಆ ಶಕ್ತಿಯು ಅವರ ಸಂತಾನದವರಿಗೆ ಇಳಿದು ಬಂದದನ್ನು ಗ್ರಹಿಸದೇ ಹೋಗುತ್ತಾರೆ. ಮಾನವ ಸ್ವಭಾವದ ಸರಿಯಾದ ದೃಷ್ಟಿಕೋನವೆಂದರೆ ಅದು ಪ್ರಾಣಿಸೃಷ್ಟಿಯ ಅತ್ಯುತ್ತಮವಾದ ನಮೂನೆಯಾಗಿದೆ ಮತ್ತು ಉಳಿದವುಗಳಂತೆ ಆತನು ಸೃಷ್ಟಿಕರ್ತನಿಂದ ತನ್ನಂತೆಯೇ ಉತ್ಪತ್ತಿಮಾಡುವ ಶಕ್ತಿಯನ್ನು ಪಡಕೊಂಡಿದ್ದಾನೆ. ಈ ದೃಷ್ಟಿಕೋನದಿಂದ ದೇವರು ಈಗ ಜೀವಿಸುವ ಯಾವುದೇ ಮಾನವ ಕುಟುಂಬದ ನೇರವಾದ ಸೃಷ್ಟಿಕರ್ತನಲ್ಲ ಎಂಬುದು ವಿಶದವಾಗುತ್ತದೆ. ಮಾನವ ಜನಾಂಗವು ಯಾತನೆ ಪಡುತ್ತಿರುವ ವಿವಿಧ ರೀತಿಯ ಬಲಹೀನತೆಗಳು ಮತ್ತು ಅಸಮರ್ಪಕತೆಗಳು, ದೌರ್ಬಲ್ಯತೆಗಳು ಆತನ ಕಾರ್ಯದ ಅಪರಿಪೂರ್ಣತೆಯೆಂದು ಆರೋಪಿಸುವಂತಿಲ್ಲ. ಆದರೆ ಇವುಗಳೆಲ್ಲವೂ ನಮ್ಮ ಜನಾಂಗವು ಪಾಪದ ಕಾರಣ ಪತನಗೊಂಡ ಮತ್ತು ಪಾಪದ ಸ್ವಾಭಾವಿಕ ಪ್ರಭಾವದ ಪರಿಣಾಮವಾಗಿದೆ. ಇದು ಇನ್ನೂ ಹೆಚ್ಚು ಹೆಚ್ಚು ಅಧೋಗತಿಗೆ, ಅಪರಿಪೂರ್ಣತೆಗೆ, ಕಡೆಗೆ ಅವನನ್ನು ಮರಣಕ್ಕೂ ಒಯ್ಯುವುದಾಗಿದೆ.

ಆದುದರಿಂದ ಪ್ರಾಕೃತ ಪುರುಷ ಮತ್ತು ಸ್ತ್ರೀಯು ಆದಷ್ಟು ಮಟ್ಟಿಗೆ ತಮಗಾದ ಪತನದ ಪ್ರಭಾವವು ತಮ್ಮ ಸಂತಾನಕ್ಕೆ

ಒಂದು ಶಾಖೆಯಾಗಿ ತಟ್ಟದಂತೆ, ತಮ್ಮ ಪಾತ್ರ ನಿರ್ವಹಿಸುವಂತೆ ಜಾಗರೂಕತೆಯಿಂದ ಕೂಡಲು ಆಲೋಚಿಸಬೇಕಾಗುತ್ತದೆ. ಉದಾಹರಣೆಗಾಗಿ ಅಂದರೆ ಹತ್ತಿರ ರಕ್ತ ಸಂಬಂಧಿಕರನ್ನು ಮದುವೆಯಾಗದಿರುವ ಸ್ವಗೋತ್ರ ಸಂಬಂಧಿತ ನಿಯಮಗಳನ್ನು ಗ್ರಹಿಸಿ ಅವುಗಳನ್ನು ಅವರು ಪಾಲಿಸಬೇಕು. ಪ್ರಾರಂಭದಲ್ಲಿ ಅಂತಹ ಕಟ್ಟುಪಾಡುಗಳೇನೂ ಇರಲಿಲ್ಲ. ಆದಾಮನ ಗಂಡು ಹೆಣ್ಣುಮಕ್ಕಳು ಪರಸ್ಪರ ವಿವಾಹಿತರಾದರು. ಯಾವುದೇ ಹಾನಿಯಾಗಲಿಲ್ಲ. ಕಾರಣ ಜನಾಂಗವು ಇನ್ನೂ ಸುಸ್ಥಿಯಲ್ಲಿತ್ತು. ಆ ಮಕ್ಕಳಮೇಲೆ ಯಾವುದೇ ನಿರ್ಧಿಷ್ಟವಾದ ಬಲಹೀನತೆಗಳಿರಲಿಲ್ಲ. ಆದರೆ, ಇಂದು ಜನಾಂಗಗಳು ನೀತಿಗೆಟ್ಟವುಗಳಾಗಿರುವುದರಿಂದ, ಕಾಯಿಲೆಗಳು ಮಾತ್ರವಲ್ಲ ಕುಟುಂಬದಲ್ಲಿ ಹರಿಯುವ ಮಾನಸಿಕ ಲಕ್ಷಣಗಳು, ಚಿಹ್ನೆಗಳು ಹಾಗೂ ವ್ಯಕ್ತಿಗತ ವಿಲಕ್ಷಣಗಳ ಮೇಲೆಯೂ ಪ್ರಭಾವ ಬೀರಬಹುದು. ಆದುದರಿಂದ ಈ ರೀತಿಯ ದೈಹಿಕ ಮತ್ತು ಮಾನಸಿಕ ತೊಂದರೆಗಳನ್ನು ಹೆಚ್ಚಿಸಬಹುದಾದ ಹತ್ತಿರದ ರಕ್ತ ಸಂಬಂಧವನ್ನು ತ್ಯಜಿಸುವಂತೆ ನಮ್ಮ ಮಕ್ಕಳು ತಮ್ಮ ವಿವೇಕ, ಕರ್ತವ್ಯ, ನ್ಯಾಯಗಳೊಂದಿಗೆ ಅವರು ಆದಷ್ಟು ಮಟ್ಟಿಗೆ ತಮ್ಮ ಪ್ರಕೃತಿಸ್ವಭಾವಕ್ಕೆ ಬೇರೆಯಾಗುವ ಸಂಗಾತಿಯನ್ನು ಆರಿಸಿಕೊಳ್ಳುವುದರ ಉಚಿತತೆಯ ಬಗ್ಗೆಯೂ ಸಾಧ್ಯವಾದಷ್ಟು ಗ್ರಹಿಸಿಕೊಳ್ಳುವಂತೆ ಮಾಡಬೇಕು. ಪ್ರಕೃತಿಯು ಕೆಲಮಟ್ಟಿಗೆ ಈ ವಿಷಯದಲ್ಲಿ ಸಹಾಯ ಮಾಡುತ್ತದೆ. ಆದುದರಿಂದ ನಿರ್ಧಾರಿತ ಚೆಲುವೆಯರು ಅಥವಾ ನಿರ್ಧಾರಿತ ಕಪ್ಪುವರ್ಣದ ಸ್ತ್ರೀಯರು ಸಾಮಾನ್ಯವಾಗಿ ವಿರುದ್ಧ ಪ್ರಕೃತಿ ಸ್ವಭಾವದವರನ್ನೇ ತಮ್ಮ ಸಂಗಾತಿಗಳನ್ನಾಗಿ ಆರಿಸಿಕೊಳ್ಳುತ್ತಾರೆ.

ಆದರೆ, ಪ್ರಾಕೃತ ಮಾನವನಿಗೆ ಅನ್ವಯಿಸುವ ಈ ನಿಯಮಗಳು ನೂತನ ಸೃಷ್ಟಿಯೋರ್ವನು ತಾನು ಮದುವೆ ಮಾಡಿಕೊಳ್ಳುವುದು ಬುದ್ಧಿವಂತಿಕೆ ಮತ್ತು ಎಲ್ಲಾ ರೀತಿಯಲ್ಲಿ ಉತ್ತಮ ಎಂದು ನಿರ್ಧರಿಸಿದಲ್ಲಿ ಆತನಿಗೂ ಅನ್ವಯವಾಗುತ್ತವೆ. ಹೀಗಿದ್ದರೂ, ದೈಹಿಕ ರೀತಿಯಲ್ಲಿ ಸಂಗಾತಿಯಾಗಬಯಸುವ ನೂತನ ಸೃಷ್ಟಿಗೆ ಅಪೋಸ್ತಲನ ಒಂದು ಕಡೇ ಎಚ್ಚರಿಕೆ ಇದೆ. ಅದೇನೆಂದರೆ –ಆತನು **"ಕರ್ತನಲ್ಲಿ ಆಯ್ದುಕೊಳ್ಳಬೇಕು"** ಹಾಗಾದಲ್ಲಿ ಮಾತ್ರವೇ ಆತನು ಪ್ರಾಕೃತಿಕ ಮತ್ತು ಆತ್ಮೀಕ ಸಂಗತಿಗಳಲ್ಲಿ ಜೊತೆಗೂಡುತ್ತಾನೆ. ದೈಹಿಕವಾದ ಹತ್ತಿರ ಸಂಬಂಧವು ಮಕ್ಕಳಲ್ಲಿ ವೈಪರೀತ್ಯಗಳನ್ನು ಉಂಟುಮಾಡುತ್ತದೆ ಆದುದರಿಂದ ಆತ್ಮೀಕ ರೀತಿಯಲ್ಲಿಯೂ ಹಾನಿಕರವಾಗಬಹುದೆಂದು–ನೈತಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ವಿಲಕ್ಷಣ ಮಕ್ಕಳ ಜನನಕ್ಕೆ ಕಾರಣವಾಗಬಹುದೆಂದು ಕೆಲವರು ಒತ್ತಾಯಿಸಬಹುದು. ಅದಕ್ಕೆ ನಾವು ಉತ್ತರಿಸಿ ಹೇಳುವುದೇನೆಂದರೆ,

**"**ಇಲ್ಲ; ನೂತನ ಮನಸ್ಸು ಸ್ವೀಕರಿಸುವ ಪ್ರಮಾಣಕ್ಕನು ಸಾರವಾಗಿ ಅದರ ಪ್ರಭಾವವು ದೈಹಿಕ ವಿಲಕ್ಷಣತೆಗೆ ವಿರುದ್ಧವಾಗಿರುತ್ತದೆ. ಅಪೋಸ್ತಲನು ಹೇಳುವುದೇನೆಂದರೆ – **"ನಮಗೆ ಕ್ರಿಸ್ತನಲ್ಲಿರುವ ಮನಸ್ಸುಂಟು"** ಸ್ವಸ್ಥವಾದ ಮನಸ್ಸಿನಿಂದ – ನಾವು ಎಲ್ಲಾ ವಿಷಯಗಳನ್ನೂ ಕ್ರಿಸ್ತನ ದೃಷ್ಟಿಕೋನದಿಂದ ನೋಡುತ್ತೇವೆ. ನೂತನ ಸೃಷ್ಟಿಯು ದೈಹಿಕ ರೀತಿಯಲ್ಲಿ ಇನ್ನೂ ಅಸಮರ್ಪಕವಾಗಿದ್ದರೂ ಅದು ಪವಿತ್ರಾತ್ಮನಿಂದ ಪಡಕೊಂಡದ್ದು; ಮತ್ತು ಎಲ್ಲಾ ವಿಷಯಗಳಲ್ಲಿ ದೇವರ ಮನಸ್ಸನ್ನು ಅರ್ಥಮಾಡಿಕೊಳ್ಳುವಲ್ಲಿ ವಾಕ್ಯದ ಮೂಲಕ ಆತ್ಮನಿಂದಲೇ ನಿರ್ದೇಶಿಸಲ್ಪಟ್ಟಿದೆ.

ಈ ನೂತನ ಮನಸ್ಸು, ಮರ್ತ್ಯ ದೇಹದ ಮತ್ತು ಅದರ ಅಸಮರ್ಪಕವಾದ ಆಲೋಚನಾ ಸಲಕರಣೆಗಳ ಮೂಲಕವೇ ಕಾರ್ಯನಿರ್ವಹಿಸಬೇಕು ಎಂಬುದು ಸತ್ಯ. ಪರಂತು, ದೇಹದ ಅಸಮರ್ಪಕತೆಯು ನೂತನ ಮನಸ್ಸನ್ನು ಕೆಲಮಟ್ಟಿಗೆ ವರ್ಣಗೊಳಿಸಿ, ಅದರ ಸುಂದರ, ಭವ್ಯವಾದ ಸಾರೂಪ್ಯತೆಯನ್ನು ವಿರೂಪಗೊಳಿಸಬಹುದು ಆದರೆ ಇಚ್ಛೆಯು ಮಹತ್ವವುಳ್ಳದ್ದು ಮತ್ತು ದೇಹವು ಹೆಚ್ಚುಕಡಿಮೆ ಅದರಿಂದ ಪ್ರಭಾವಯುಕ್ತವಾಗಿದೆ, ರೂಪುಗೊಂಡಿದೆ, ಆಕಾರಹೊಂದಿದೆ. ಈ ಕಾರಣದಿಂದ ಯಾರ್ಯಾರು ಕ್ರಿಸ್ತನ ಮನಸ್ಸನ್ನು ಅಂಗೀಕರಿಸುತ್ತಾರೋ ಅವರುಗಳು ಅದೇ ಪ್ರಮಾಣದಲ್ಲಿ ಜೀವನದ ಎಲ್ಲಾ ವಿಚಾರಗಳಲ್ಲಿ, ಆಸಕ್ತಿಗಳಲ್ಲಿ ಇನ್ನೂ ಹೆಚ್ಚು ದೃಢಗೊಳ್ಳುತ್ತಾರೆ. ಆತನು ಮೊದಲಿಗಿಂತ ಇನ್ನೂ ಹೆಚ್ಚಾಗಿ ವಿವೇಕಶಾಲಿಯಾಗಿದ್ದಾನೆ ಎಂದು ಲೋಕವು ಪರಿಗಣಿಸಲ್ಪಡುತ್ತಿದೆ ಎಂಬುದು ಇದರ ಅರ್ಥವಲ್ಲ. ಆದರೆ ಇದರರ್ಥ ಆತನು ನಿಜವಾಗಿಯೂ ಹೆಚ್ಚು ಬುದ್ಧಿವಂತನಾಗಿದ್ದಾನೆ ಮತ್ತು ಆತನ ಈ ಹೆಚ್ಚಿನ ಬುದ್ಧಿವಂತಿಕೆಯನ್ನು ಕುರುಡಾದ ಪ್ರಪಂಚವು ಗ್ರಹಿಸದಿರುವುದೇ ಕಾರಣವಾಗಿದೆ. ವಿವೇಕಶೂನ್ಯವಾಗಿ, ಕ್ರಿಸ್ತನಲ್ಲಿರುವ ಮನಸ್ಸು ಇಲ್ಲದೆ ಮತ್ತು ಎಲ್ಲಾ ಸಂಗತಿಗಳನ್ನು ನೀತಿಭ್ರಷ್ಟತೆ ಮತ್ತು ಸ್ವಾರ್ಥತೆಯಿಂದ ಕೂಡಿದ ವಕ್ರ ದೃಷ್ಟಿಯಿಂದ ನೋಡುವುದಾಗಿದೆ. ನಮಗೆ ಅಗತ್ಯವಾದ ವಿವೇಕವು ಮೇಲಿಂದ ಬರಬೇಕಾದುದು. ಅಪೋಸ್ತಲನು ವಿವರಿಸುವಂತೆ ಇದು ನಮ್ಮನ್ನು ಹೆಚ್ಚು ಶುದ್ಧರನ್ನಾಗಿ, ಹೆಚ್ಚು ಶಾಂತಿಪ್ರಿಯರನ್ನಾಗಿ, ಹೆಚ್ಚು ದಯಾಳುಗಳನ್ನಾಗಿ, ಸಹೋದರರ ಮೇಲೆ, ಕುಟುಂಬದವರ ಮೇಲೆ, ಒಟ್ಟಾರೆ ಮಾನವಜಾತಿಯ ಮೇಲೆ ಹೆಚ್ಚು ಕರುಣೆಯುಳ್ಳವರನ್ನಾಗಿ ಮಾಡುತ್ತದೆ. ಹೌದು, ಪಶುಪ್ರಾಣಿಗಳ ಸೃಷ್ಟಿಯ ಮೇಲೆಯೂ ಸಹಾ. ಅಪೋಸ್ತಲನು ವಿವರಿಸುವಂತೆ ಈ ಲೋಕದ ವಿವೇಕವು ಲೌಕಿಕವಾದುದು, ಇಂದ್ರಿಯಾಸಕ್ತವಾದುದು, ಪೈಶಾಚಿಕವಾದುದು. ಪ್ರಪಂಚದ ಎಲ್ಲಾ ಸ್ತ್ರೀ ಪುರುಷರೂ ಇಂದ್ರಿಯಾಸಕ್ತರೂ, ಪೈಶಾಚಿಕ ಮನೋವೃತ್ತಿಯುಳ್ಳವರೂ ಎಂಬ ಅರ್ಥವಲ್ಲ. ಆದರೆ ಪ್ರಾಪಂಚಿಕ ವಿವೇಕದ ಸಾಮಾನ್ಯ ಧೋರಣೆ ಈ ದೆಸೆಯಲ್ಲಿಯೇ ಅದೆ. ಮಾನವಕುಲ ಎಷ್ಟೇ ಕುರುಡಾಗಿದ್ದರೂ ಅವರು ದಾಸತ್ವದ ಸರಪಣಿಯನ್ನು ನಿರಂತರವಾಗಿ ತಮ್ಮಿಂದ ಮತ್ತು ಇತರರಿಂದ ಮರೆಮಾಡ ಬಯಸುವ ಬಂಧಿಸಲ್ಪಟ್ಟ ಸ್ವಾರ್ಥ ನಿಯಮಗಳ ವಿರುದ್ಧ ಹೆಣಗುತ್ತಾರೆ.

**"ಕರ್ತನಲ್ಲಿ"** ಎಂಬುದನ್ನು ಕರ್ತನಲ್ಲಿರುವ ತೋರಿಕೆಯ ನಂಬಿಕೆಗಿಂತ, ಲೋಕದ ಸಭೆಯೊಂದರ ಶಾಬ್ದಿಕ ಸದಸ್ಯತ್ವಕ್ಕಿಂತ ಇನ್ನೂ ಹೆಚ್ಚಾಗಿ ಅರ್ಥ ಮಾಡಿಕೊಳ್ಳಬೇಕು. ಲೌಕಿಕ ವ್ಯಕ್ತಿಗಳು ಲೌಕಿಕ ವ್ಯಕ್ತಿಗಳನ್ನೇ ಮದುವೆಮಾಡಿಕೊಳ್ಳಬೇಕು. ಹೆಸರಿಗೆ ಮಾತ್ರವಾದ ಕ್ರೈಸ್ತ ಸಭೆಯವರು ಹೆಸರಿಗೆ ಮಾತ್ರವಾದ ಕ್ರೈಸ್ತ ಸಭೆಯವರನ್ನೇ ಮದುವೆ ಮಾಡಿಕೊಳ್ಳಬೇಕು. ಕ್ರಿಸ್ತನ ಅಮೂಲ್ಯ ರಕ್ತದಲ್ಲಿ ನಂಬಿಕೆಯಿರುವ ನ್ಯಾಯಸಮ್ಮತರಾದ ವಿಶ್ವಾಸಿಗಳು

ನ್ಯಾಯಸಮ್ಮತರಾದ ಸಂಗಾತಿಗಳನ್ನೇ ಮದುವೆಮಾಡಿಕೊಳ್ಳಬೇಕು. ಆದರೆ ಪೂರ್ಣ ಪ್ರತಿಷ್ಠೆಯ ಹೆಜ್ಜೆಯನ್ನಿಟ್ಟು ಕ್ರಿಸ್ತನ ದೇಹದ ಅಂಗಗಳಾಗಿರುವವರು, ನೂತನ ಸೃಷ್ಟಿಗಳು, ತಮ್ಮಂತವರನ್ನೇ –ಪುನಃ ಹುಟ್ಟಿರುವ (Begotten) ನೂತನ ಸೃಷ್ಟಿಗಳನ್ನು ಮಾತ್ರವೇ –"ಕರ್ತನಲ್ಲಿ ಇರುವವರನ್ನು" ಮಾತ್ರವೇ ಮದುವೆ ಮಾಡಿಕೊಳ್ಳಬೇಕು – ಕ್ರಿಸ್ತನ ದೇಹದ ಅಂಗೀಕೃತ ಸದಸ್ಯರುಗಳನ್ನು ಮಾತ್ರವೇ – ಆತನ ಪವಿತ್ರಾತ್ಮನ ಪಾಲುದಾರರು; ಇದರೊಂದಿಗೆ ಈಗಾಗಲೇ ತೋರಿಸಿರುವಂತೆ, ಇಬ್ಬರೂ ಸರಿಯಾದ ಲೈಂಗಿಕ ಸಂಬಂಧವನ್ನು ಇಟ್ಟುಕೊಳ್ಳುವಂತೆ ನೋಡಿಕೊಳ್ಳಬೇಕು. ಸ್ತ್ರೀಯು "ಕರ್ತನಲ್ಲಿ ಇರುವವನನ್ನು" ಮಾತ್ರವೇ ತಾನು ವಿವಾಹವಾಗುವಂತೆ ನೋಡಿಕೊಳ್ಳಬೇಕು. ಈ ರೀತಿಯಲ್ಲಿ ಆಕೆ ನೈತಿಕತೆ, ಬೌದ್ಧಿಕತೆ ಮತ್ತು ಆತ್ಮೀಕತೆ ಇವುಗಳುಳ್ಳಾತನನ್ನು ತನ್ನ ಕುಟುಂಬದ ಯಜಮಾನನ್ನಾಗಿ ಪಡೆಯಬಹುದು. ಆತನನ್ನು ಆಕೆಯು ಗೌರವಿಸಬಹುದು. ಪುರುಷನು ಸಹಾ ತಾನು "ಕರ್ತನಲ್ಲಿ ಇರುವಾತಳನ್ನು" ಮದುವೆ ಮಾಡಿಕೊಳ್ಳಲು ನೋಡಬೇಕು. ಆಕೆಯನ್ನು ಆತನು ಒಬ್ಬ ಒಳ್ಳೆಯ ಸಂಗಾತಿ, ಶುದ್ಧಮನಸ್ಸುಳ್ಳವಳು, ಮೃದು ಸ್ವಭಾವದವಳು, ಸಹಾಯ ಮಾಡತಕ್ಕವಳು ಎಂದು ನಿರ್ಣಯಿಸಬಹುದು. ಆಕೆಯು ಆತನಿಗಿಂತ ಮೇಲಿನವಳಾಗಿರತಕ್ಕದ್ದಲ್ಲ – ಇಲ್ಲವಾದಲ್ಲಿ ಆತನು ಸ್ವಾಭಾವಿಕವಾಗಿ ಹಿರಿಯಳು ಮತ್ತು ಕುಟುಂಬದ ಯಜಮಾನಳು ಎಂದು ಪರಿಗಣಿಸಬೇಕಾಗುತ್ತದೆ. ಧೃಢ ಮನಸ್ಸುಳ್ಳ ಎಲ್ಲಾ ನೂತನ ಸೃಷ್ಟಿಗಳೂ ಅವರು ಈ ಲೋಕದಲ್ಲಿ ಎಷ್ಟೇ ಅಗೌರವವನ್ನು ಸಹಿಸಬೇಕಾದರೂ ಈ ರೀತಿಯಲ್ಲಿ ಜೋಡಿಯಾಗುವುದನ್ನು ಅನುಸರಿಸಬೇಕಾಗುತ್ತದೆ. ಯಾಕೆಂದರೆ, ಈ ಲೋಕದವರು ಕರ್ತನ ಮನಸ್ಸಿನ ಮಾರ್ಗದರ್ಶನವನ್ನು ಪಡಕೊಂಡಿಲ್ಲ, ಆದರೆ ತಮ್ಮ ಸ್ವಂತ ನಿರ್ಣಯಗಳನ್ನು ತೆಗೆದುಕೊಳ್ಳುವ ಒಲವುಳ್ಳವರಾಗಿರುತ್ತಾರೆ ಮತ್ತು ಇವುಗಳು ತಮ್ಮ ಭ್ರಾಂತಿ ಮತ್ತು ವಿಚಿತ್ರ ಭಾವನೆಗಳಿಗನುಸಾರವಾಗಿ ಅಥವಾ ಪರಸ್ಪರ ವಂಚನೆಯುಳ್ಳವುಗಳಾಗಿಯೇ ಇರುತ್ತವೆ. ಏನಾದರೂ ಅನುಮಾನಗಳುಂಟಾದಲ್ಲಿ ಅವುಗಳನ್ನು ಸುರಕ್ಷಿತವಾಗಿ ಪರಿಹರಿಸಿಕೊಳ್ಳಿರಿ.–ಅದು ಪರಿಹಾರವಾಗುವವರೆಗೆ ತಾಳ್ಮೆಯಿಂದ ಕಾಯಬೇಕಾಗುತ್ತದೆ.

ಅಷ್ಟೊಂದು ನಿರ್ಧಿಷ್ಟವಾದ ದೃಷ್ಟಿಕೋನದಲ್ಲಿ ವಿವಾಹಗಳನ್ನು ಪರಿಗಣಿಸುವುದೇ ಆದರೆ ಸರಿಜೋಡಿಗಳು ಬಹು ವಿರಳವಾಗುತ್ತವೆ ಎಂದು ವಾದಿಸಬಹುದು. ಆ ರೀತಿಯಲ್ಲಿಯೇ ಆಗಬಹುದೆಂದು ನಾವು ಉತ್ತರಿಸುತ್ತೇವೆ; ಆದರೆ ಈಗ ಮದುವೆಯಾದವರಲ್ಲಿ ಹೆಚ್ಚಿನ ಪ್ರಮಾಣದವರು, ವಿಶೇಷವಾಗಿ ಕರ್ತನ ಕೃಪೆಯಿಂದ ಆತನೊಡನಿರುವ ತಮ್ಮ ಸಂಬಂಧದಲ್ಲಿ ನೂತನ ಸೃಷ್ಟಿಗಳಾಗಿ ಸ್ಪಷ್ಟವಾಗಿ ಹೆಚ್ಚಿನ ತಿಳುವಳಿಕೆಗೆ ಬಂದವರು ಮತ್ತು ದೈಹಿಕ ಸಂಗತಿಗಳಲ್ಲಿ ತಮ್ಮ ಆತ್ಮೀಕ ಅಭಿವೃದ್ಧಿಯ ಹಿತಕ್ಕನುಸಾರ ಆತನ ಅಭಿಪ್ರಾಯಗಳಿಗೆ ಹೆಚ್ಚು ಪರಿಚಿತರಾದವರು ಅವರು ಮಾಡಿದಂತೆ ಇನ್ನು ಮುಂದೆ ವಿವಾಹ ಮಾಡಿಕೊಳ್ಳುವುದಿಲ್ಲ–ಈಗ ಅವರು ಹೆಚ್ಚು ಬುದ್ದಿವಂತರಾಗಿದ್ದಾರೆ. ಅನೇಕ ಲೌಕಿಕ ಸಾಧ್ಯತೆಗಳಿಂದ, ಲೋಕದ ನ್ಯಾಯಾಲಯಗಳಿಗನುಸಾರವಾಗಿ ಮತ್ತು ಬಳಕೆಯಲ್ಲಿರುವಂತೆ ತುಂಬಿದ ವಿವಾಹವಿಚ್ಛೇದನಗಳು ಮತ್ತು ಮರುವಿವಾಹಗಳು ಅವರನ್ನು ಕಡಿಮೆ ನಿರ್ಧಿಷ್ಟರನ್ನಾಗಿ, ಕಡಿಮೆ ಜಾಗರೂಕರನ್ನಾಗಿ ಮಾಡಿಬಿಡುತ್ತವೆ. ಆದರೆ ನೂತನ ಸೃಷ್ಟಿಯು ತನ್ನ ವಿವಾಹ ಕರಾರು ಕರ್ತನು ಮತ್ತು ಸಭೆಗೂ ಇರುವ ಕರಾರಿಗೆ ಸರಿಸಮವಾಗಿದ್ದು ಚಿರಸ್ಥಾಯಿಯಾಗಿದೆ ಅದನ್ನು ಯಾವುದೇ ಪ್ರಾಪಂಚಿಕ ನ್ಯಾಯಾಲಯದಿಂದ ಮತ್ತಾಯ19:9ರಲ್ಲಿ ಹೇಳಿರುವ ಕಾರಣದ ಹೊರತಾಗಿ ಮತ್ತೊಂದು ವಿವಾಹವಾಗುವಂತೆ ರದ್ದುಗೊಳಿಸುವಂತಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕರ್ತನ ಜನರಿಗೆ "ಕರ್ತನಲ್ಲಿರುವುದು" ಎಂಬ ವಿವಾಹವು ಬಹು ಮಹತ್ವವುಳ್ಳ ಕರಾರಾಗಿದೆ. ಇದನ್ನು ಬಹು ಪ್ರಾರ್ಥನಾ ಪೂರ್ವಕವಾದ, ಆಲೋಚನಾಭರಿತವಾದ ಪರಿಗಣನೆಯಿಂದ ಮತ್ತು ಇದಕ್ಕೆ ಸಂಬಂಧಿಸಿದ ಎಲ್ಲಾ ಲಕ್ಷಣಗಳನ್ನೂ ಕೂಲಂಕುಶವಾಗಿ ಪರೀಕ್ಷಿಸಿ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಗ್ರಹಿಸಿಕೊಂಡ ನಂತರವೇ ಕೈಗೊಳ್ಳಬೇಕು.

ಈ ವಿಷಯದಲ್ಲಿ ನೂತನ ಸೃಷ್ಟಿಗೆ ಮತ್ತೊಂದು ರಕ್ಷಣೆಯಿದೆ. ಅವರು ದೇವರೊಡನೆ ಮಾಡಿಕೊಂಡ ಒಡಂಬಡಿಕೆಗನುಸಾರವಾಗಿ ಅವರು ತಮ್ಮ ಸ್ವಂತ ಇಚ್ಛೆಗಳನ್ನು ತ್ಯಜಿಸಿ ಅದಕ್ಕೆ ಬದಲಾಗಿ ಅವರ ಶಿರವಾದ ಕರ್ತನ ಇಚ್ಛೆಯನ್ನು ಅಂಗೀಕರಿಸಿಕೊಂಡಿದ್ದಾರೆ: ಇದು ಅವರ ಮನೋವೃತ್ತಿಯಾಗಿರುವಲ್ಲಿ – ಕ್ರಿಸ್ತನ ಇಚ್ಛೆಯನ್ನು ತಿಳಿದುಕೊಳ್ಳುವ ಒಂದು ಪ್ರಾಮಾಣಿಕ ಬಯಕೆ (ಅ) ಅವರು ಮದುವೆಯನ್ನೇ ಮಾಡಿಕೊಳ್ಳಬಾರದೋ? ಎಂಬ ಬಗ್ಗೆ (ಆ) ತಮ್ಮ ಹೆಚ್ಚಿನ ತೀರ್ಮಾನ ಮತ್ತು ವಿವೇಚನೆಯ ನಂತರ ಅವರಿಗಾಗಿ ದೇವರ ಆಯ್ಕೆಯನ್ನು ತಿಳುಕೊಳ್ಳುವ ಬಗ್ಗೆ ಇಡೀ ಸಂಗತಿಯನ್ನು ದೇವರಿಗೆ ಸಮರ್ಪಿಸುವುದು ಮತ್ತು ಆತನ ವಿವೇಕಕ್ಕೆ ತಕ್ಕಂತೆ ಅದನ್ನು ಬಿಡುವ ಬಗ್ಗೆ ಪ್ರಾರ್ಥಿಸುವುದು, ನಂತರದಲ್ಲಿ ದೇವರ ಒದಗಿಸುವಿಕೆಯು ಅನುಕೂಲವಾಗಿರಲಿ ಇಲ್ಲದಿರಲಿ ಅವುಗಳ ಬಗ್ಗೆ ತೃಪ್ತಿಪಟ್ಟುಕೊಳ್ಳುವುದು. ಈ ರೀತಿಯಲ್ಲಿ ಕರ್ತನ ಜನರು ತಾವು ಸರಿಯಾದ ಮಾರ್ಗದಲ್ಲಿದ್ದೇವೆಂದು ಖಚಿತಪಡಿಸಿಕೊಳ್ಳಬೇಕೇ ಹೊರತು ಬೇರೆ ರೀತಿಯಲ್ಲಿ ಅಲ್ಲ.

ಮೇಲಿನವುಗಳ ದೃಷ್ಟಿಕೋನದಂತೆ ನೂತನ ಸೃಷ್ಟಿಗಳು ಈ ಪ್ರಸ್ತಾಪದ ಬಗ್ಗೆ ಕರ್ತನ ಮಾತುಗಳಲ್ಲಿರುವ ಸೂಚನೆಗಳನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಳ್ಳುವುದು ಎಷ್ಟೋ ಮುಖ್ಯ; ಅವರುಗಳು ಸತ್ಯದ ನಿಜ ಚೈತನ್ಯವನ್ನು ಹೊಂದಿಕೊಳ್ಳುತ್ತಾರೆ ಮತ್ತು ತಾವು ನೂತನ ಸೃಷ್ಟಿಗಳು ಪ್ರಸ್ತುತ ಜೀವನದಲ್ಲಿ ಆನಂದಿಸಲು ಪ್ರಪಂಚದವರಂತೆ ಜೀವಿಸುವವರಲ್ಲ ದೇಹದ ಇಚ್ಛಾನುಸಾರ ಕುಟುಂಬವನ್ನು ಪಾಲಿಸುವವರಲ್ಲ ಆದರೆ ತಮ್ಮ ಉತ್ತುಂಗವಾದ ಗುರಿ, ಧ್ಯೇಯೋದ್ದೇಶ, ಪ್ರಯತ್ನ ಐಹಿಕ ಮತ್ತು ಅಧ್ಯಾತ್ಮೀಕವಾದ ಎಲ್ಲಾ ಸಂಗತಿಗಳಲ್ಲಿ ಆತ್ಮನಿಗನುಸಾರ ನಡೆದುಕೊಳ್ಳುವವರು ಎಂಬ ಸತ್ಯವನ್ನು ಸದಾ ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತಾರೆ. ತಾವು ಕರ್ತನಿಗೆ ಪ್ರತಿಷ್ಠೆಹೊಂದಿದವರು, ಕರ್ತನೊಂದಿಗೆ ಲೋಕದ ಪಾಲಿಗೆ ಸತ್ತವರು ಎಂಬ ಸತ್ಯವನ್ನು ಅವರು ಯಾವಾಗಲೂ ತಮ್ಮ ದೃಷ್ಟಿಕೋನದಲ್ಲಿ ಇಟ್ಟುಕೊಳ್ಳಬೇಕು. ಇನ್ನು ಮುಂದೆ ಅವರ ಮುಖ್ಯ ಉದ್ದೇಶ

## ನೂತನ ಸೃಷ್ಟಿಯ ದಾಂಪತ್ಯ ಮತ್ತು ಇನ್ನಿತರ ಸೌಕರ್ಯಗಳು ಹಾಗೂ ಅವಶ್ಯ ಕರ್ತವ್ಯಗಳು

ಪ್ರಸ್ತುತ ಜೀವನವನ್ನು ಮತ್ತು ಈ ಲೋಕದ ಪಾತ್ರೆಯನ್ನು ಸಾಧ್ಯವಾದಷ್ಟು ಬುದ್ಧಿವಂತಿಕೆಯಿಂದ ನೂತನ ಸೃಷ್ಟಿಯ ಹಿತಕ್ಕಾಗಿ ಮತ್ತು ಕರ್ತನನ್ನು ಸೇವಿಸುವ ಮತ್ತು ಘನಪಡಿಸುವ ಕಾರ್ಯಕ್ಕಾಗಿ ಸಮರ್ಪಿಸುವುದು ಹಾಗೂ ತಮ್ಮನ್ನೂ ತಮ್ಮಂತಹ ಅಮೂಲ್ಯ ವಿಶ್ವಾಸಿಗಳನ್ನು ಆತ್ಮೀಕ ಕೃಪೆಯಲ್ಲಿ ಬೆಳೆಸುವುದು. ವಿವಾಹಿತರು, ಅವಿವಾಹಿತರೂ ಮತ್ತು ವಿವಾಹದ ಉದ್ದೇಶವುಳ್ಳವರು ಅವರದೆಲ್ಲವನ್ನೂ ಬಲಿಪೀಠದಲ್ಲಿ ಇಡಬೇಕು ಮತ್ತು ಅವರ ವಿಜಯ ಮತ್ತು ವಾಗ್ದತ್ತವಾದ ಭವ್ಯವಾದ ಸಂಗತಿಗಳನ್ನು ಪಡಕೊಳ್ಳುವುದು ಆ ಬಲಿಯ ಸ್ವೀಕಾರದ ನಂತರವೇ ಒದಗಿ ಬರುವುದು ಎಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು. ಆದುದರಿಂದ ಪ್ರಸ್ತುತ ಜೀವಿತದ ಎಲ್ಲಾ ಸಂಗತಿಗಳೂ ತಮ್ಮ ಆತ್ಮೀಕ ಕಲ್ಯಾಣಕ್ಕಾಗಿ ಸಹೋದರರ ಕಲ್ಯಾಣಕ್ಕಾಗಿ, ಮತ್ತು ತಮ್ಮ ಶಿರವಾದ ಕರ್ತನ ಮಹಿಮಗಾಗಿ ಕ್ರಮಪಡಿಸಿಕೊಳ್ಳಬೇಕು !

******

### HE KNOWS

" He knows the way I take –
Whati matter then if dark it be,
Or rough, or hedged about –
His staff shall comfort me

" And should His love withhold
What seems so near, so dear, so sweet
I'ill humbly take this thing
And lay it at His feet.

"How sweet to know He knows,
And cares, and holds me by the hand –
Will safely guide until
I reach the Heavenly Land"

### ಆತನಿಗೆ ಗೊತ್ತು

ನಾನು ಯಾವ ಹಾದಿಯಲ್ಲಿರುವೆನೆಂದು ಆತನಿಗೆ ಗೊತ್ತು
ಅಂಧಕಾರವೋ, ಕಠೋರವೋ ಅಥವಾ
ಕಾರ್ಮೋಡವು ಕವಿದಿರಲಿ ಆತನ ಕೋಲು
ನನ್ನನ್ನು ಸಂತೈಸುವದು

ಮತ್ತು ಆತನ ಪ್ರೀತಿಗೇನಾದರೂ ತಡೆಬಂದಲ್ಲಿ,ಯಾವುದು
ಹತ್ತಿರವಾದುದು, ಪ್ರಿಯವಾದುದು, ಮಧುರವಾದುದೆಂದು ಕಂಡು
ನಾನು ವಿನೀತನಾಗಿ ಸ್ವೀಕರಿಸಿ–ಕೊಟ್ಟಿರುವುದನ್ನು
ಆತನ ಪಾದದ ಬಳಿ ಇರಿಸುವೆ

ಎಷ್ಟೋ ಆನಂದವು ಆತನು ನಮ್ಮನರಿತು, ನಿರ್ವಹಿಸಿ
ನಮ್ಮ ಕೈಹಿಡಿದು–ಸಂರಕ್ಷಿಸಿ ನಮ್ಮನ್ನು
ಮಾರ್ಗದರ್ಶನ ನೀಡುವನು, ನಾವು
ಪರಲೋಕ ರಾಜ್ಯ ಸೇರುವವರೆಗೆ